5. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಬಗ್ಗೆ ಅನೇಕ ಹಿರಿಯ ಸದಸ್ಯರು ನಿನ್ನೆ ಸಾಯಂಕಾಲದವರೆಗೆ ಮಾತನಾಡಿದ್ದಾರೆ. ಇವತ್ತು ಪ್ರತಿಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಜೆ.ಡಿ.[ಎಸ್] ಮುಖಂಡರಾದ ಕುಮಾರಸ್ವಾಮಿಯವರು ಮಾತನಾಡಿ ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಉಪಯುಕ್ತವಾದಂತಹ ಮಾಹಿತಿಯನ್ನು ನೀಡಿದ್ದಾರೆ. ಅದಕ್ಕಾಗಿ ...

[ಗೊಂದಲ]

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೊಬ್ಬರು ಮಾತ್ರ ಮಾತನಾಡಿದ್ದಾರೆ. ನೀವ್ಯಾರೂ ಮಾತನಾಡಿಲ್ಲ. ಆಯಿತು, ಅದನ್ನು correction ಮಾಡಿಕೊಳ್ಳೋಣ.

[ಗೊಂದಲ]

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾತನಾಡಿದ ಎಲ್ಲಾ ಹಿರಿಯ ಸದಸ್ಯರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇಡೀ ಬೆಳಗಾವಿಯನ್ನು ಮದುಮಗಳಂತೆ ಶೃಂಗರಿಸಿ, ಅದ್ಭುತವಾದಂತಹ ಆತಿಥ್ಯ, ಸ್ವಾಗತ ನೀಡಿದ್ದಾರೆ. ಇಡೀ ನಗರವನ್ನು ಸಾರ್ವಜನಿಕರೇ ಮುಂದೆ ಬಂದು ಅಲಂಕಾರ ಮಾಡಿ ಹಬ್ಬದ ವಾತಾವರಣವನ್ನು ತಂದಿದ್ದಾರೆ. ಇವತ್ತು ಅಧಿವೇಶನ ಮುಗಿಸಿ, ಬೆಂಗಳೂರಿಗೆ ಮತ್ತು ನಮ್ಮ ನಮ್ಮ ಕ್ಷೇತ್ರಕ್ಕೆ ಹೋಗಬೇಕಲ್ಲ ಎಂಬ ನೋವಿನೊಂದಿಗೆ ನಾನು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ಕೊಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ. ನಮ್ಮ ಸರ್ಕಾರ 'ನುಡಿದಂತೆ ನಡೆಯುವ ಸರ್ಕಾರ' ಎನ್ನುವುದನ್ನು ಕೇವಲ ಶಬ್ದಗಳಲ್ಲಿ ನಾವು ಹೇಳಿಲ್ಲ. ಇವತ್ತು ಆಶ್ವಾಸನೆ ನೀಡಿದಂತೆ, ಬೆಳಗಾವಿಯಲ್ಲಿ ಎರಡನೇ ಬಾರಿಗೆ ವಿಧಾನ ಮಂಡಲದ ಅಧಿವೇಶನ ಮಾಡುತ್ತಿದ್ದೇವೆ. ನೂತನ ಸುವರ್ಣ ಸೌಧಕ್ಕೆ ಭೂಮಿ ಪೂಜೆಯನ್ನು ಮಾಡಿದ್ದೇವೆ. ಅಷ್ಟೇ ಅಲ್ಲ, ಇನ್ನು ಒಂದೂವರೆ ವರ್ಷದೊಳಗಾಗಿ ಈ ಕಟ್ಟಡವನ್ನು ಪೂರ್ಣ ಮಾಡಿ, ಮುಂದಿನ ಅಧಿವೇಶನ ಬೆಳಗಾವಿಯಲ್ಲಿ ನಡೆಯುವುದಕ್ಕೆ ಅವಕಾಶ ಮಾಡಬೇಕು, ಈ ದಿಕ್ಕಿನಲ್ಲಿ ಅಧಿಕಾರಿಗಳು war-footing ನಲ್ಲಿ ಕಟ್ಟಡದ ಕೆಲಸವನ್ನು ಪ್ರಾರಂಭ

ಮಾಡಬೇಕೆನ್ನುವಂತಹ ಸೂಚನೆಯನ್ನು ನಾನು ಕೊಟ್ಟಿದ್ದೇನೆ. ಬಹುಶಃ ಜನತಾ ಜನಾರ್ದನನ ಆಶೀರ್ವಾದದಿಂದ ಇಬ್ಬರು ಶಾಸಕರಿದ್ದಾಗಲೂ ಈ ಮನೆಯೊಳಗಿದ್ದೆ. 30 ವರ್ಷಗಳ ಕಾಲ ಪ್ರತಿಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ಈ ನಾಡಿನ ಜನ, ನಮ್ಮ ವಿರುದ್ಧ ಅನೇಕ ರೀತಿಯ ಆರೋಪಗಳನ್ನು ನಿರಂತರವಾಗಿ ಮಾಡಿಕೊಂಡು ಬಂದ ಮೇಲೂ ಸಹ, 110 ಕ್ಷೇತ್ರಗಳಲ್ಲಿ ಗೆಲ್ಲಿಸಿ, ಮೊನ್ನೆ ಐದು ಕ್ಷೇತ್ರಗಳಲ್ಲಿ ಗೆಲ್ಲಿಸಿಕೊಟ್ಟು, ಪೂರ್ಣಾವಧಿ ಆಡಳಿತ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಸ್ವತಂತ್ರವಾಗಿ ಗೆದ್ದು ಬಂದಿರುವಂತಹ ಶಾಸಕರು ಬೆಂಬಲವನ್ನು ನೀಡಿ, ಮಂತ್ರಿಮಂಡಲದಲ್ಲಿದ್ದಾರೆ. ಹೀಗಾಗಿ ಬರುವಂತಹ ದಿವಸಗಳಲ್ಲಿ ಈ ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ, ಅತ್ಯಂತ ಪ್ರಾಮಾಣಿಕವಾಗಿ, ಜನ ಮೆಚ್ಚುವ ರೀತಿಯಲ್ಲಿ ಕೆಲಸ ಮಾಡುವಂತಹ ಪ್ರಯತ್ನ ಮಾಡುತ್ತೇವೆ, ಅದಕ್ಕೆ ಪ್ರತಿಪಕ್ಷದ ಸಹಕಾರವನ್ನು ನಾನು ಕೋರುತ್ತಿದ್ದೇನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಾಲೀಕರು, ಈ ನಾಡಿನ ಜನತೆ. ಅವರೇನು ತೀರ್ಪನ್ನು ಕೊಡುತ್ತಾರೆ, ಅದಕ್ಕೆ ತಲೆಬಾಗಬೇಕು. ನಿಮಗೆ ಬಿ.ಜೆ.ಪಿ. ಅಧಿಕಾರಕ್ಕೆ ಬರುವುದು ಬೇಡ ಎನ್ನುವ ಕಾರಣಕ್ಕಾಗಿ, ಜನ ಆಶೀರ್ವಾದ ಮಾಡಿದ ಮೇಲೂ ಸಹ, ನಾನು ಅಧಿಕಾರ ವಹಿಸಿಕೊಂಡ ದಿನದಿಂದ ಇವತ್ತಿನವರೆಗೆ ಒಂದು ರೀತಿ ಎಲ್ಲಾ ಸಂದರ್ಭದಲ್ಲೂ ವಿರೋಧವನ್ನು ಮಾಡಿಕೊಂಡು ಬಂದಿರಿ, ಸಂತೋಷ. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ನಾಡಿನ ನೆಲ, ಜಲ, ಭಾಷೆ ಪ್ರಶ್ನೆ ಬಂದಾಗ ನಾವು ಒಟ್ಟಾಗಿ 30 ವರ್ಷಗಳ ಕಾಲ ವಿರೋಧ ಪಕ್ಷದಲ್ಲಿದ್ದಾಗ ಸಹಕಾರವನ್ನು ಕೊಟ್ಟಿದ್ದೆವು. ಅದನ್ನು ನಿಮ್ಮಿಂದ ನಾವು ನಿರೀಕ್ಷಣೆ ಮಾಡಿದೆವು. ಅದು ಸಿಗಲಿಲ್ಲ. ಆ ನೋವು ನಮ್ಮಲ್ಲಿದೆ. ಬಹುಶಃ ಈ ಬೆಳಗಾವಿ ಅಧಿವೇಶನದಿಂದ ಎಲ್ಲಾ ಕಹಿಯನ್ನೂ ಮರೆತು ಮುಂದೆ ಬರುವಂತಹ ದಿವಸಗಳಲ್ಲಿ ನಾವೆಲ್ಲಾ ಒಟ್ಟಾಗಿ ಈ ನಾಡಿನ ಅಭಿವೃದ್ಧಿಗಾಗಿ ಶ್ರಮಿಸೋಣ. ನೀವು ಸಲಹೆ ಕೊಡಿ, ಮಾರ್ಗದರ್ಶನ ಮಾಡಿ, ಆ ಅನುಭವ ನಿಮಗಿದೆ. ಅದೆಲ್ಲವನ್ನೂ ತೆಗೆದುಕೊಂಡು ಒಂದು ಬದಲಾವಣೆಯನ್ನು ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆಂಬ ಭರವಸೆಯನ್ನು ಈ ನಾಡಿನ ಜನರಿಗೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಗಣಿಗಾರಿಕೆ ವಿಚಾರ ಬೆಂಗಳೂರಿನಲ್ಲಿ ಚರ್ಚಿಸಿದ್ದೇವೆ, ಬೆಳಗಾವಿಯಲ್ಲೂ ಚರ್ಚಿಸಿದ್ದೇವೆ. ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆ ಚರ್ಚೆಗೆ ಅವಕಾಶ ಕೊಡಲಿಲ್ಲ ಎನ್ನುವ ಭಾವನೆ ಪಕ್ಷಬೇಧ ಮರೆತು ಇಲ್ಲಿರುವಂತಹ ಶಾಸಕರು ಮತ್ತು ಜನತೆಗಿದೆ. ಮುಂದಾದರೂ ಈ ರೀತಿಯ ಘಟನಾವಳಿಗಳು ಆಗದಂತೆ, ನಾವು ಮತ್ತು ನೀವೆಲ್ಲಾ ಒಟ್ಟಾಗಿ ಜನರ ನಿರೀಕಯಂತೆ

ಕೆಲಸ ಮಾಡೋಣ. ಈ ಸಂದರ್ಭದಲ್ಲಿ ಬೇರೆ ಬೇರೆ ಕಾರಣಕ್ಕಾಗಿ ಕಾಲಹರಣವಾಯಿತು. ಅದಕ್ಕೆ ನಿಮಗೆ ಅಧಿಕಾರವಿದೆ. ಆದರೆ ನೀವು ಮತ್ತು ನಾವು ಒಟ್ಟಾಗಿ ಇನ್ನೂ ಹೆಚ್ಚು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಚರ್ಚೆಯಾಗಬೇಕಾದ ಈ ಸಂದರ್ಭದಲ್ಲಿ ಆತ್ಮಾವಲೋಕನ ಮಾಡಿಕೊಳ್ಳೋಣ, ಇದು ಹೇಗೆ ಸರಿ? ಹೇಗೆ ತಪ್ಪು? ಜನ ಏನು ಅಂದುಕೊಳ್ಳುತ್ತಿದ್ದಾರೆ? ಈ ಬಗ್ಗೆ ಎಲ್ಲರೂ ಒಟ್ಟಾಗಿ ಚಿಂತನೆ ಮಾಡಬೇಕು. 15 ವಿಧೇಯಕಗಳು ಮಂಡನೆಗೊಂಡಿವೆ. ಕೆಲವಕ್ಕೆ ಅಂಗೀಕಾರವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ನಾನು ಪ್ರತಿಪಕ್ಷದ ನಾಯಕರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ರಾಷ್ಟ್ರ ಕವಿ ಕುವೆಂಪು ಸಾರಿದಂತೆ, ನಮ್ಮ ಕರ್ನಾಟಕ ಮಾತೆ, ಭಾರತ ಜನನಿಯ ತನುಜಾತೆ ಆಗಿದ್ದಾಳೆ. ನಾವೆಲ್ಲಾ ಮೊದಲು ಭಾರತೀಯರು, ನಂತರ ಭಾಷೆ ಮತ್ತೊಂದು. ಭಾಷೆ, ಭಾಷೆಗಳ ಮಧ್ಯೆ ವಿರಸ ತಂದು, ಗೊಂದಲವನ್ನು ಉಂಟು ಮಾಡುವಂತಹ ಪ್ರಯತ್ನ ಈ ಭಾಗದಲ್ಲಿ ನಡೆದಿದೆ. ಇದು ಸರಿಯಲ್ಲ. ಕನ್ನಡ ಮತ್ತು ಮರಾಠಿ ಮಾತನಾಡುವಂತಹ ಜನ ಅನ್ಯೋನ್ಯತೆಯಿಂದ ಒಂದೇ ತಾಯಿಯ ಮಕ್ಕಳಂತೆ ಬಾಳುತ್ತಿದ್ದಾರೆ. ಇಲ್ಲಿ ದ್ವೇಷದ ವಿಷ ಬೀಜವನ್ನು ಬಿತ್ತುವಂತಹ ಪ್ರಯತ್ನ ಕೆಲವರು ಮಾಡಿದರೂ, ಅದಕ್ಕೆ ಕಿವಿಗೊಡಬಾರದು ಎನ್ನುವಂತಹ ಮಾತನ್ನು ಹೇಳುತ್ತೇನೆ. ನಮ್ಮ ಸರ್ಕಾರ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಮತ್ತು ಎಲ್ಲಾ ಭಾಷಿಕರಿಗೆ ರಕ್ಷಣೆ ಕೊಡುವುದಕ್ಕೆ, ಅಭಿವೃದ್ಧಿಗೆ ಬದ್ಧವಾಗಿದೆ. ಸಾಮರಸ್ಯ ಮತ್ತು ಸಮನ್ವಯದ ಬಾಳ್ವೆ ಬಾಳಬೇಕೆಂದು ನಮ್ಮ ಸರ್ಕಾರದ ಅಪೇಕ್ಷೆ ಇದೆ. ಮಹಾತ್ಮ ಗಾಂಧೀಜಿಯವರು ಹೇಳಿದಂತೆ, ಕಟ್ಟ ಕಡೆಯ ಮನುಷ್ಯನ ಕಣ್ಣೀರನ್ನು ಒರೆಸುವಂತಹ ಪ್ರಾಮಾಣಿಕ ಪ್ರಯತ್ನದಲ್ಲಿ ಮಾನ್ಯ ಕುಮಾರಸ್ವಾಮಿಯವರೇನು ಒಂದೆರಡು ಉದಾಹರಣೆಗಳನ್ನು ಕೊಟ್ಟರೋ, ಅದನ್ನು ನಾನು ಒಪ್ಪುತ್ತೇನೆ. ಆ ದಯನೀಯ ಸ್ಥಿತಿಯಿಂದ ಅವರನ್ನು ಹೊರತಂದು, ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಮಾಡಿ, ಕೈಚಾಚಿ ಬೇಡದೆ, ಕೈಚಾಚಿ ಕೊಡುವಂತಹ ಶಕ್ತಿ ಅವನಲ್ಲಿ ಬರುವಂತೆ ಮಾಡುವುದಕ್ಕೆ ಒಂದಷ್ಟು ಪ್ರಯತ್ನ ಮಾಡಿದ್ದೇವೆ. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಅನೇಕರು, ಈ ನಾಡನ್ನು ಕಟ್ಟುವುದಕ್ಕೆ ಅವರದೇ ಆದಂತಹ ಬೆವರು ಸುರಿಸಿದ್ದಾರೆ, ಕೊಡುಗೆಯನ್ನು ಕೊಟ್ಟಿದ್ದಾರೆ.

ಅವರ ಬಗ್ಗೆ ಹಗುರವಾಗಿ ನಾನು ಮಾತನಾಡುತ್ತಿದ್ದೇನೆಂದು ತಿಳಿದುಕೊಳ್ಳಬಾರದು. ಒಟ್ಟಾರೆ ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ಕೂಡ ವಿಶೇಷವಾಗಿ ಕರ್ನಾಟಕದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಮಾಡಬಹುದಾಗಿತ್ತು, ಅದಾಗಲಿಲ್ಲವೆನ್ನುವ ನೋವಿದೆ ಎನ್ನುವ ಮಾತನ್ನು ನಾನು

ಪದೇ ಪದೇ ಹೇಳಿದ್ದೇನೆಯೆ ವಿನಾ ಅದಕ್ಕಿಂತ ಹೆಚ್ಚು ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ನಮ್ಮ ಸರ್ಕಾರ ದಲಿತರು, ರೈತರು, ಶೋಷಿತರು, ಮಹಿಳೆಯರು, ವೃದ್ಧರು, ಅಂಗವಿಕಲರು, ಶ್ರೀಸಾಮಾನ್ಯನಿಗೆ ನೆಮ್ಮದಿಯಿಂದ ಬದುಕುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ನಾವು ಕಳೆದ ಆಯವ್ಯಯದಲ್ಲಿ ಘೋಷಣೆ ಮಾಡಿದ ಕಾರ್ಯಕ್ರಮಗಳಲ್ಲಿ 100ಕ್ಕೆ 90 ರಷ್ಟು ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತಂದು ಫಲಾನುಭವಿಗಳಿಗೆ ಆ ಸೌಲತ್ತುಗಳನ್ನು ಒದಗಿಸುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ ಎಂದು ಅಂಕಿ ಅಂಶಗಳೊಂದಿಗೆ ಈ ಮನೆಗೆ ನಾನು ವಿವರವನ್ನು ಕೊಡುವುದಕ್ಕೆ ಸಿದ್ದನಿದ್ದೇನೆ. ನಾನು ಹಣಕಾಸಿನ ವಿಷಯದ ಬಗ್ಗೆ ನಾನು ಆಮೇಲೆ ನಾನು ಮಾತನಾಡುತ್ತೇನೆ. ಇವತ್ತು ಈ ದೇಶದಲ್ಲಿ ಯಾವುದೇ ಸರ್ಕಾರ ಪ್ರತಿ ನೂರು ದಿವಸಕ್ಕೊಮ್ಮೆ ರಾಜ್ಯದ ಪ್ರಗತಿಯ ವಾಸ್ತವಿಕ ಚಿತ್ರಣವನ್ನು ತಿಳಿಸುವಂಥ ಪ್ರಯತ್ನವನ್ನು ಮಾಡಿರಲಿಲ್ಲ, ನನಗೆ ನೆನಪಿರುವಂತೆ ಮೂವತ್ತು ವರ್ಷದಲ್ಲಿ ನಾನೇ ನಿರ್ಧಾರ ಮಾಡಿದೆ, ಅದರಲ್ಲಿ ಲೋಪದೋಷಗಳಿರಬಹುದು. ಅದಕ್ಕೆ ನಾವು ನೀವು ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ಪ್ರಗತಿಯ ಚಿತ್ರಣವನ್ನು ಜನತೆಯ ಮುಂದಿಟ್ಟಾಗ, ನಾವು ಜನತೆಯ ಸೇವೆ ಮಾಡುವುದಕ್ಕಿರುವ ಜನ, ಅವರು ನಮ್ಮ ಮಾಲೀಕರೆನ್ನುವ ಅರಿವು ರಾಜಕಾರಣಿಗಳಿಗೂ ಬರಬೇಕು ಆಡಳಿತ ನಡೆಸುವ ವರಿಗೂ ಬರಬೇಕು, ಅಧಿಕಾರಿಗಳಿಗೂ ಬರಬೇಕು. ಈ ವ್ಯವಸ್ಥೆ ಇರುವುದು ಜನ ಹಿತಕ್ಕಾಗಿ. ಆ ದೃಷ್ಟಿಯಿಂದ ಈ ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಂಡು ನಿಮ್ಮ ಮುಂದು ಅಂಕಿ ಅಂಶಗಳನ್ನು ಇಡುವ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ. ಇವತ್ತು ನೇರವಾಗಿ ವಿಷಯಕ್ಕೆ ಬರುವುದಾದರೆ, ಹಣಕಾಸಿನ ವಿಷಯದ ಬಗ್ಗೆ ಇಲ್ಲಿ ಚರ್ಚೆಯಾಯಿತು. ನಾನು ಕಳೆದ ಆಯವ್ಯಯದಲ್ಲಿ ಘೋಷಿಸಿದಂಥ ಎಲ್ಲಾ ಯೋಜನೆಗಳು ಪ್ರಗತಿಯಲ್ಲಿವೆ. ಕಳೆದ ವರ್ಷಕ್ಕಿಂತ ಈ ವರ್ಷ 1,767 ಕೋಟಿ ರೂಪಿಗಳು ಅಂದರೆ, 23 % ಹೆಚ್ಚು ಹಣ ಖರ್ಚು ಮಾಡಿದ್ದೇವೆ. ಯೋಜನೆಗಳಿಗೆ 2007ರವರೆಗೆ ಡಿಸೆಂಬರ್‌ವರೆಗೆ ಯೋಜನಾ ವೆಚ್ಚ 7,721 ಕೋಟಿ ರೂಪಾಯಿಗಳು ಖರ್ಚಾಗಿದ್ದರೆ 2008 ಡಿಸೆಂಬರ್‌ವರೆಗೆ 9524 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮ್ಮ ಯೋಜನೆಗಳನ್ನು ಜನತೆಗೆ ತಲುಪಿಸಬೇಕೆನ್ನುವ ಉದ್ದೇಶದಿಂದ ನಾವು ಈ ಕೆಲಸವನ್ನು ಮಾಡಿದ್ದೇವೆ. ಜಾಗತಿಕ ಮತ್ತು ರಾಷ್ಟ್ರ ಮಟ್ಟದಲ್ಲಿ ಆರ್ಥಿಕ ಹಿನ್ನಡೆ ಇದ್ದರೂ ಸಹ ಈ ವರ್ಷ ಕಳೆದ ವರ್ಷಕ್ಕಿಂತ 2375 ಕೋಟಿ ರೂ. ಅಂದರೆ, 13% ಹೆಚ್ಚು ತೆರಿಗೆ ಸಂಗ್ರಹವನ್ನು ನಾವು ಮಾಡಿದ್ದೇವೆ.

ವಾಣಿಜ್ಯ, ಅಬಕಾರಿ ಹಾಗೂ ವಾಹನಗಳ ತೆರಿಗೆ ಸಂಗ್ರಹ ಡಿಸೆಂಬರ್ 2007ಕ್ಕೆ 18,732 ಕೋಟಿಗಳನ್ನು ರೂ.ಗಳನ್ನು ಕಳೆದ ವರ್ಷ ಸಂಗ್ರಹ ಮಾಡಿದ್ದರೆ, ಈ ವರ್ಷ 2008 ಡಿಸೆಂಬರ್ ಅಂತ್ಯದವರೆಗೆ 21,107 ಕೋಟಿ ರೂಪಾಯಿಗಳನ್ನು ನಾವು ಸಂಗ್ರಹ ಮಾಡಿದ್ದೇವೆ. ನಿಮಗೆ ಗೊತ್ತಿದೆ. ಪ್ರಾಮಾಣಿಕವಾಗಿ ನಮ್ಮ ಆಯವ್ಯಯವನ್ನು ಮಂಡನೆ ಮಾಡುವುದಕ್ಕೆ ವಿಶೇಷ ರಾಜಕೀಯ ಪರಿಸ್ಥಿತಿಯ ಕಾರಣ 4 ತಿಂಗಳು ವಿಳಂಬವಾಗಿ 2008 ಜುಲೈ 31ಕ್ಕೆ ಅನುಮೋದನೆಯನ್ನು ತಾವು ಮಾಡಿಕೊಟ್ಟಿರಿ. ಮತ್ತೆ ನವೆಂಬರ್-ಡಿಸೆಂಬರ್ ನಲ್ಲಿ ನಡೆದ ಚುನಾವಣೆಯಲ್ಲಿ ಸುಮಾರು 40-45 ಜನ ಉನ್ನತ ಅಧಿಕಾರಿಗಳು ವೀಕ್ಷಕರಾಗಿ ಹೊರರಾಜ್ಯಗಳ ಚುನಾವಣೆಗೆ ಹೋದರು. ಇದಾದ ಮೇಲೆ ರಾಜ್ಯದ 6 ಜಿಲ್ಲೆಗಳ ಈ 8 ವಿಧಾನ ಸಭಾ ಚುನಾವಣೆಯಾದ್ದರಿಂದ ಆ ಜಿಲ್ಲೆಗಳಲ್ಲಿ ಪ್ರಗತಿ ಕುಂಠಿತವಾಯಿತು. ಈ ಎಲ್ಲಾ ಸಮಸ್ಯೆಗಳ ಮಧ್ಯೆಯು ಸಹ ಡಿಸೆಂಬರ್ ಅಂತ್ಯದವರೆಗೆ ತೃಪ್ತಿಕರವಾದ ಒಂದು ಸಾಧನೆಯನ್ನು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಮಾಡಿದ್ದೇವೆ ಎನ್ನುವ ಒಂದು ಸಮಾಧಾನ ನನಗಿದೆ. ಇವತ್ತು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಹಳಷ್ಟು ಹಿಂದುಳಿದ ಕ್ಷೇತ್ರಗಳಿಗೆ ಡಾ॥ ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸುವ ಪ್ರಯತ್ನವನ್ನು ನಾವು ಮಾಡಿದ್ದೇವೆ, ಅದಕ್ಕಾಗಿ ಒಬ್ಬ ಅಧ್ಯಕ್ಷರನ್ನು ನೇಮಕ ಮಾಡಿದ್ದೇವೆ.

[ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು].

ನಾವು ನೀವೆಲ್ಲಾ ಕುಳಿತು ಇದಕ್ಕೇನು ಹಣವನ್ನು ತೆಗೆದಿಟ್ಟಿದ್ದೇವೆ, ಆ ಪೂರ್ತಿ ಹಣ ಖರ್ಚಾಗಬೇಕು, ಪ್ರಗತಿಯತ್ತ ದಾಪುಗಾಲು ಹಾಕಬೇಕೆನ್ನುವ ದೃಷ್ಟಿಯಿಂದ ನಿವೇನು ಸಲಹೆಗಳನ್ನು ಕೊಡುತ್ತೀರಾ, ಅದನ್ನು ಮನವರಿಕೆ ಮಾಡಿಕೊಂಡು ಅನುಷ್ಠಾನಗೊಳಿಸುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ. ಡಾ॥ ನಂಜುಂಡಪ್ಪ ವರದಿಯಂತೆ ಹಿಂದುಳಿದ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ 2007-8ರಲ್ಲಿ 1,577 ಕೋಟಿ ರೂ. ತೆಗೆದಿಟ್ಟಿದ್ದರೆ, ಆದರೆ ಈ ವರ್ಷ 2,547 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ, ಆ ದಿಕ್ಕಿನಲ್ಲಿ ಪ್ರಾಮಾನಿಕ ಪ್ರಯತ್ನವನ್ನು ಮಾಡಿದ್ದೇವೆ. ಏನು ಪ್ರಗತಿಯಾಗಿದೆ? ಬಡವರಿಗೆ ಏನು ಸೌಲತ್ತುಗಳು ಸಿಕ್ಕಿವೆ? ಎಂದು ನಮ್ಮ ಸ್ನೇಹಿತರು ಬಹಳ ಸಾರಿ ಮಾತನಾಡುತ್ತಾರೆ. ಆದರೆ ಇವತ್ತು 3% ಬಡ್ಡಿಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಾಲವನ್ನು ನಾವು ಕೊಟ್ಟಿದ್ದೇವೆ. ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಹೀಗೆ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಮುಂದಿನ ವರ್ಷನೂ ಸಹ ನಮ್ಮ ಅಭಿವೃದ್ಧಿಯ

ಕೇಂದ್ರ ಬಿಂದುವಾಗಿರುವುದು ನಮ್ಮ ರೈತ. ನಮಗೆ ಈ ದಿಶೆಯಲ್ಲಿ ನಮಗೆ ಮಾರ್ಗದರ್ಶನ ಮಾಡಲು ಕೃಷಿತಜ್ಞರ ನೇತೃತ್ವದಲ್ಲಿ ಕೃಷಿ ಮಿಷನ್ ಅನ್ನು ರಚನೆ ಮಾಡಿದ್ದೇವೆ. ಇವರು ನೀಡುವ ವರದಿಯ ಆಧಾರದ ಮೇಲೆ ಮಿಷನ್ 2020 ಶಿಫಾರಸ್ಸನ್ನು ಆಧರಿಸಿ ಮುಂದಿನ ಆಯವ್ಯಯದಲ್ಲಿ ಸೂಕ್ತ ಕಾರ್ಯಕ್ರಮವನ್ನು ರೂಪಿಸುತ್ತೇವೆ. ನಾನು ಒಂದು ಮಾತನ್ನು ಅತ್ಯಂತ ವಿನಯದಿಂದ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಅಭಿವೃದ್ಧಿಗೆ ಕಂಟಕವಾಗಿರುವುದು ವಿದ್ಯುತ್ ಅಭಾವ. ನೀವು ಏನೂ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಮಾಡಬೇಕಾದಷ್ಟು ಮಾಡಲಿಲ್ಲವೆಂಬುದು ಜನರ ಭಾವನೆಯಾಗಿದೆ. ಅದಕ್ಕಾಗಿ ಅಭಿವೃದ್ಧಿಗೆ ತೊಂದರೆಯಾಗಿದೆ. ನಾನೇನು ಮಾಡಿದ್ದೇನೆ, ಸ್ವಾಮಿ? ಈ ಸಂಕಷ್ಟದಿಂದ ಹೊರಬರುವುದಕ್ಕೆ ಕೇವಲ 7 ತಿಂಗಳಲ್ಲಿ 1200 ಮೆ.ವ್ಯಾ. ಸೇರಿ ಒಟ್ಟು 2400 ಮೆ.ವ್ಯಾ. ಉಷ್ಣಸ್ಥಾವರವನ್ನು ಸ್ಥಾಪಿಸುವುದಕ್ಕೆ ಪ್ರಥಮ ಬಾರಿಗೆ ಛತ್ತೀಸಘಡಕ್ಕೆ ಹೋಗಿ ನಾವು ಒಪ್ಪಂದ ಮಾಡಿಕೊಂಡು ಅಲ್ಲಿ ಕೆಪಿಸಿಎಲ್ ಕಚೇರಿಯನ್ನು ತೆರೆದು 1200 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆ. ಇವತ್ತು ಕೂಡ ನಾನು ಛತ್ತೀಸಘಡದ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ, ಫೆಬ್ರವರಿ ಅಥವಾ ಮಾರ್ಚ್ ಮೊದಲನೆ ವಾರದಲ್ಲಿ ನಾವು ಅಲ್ಲಿಗೆ ಹೋಗಿ ಆ ಜಮೀನನ್ನು ಪೂರ್ಣ ನಮ್ಮ ವಶಕ್ಕೆ ತೆಗೆದುಕೊಂಡು ಆ ಕೆಲಸವನ್ನು ಸಹ ಪ್ರಾರಂಭ ಮಾಡುತ್ತಿದ್ದೇವೆ, ಆ ದಿಕ್ಕಿನಲ್ಲಿ ಪ್ರಯತ್ನ ನಡೆದಿದೆ. 2 ವಾರಗಳ ಹಿಂದೆಯಷ್ಟೆ ಬಿಜಾಪುರದ ಕೂಡಗಿಯಲ್ಲಿ 4000 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ NTPC ಜೊತೆ ಮತ್ತು ರಾಯಚೂರು ಜಿಲ್ಲೆಯಲ್ಲಿ 2400 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ BHEL ಜೊತೆ ಒಡಂಬಡಿಕೆ ಮಾಡಿಕೊಂಡಿದ್ದೇವೆ. ಜೊತೆಗೆ 500 ಮೆ.ವ್ಯಾ ವಿದ್ಯುತ್ ಸಾಮರ್ಥ್ಯದ ಪವನ್ ವಿದ್ಯುತ್ ಸ್ಥಾವರ ಸ್ಥಾಪನೆಗೆ NTPCಗೆ ಅನುಮೋದನೆಯನ್ನು ನಾವು ನೀಡಿದ್ದೇವೆ. ಖಾಸಗಿ ಮತ್ತು ಕೆಪಿಸಿಎಲ್ ಯೋಜನೆಗಳು ಸೇರಿ ಒಟ್ಟು 13000 ಮೆ.ವ್ಯಾ.ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಅನುಮೋದನೆಯನ್ನು ನೀಡಿದ್ದೇವೆ. ಚುನಾವಣೆ ಸಂದರ್ಭದಲ್ಲಿ ಆಯವ್ಯಯದಲ್ಲಿ ಭಾಷಣದಲ್ಲಿ ನಾನು ಪ್ರಾರಂಭದಲ್ಲೇ ಒಂದು ಮಾತನ್ನು ಹೇಳಿದ್ದೇನೆ. At any cost ನಾವು ನಮ್ಮ ಅವಧಿಯನ್ನು ಪೂರ್ಣಗೊಳಿಸುವುದರೊಳಗಾಗಿ 5000 ಮೆ.ವ್ಯಾ. ವಿದ್ಯುತ್ ಅನ್ನು ನಾವು ಸೇರಿಸುತ್ತೇವೆ. ಈ ಕತ್ತಲೆಯಿಂದ ಬೆಳಕಿನತ್ತ ತೆಗೆದುಕೊಂಡು ಹೋಗುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ, ಅದಕ್ಕಿಂತ ಹೆಚ್ಚಾಗಬಹುದೇ ಹೊರತು

ಕಡಿಮೆಯಾಗುವುದಿಲ್ಲ. ಈ ಒಂದು ಪ್ರಾಮಾಣಿಕ ಪ್ರಯತ್ನ ನಡೆದಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ರಾಜ್ಯದ, ದೇಶದ ಅಭಿವೃದ್ಧಿ ಕಾಣುವುದು ರಸ್ತೆಗಳ ಸ್ಥಿತಿಯ ಮೇಲೆ. ಸ್ವಾತಂತ್ರ್ಯ ಬಂದು 60 ವರ್ಷಗಳಾಯಿತು. ಕರ್ನಾಟಕದಲ್ಲಿ ಅದು ಯಾವುದೇ ರಸ್ತೆಗಳಿರಬಹುದು, ಅಕ್ಕಪಕ್ಕ ಗಡಿಯನ್ನು ದಾಟುತ್ತಿದ್ದಂತೆ ಬೇರೆ ರಾಜ್ಯಗಳ ರಸ್ತೆ ಹೇಗಿವೆ, ನಮ್ಮ ರಸ್ತೆಗಳು ಹೇಗಿವೆ? ಎಂಬುದನ್ನು ಆ ಇಲಾಖೆಯನ್ನು ವಹಿಸಿಕೊಂಡಿದ್ದವರು, ಆಡಳಿತ ನಡೆಸಿದವರು ಚಿಂತನೆಯನ್ನು ಮಾಡಬೇಕಾಗಿದೆ. ಅದಕ್ಕಾಗಿ ನಮ್ಮ ರಾಜ್ಯದ ಬೊಕ್ಕಸದಿಂದ ಅದೆಲ್ಲವನ್ನೂ ಮಾಡಿವುದಕ್ಕಾಗುವುದಿಲ್ಲವೆಂದು ಇವತ್ತು ಸುಮಾರು 66000 ಕಿ.ಮೀ.ರಸ್ತೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ ಒಂದು ಸಮಗ್ರ ಯೋಜನೆಯನ್ನು ನಾವು ಮಾಡಿದ್ದೇವೆ. ಮೊದಲನೆ ಹಂತದಲ್ಲಿ ಸಾಧ್ಯವಾದರೆ ಫೆಬ್ರವರಿ ಕೊನೆಯೊಳಗಾಗಿ 10,000 ಕಿ.ಮೀ ರಸ್ತೆಗಳ ಅಭಿವೃದ್ಧಿಯನ್ನು ತೆಗೆದುಕೊಳ್ಳುವುದಕ್ಕೆ ನಾವು ಮುಂದಿನ ವಾರದಲ್ಲೆ ಆ ಪ್ರಕಿಯೆಯನ್ನು ನಾವು ಆರಂಭ ಮಾಡುತ್ತಿದ್ದೇವೆ, ಅದರಲ್ಲಿ 5,500 ಕಿ.ಮೀ.ರಸ್ತೆಗಳನ್ನು ಯಾವುದು ಹಿಂದುಳಿದ ಪ್ರದೇಶಗಳಾದ ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಈ ಭಾಗದಲ್ಲಿ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕೆಂದು ನಾವು ಚಿಂತನೆಯನ್ನು ಮಾಡಿದ್ದೇವೆ. ಯಾರು ಬೇಕಾದರೂ ಹಗುರವಾಗಿ ಮಾತನಾಡಬಹುದು, 'ಸರ್ವರಿಗು ಸಮಬಾಳು', ಈ ಮಾತು ಕೇವಲ ಘೋಷಣೆಯ ವಾಕ್ಯವಾಗಿತ್ತು.

ನಾನು ನಿಮಗೆ ಕೇಳುತ್ತೇನೆ, ಭಾಗ್ಯಲಕ್ಷ್ಮಿ ಯೋಜನೆ ಈ ದೇಶದ ಇತಿಹಾಸದಲ್ಲಿ ಯಾರೂ ಚಿಂತನೆ ಮಾಡಿರಲಿಲ್ಲ. ನಮ್ಮ ಕೂಲಿ ಮಾಡುವ ಮಕ್ಕಳು ಯಾವುದೇ ಜನಾಂಗದವರು ಇರಲಿ, ಅವರು ಶಿಕ್ಷಣವನ್ನು ಪಡೆಯಬೇಕು. ಪದವಿಯನ್ನು ಪಡೆಯಬೇಕು. ಆರ್ಥಿಕವಾಗಿ ಅವರ ಕಾಲ ಮೇಲೆ ನಿಲ್ಲಬೇಕು. ಆ ಹಿನ್ನೆಲೆಯಲ್ಲಿ ಇವತ್ತು ಒಂದು ಲಕ್ಷ ರೂಪಾಯಿ ತಲುಪುವಂತಹ ಆ ಯೋಜನೆಯನ್ನು ನಾವು ರೂಪಿಸಿದ್ದೇವೆ. ಇದು ನಿಜವಾಗಿಯೂ ಜನ ಮೆಚ್ಚುತ್ತಿದ್ದಾರೆ. ಇದು 10 ವರ್ಷಗಳ ಮುಂಚೆ ಆಗಿದ್ದರೆ 20 ವರ್ಷದ ಮುಂಚೆ ಆಗಿದ್ದರೆ, ಅದು ಎಷ್ಟು ಲಕ್ಷ ಕೂಲಿಕಾರ್ಮಿಕ ದೀನದಲಿತ ಹೆಣ್ಣುಮಕ್ಕಳಿಗೆ ಶಿಕ್ಷಣಕ್ಕೆ ಅವಕಾಶವಾಗುತ್ತಿತ್ತು. ನನ್ನ ಆಸೆ ಇದೇ. ನಾಲ್ಕುವರೆ ವರ್ಷದ ಒಳಗಾಗಿ 90% ಆದರೂ ನಮ್ಮ ಹೆಣ್ಣುಮಕ್ಕಳು ಶಿಕ್ಷಣವನ್ನು ಪಡೆಯಲೇಬೇಕು. ಆ ಒಂದು ಆತ್ಮ ವಿಶ್ವಾಸವನ್ನು, ಸ್ಥೈರ್ಯವನ್ನು ಮೂಡಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ. ಇವತ್ತು ಟೀಕೆಗಳು ಆದವು. ಭಯೋತ್ಪಾದನೆ ವಿರುದ್ಧ

ಅಭಿಯಾನಕ್ಕೆ ಸರ್ಕಾರ ಹಣ ವ್ಯಯ ಮಾಡುತ್ತಿದೆ. ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸೇರಿಸುತ್ತಿದ್ದಾರೆ. ಬಹಳ ದೂರ ಬೇಡ. ನಿನ್ನೆಯ ಬೆಳಗಾವಿಯ ಉದಾಹರಣೆ ಹೇಳುತ್ತೇನೆ. ಬೆಳಿಗ್ಗೆ 9 ಗಂಟೆಗೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬರುವುದಕ್ಕೆ ಪ್ರಾರಂಭವಾಯಿತು. ನಾನು ಅಧಿವೇಶನ ಮುಗಿಸಿ ಅಲ್ಲಿಗೆ ಹೋದಾಗ ಒಂದೂ ಮುಕ್ಕಾಲು ಗಂಟೆ. ಸಮಾರು 25 ರಿಂದ 30 ಸಾವಿರ ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದ್ದರು. ಒಂದು ಶಬ್ದ ರಾಜಕಾರಣ ಮಾಡಲಿಲ್ಲ. ನಾನು ಅವರಿಗೆ ಹೇಳುವುದು ಒಂದೇ, ಹಿಂದೆ ಈ ನಾಡನ್ನು ಕಟ್ಟಿದಂತಹವರು ದೇಶಕ್ಕಾಗಿ ಬದುಕಿದರು. ಸ್ವಾತಂತ್ರ್ಯ ಬಂದ ಮೇಲೆ ದೇಶ ಇರುವುದೇ ನಮಗಾಗಿ ಎಂದು ಯೋಚನೆ ಮಾಡುವ ಜನ ಎಲ್ಲಾ ಕ್ಷೇತ್ರಗಳಲ್ಲಿ ಜಾಸ್ತಿ ಆದರು. ಇವತ್ತು ಈ ಭಯೋತ್ಪಾದನೆ ಅಡಗಬೇಕೆಂದರೆ, ಮತಾಂತರ ನಿಲ್ಲಬೇಕೆಂದರೆ, ಭ್ರಷ್ಟಾಚಾರ ನಿಲ್ಲಬೇಕೆಂದರೆ, ಯುವ ಸಮೂಹ ಬೀದಿಗಿಳಿಯಬೇಕು, ಧುಮುಕಬೇಕು, ಸಂಕಲ್ಪ ಮಾಡಬೇಕು ಎನ್ನುವ ಮಾತನ್ನು ನಾನು ಹೇಳಿದಾಗ, ದೇಶ ಭಕ್ತಿಯ ಶಬ್ದವನ್ನು ಕೇಳಿದಾಗ, ಸುಬಾಶ್ ಚಂದ್ರ ಬೋಸ್‌ರವರ ಹೆಸರನ್ನು ಕೇಳಿದಾಗ, ಸ್ವಾಮಿ ವಿವೇಕಾನಂದರ ಹೆಸರನ್ನು ಕೇಳಿದಾಗ, ಆ ಯುವಕರ ಉತ್ಸಾಹವನ್ನು ನೋಡಿದಾಗ, ನನಗನ್ನಿಸುತ್ತದೆ, 21ನೇ ಶತಮಾನ ನಿಶ್ಚಿತವಾಗಿ ಭಾರತೀಯರ ಶತಮಾನ. 20 ನೇ ಶತಮಾನ ಪಾಶ್ಚಾತ್ಯರ ಶತಮಾನ ಎಂದು ಕೇಳುತ್ತಿದ್ದೇವೆ. 21 ನೇ ಶತಮಾನ ಭಾರತೀಯರ ಶತಮಾನ ಆಗುತ್ತದೆ. ಇಡೀ ಜಗತ್ತು ಭಾರತದ ಕಡೆ ನೋಡುತ್ತಿದೆ. ಆ ಹೆಗ್ಗಳಿಕೆ ನಿಮಗೆ ಸಿಗಬೇಕು. ನೀವು ಅದನ್ನು ಸಾಧನೆ ಮಾಡಬೇಕು. ಕೇವಲ ಹಿಡಿಯಷ್ಟು ರಾಜಕಾರಣಿಗಳಿಂದ ಅದು ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ಅತ್ಯಂತ ವಿನಯದಿಂದ ಆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮುಂದೆ ನಾನು ಹೇಳಿದ್ದೇನೆ. ಇವತ್ತು ಪೊಲೀಸ್ ಇಲಾಖೆಗ ಅಗತ್ಯವಿರುವಂಥದ್ದು. NSG ಘಟಕ ಎಷ್ಟು ಅಗತ್ಯ ಇದೆ, ನಾನು ಮಾನ್ಯ ಪ್ರತಿ ಪಕ್ಷದ ನಾಯಕರಲ್ಲಿ ಒಂದೇ ವಿನಂತಿ ಮಾಡುವುದು. ನಾವೂ ಸಮ್ಮಿಶ್ರ ಸರ್ಕಾರದಲ್ಲಿದ್ದೆವು. ಇವತ್ತು ನಿಮ್ಮದೇ ಸರ್ಕಾರ ಇದೆ. ಯಾವುದಾದರೂ ಒಂದು ಸಂದರ್ಭದಲ್ಲಿ NSG ಘಟಕ ಬೇಕು ಎಂದು ಪ್ರತಿಪಕ್ಷದಿಂದ ಒಂದು ಪತ್ರ ಬರೆದರಾ? ಈ ರಾಜ್ಯಕ್ಕೆ ರಸಗೊಬ್ಬರದ ಕೊರತೆ ಇದೆ. ನಮ್ಮ ಜೊತೆಗೆ ಬರುವುದು ಬೇಡ. ನಮ್ಮನ್ನು ದಾಯಾದಿಗಳಂತೆ ನೀವು ನೋಡುತ್ತಿದ್ದೀರಿ. ಇವತ್ತಿನಿಂದಲಾದರೂ ಬದಲಾವಣೆ ಆಗಿ ಎಂದು ಹೇಳುತ್ತಿದ್ದೇನೆ. ಆದರೆ ಒಂದು ದಿವಸ ರಸಗೊಬ್ಬರದ ಕೊರತೆ ಇದೆ ಎನ್ನುವಂತಹ ಸಂದರ್ಭ ಬಂದಾಗ ನಮ್ಮ ಜೊತೆಗೆ ನೀವು ಬರುವುದಕ್ಕೆ

ಇಷ್ಟ ಪಡಲಿಲ್ಲ. ನೀವಾದರೂ ಹೋಗಿ, ರಸಗೊಬ್ಬರ ಕೊಡಿಸುವಂತಹ ವ್ಯವಸ್ಥೆ ಮಾಡಿದಿರಾ? ನಾನು ನಿಮಗೆ ಅಂಕಿ ಅಂಶಗಳನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- Wrong message ಹೋಗ ಬಾರದು. ರಸಗೊಬ್ಬರದ ಕೊರತೆ ಇದ್ದಾಗ ನಾನು ಸ್ವತ: ನಿಮಗೆ ಫೋನ್ ಮಾಡಿ, ಕೇಳಿಕೊಂಡ ಮೇಲೆ ನಿಮ್ಮ ಮುಂದೆ ಫಿಗರ್ಸ್ ಕೊಟ್ಟು, Government of India advertisement ಕೊಟ್ಟು ಎಷ್ಟು ಟನ್ ಗೊಬ್ಬರ ಇಲ್ಲಿ available ಇದೆ, ಹೋದ ಸಲ ಎಷ್ಟು consumption ಆಯಿತು,ಅದರ ವಿವರಗಳನ್ನು ಎಲ್ಲಾ ಪತ್ರಿಕೆಗಳಲ್ಲಿ ಕೊಟ್ಟರು. ಅದನ್ನು ಬಿಟ್ಟು ಸುಮ್ಮನೆ ನಿಮಗೆ ತಿಳಿದದ್ದು ನೀವು ಹೇಳಿಕೊಂಡು ಹೋದರೆ, ಇದು ಚೆನ್ನಾಗಿರುವುದಿಲ್ಲ. ನೀವು ಅರ್ಥ ಮಾಡಿಕೊಂಡು ಹೇಳಬೇಕು. ನಾವು ಸ್ವತ: ಹೋದ ಮೇಲೆ ಅದನ್ನು ಹೇಳಿದ್ದು.

ಡಾ॥ ಬಿ.ಎಸ್. ಯಡಿಯೂರಪ್ಪ :- ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯ ಮಂತ್ರಿಗಳಾಗಿದ್ದಾಗ, ಹಳ್ಳಿಗಳಿಗೆ ಹೋಗಿ ಅಲ್ಲಿ ಉಳಿದು, ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿದರು. ಅವರದೇ ಆದ ಒಂದು ಆಡಳಿತ, ಅವರು ನಂಬಿದಂತಹ ರೀತಿಯಲ್ಲಿ ಅವರು ಮಾಡಿದರು. ನಾನು ಟೀಕೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಮುಂದೆಯೂ ಒಂದಾಗೋಣ. ಅದರಲ್ಲಿ ತಪ್ಪೇನಿದೆ? ನಾವೇನು ದಾಯಾದಿಗಳಾ? ಒಳ್ಳೆಯ ಕಾಲ ಬಂದರೆ ಮುಂದೆಯೂ ಒಂದಾಗೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಟೀಕೆ ಏಕೆ ಮಾಡುತ್ತೀರಿ? ಇಬ್ಬರೂ ಒಂದೇ ಇದ್ದೀರಿ. ಇಬ್ಬರೂ bedmates ಇದ್ದಮೇಲೆ ಟೀಕೆ ಏಕೆ ಬರುತ್ತದೆ? ಒಂದೇ ಕಡೆ ಸೇರುತ್ತೀರಿ, ಅವರು ಒಳಗಡೆ ಮಲಗುತ್ತಿದ್ದರು ನೀವು ಹೊರಗಡೆ ಮಲಗುತ್ತಿದ್ದಿರಿ ಅಷ್ಟೇ ವ್ಯತ್ಯಾಸ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ರಾಜಕಾರಣದ ಹೊಂದಾಣಿಕೆ ಮಾತು ಹೇಳುತ್ತಿಲ್ಲ. ಸ್ನೇಹದ ಬಗ್ಗೆ ಮಾತನಾಡುತ್ತಿದ್ದೇನೆ. ಸ್ನೇಹ ವಿಶ್ವಾಸಕ್ಕೆ ರಾಜಕಾರಣ ಅಡ್ಡಿ ಬರಬಾರದು. ನಾವೂ ಅವರು ಇಬ್ಬರೂ ದಾಯಾದಿಗಳಲ್ಲ. ನೀವೂ ನಾವೂ ದಾಯಾದಿಗಳಲ್ಲ. ದೇಶದ ಉಳಿವಿನ ದೃಷ್ಟಿಯಿಂದ ಅನೇಕ ಸಂದರ್ಭಗಲ್ಲಿ ಒಟ್ಟಾಗಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದ ಸ್ನೇಹಿತರೂ ನಾವೆಲ್ಲಾ ಒಟ್ಟಾಗಿ ಈ ದೇಶದ ಸಮಸ್ಯೆಗಳಿಗೆ ಉತ್ತರ ಕೊಡುವಂತಹ ಕಾಲ ಬರಬಹುದು. ಒಂದು ನಾನು ಮಾನ್ಯ ಕುಮಾರಸ್ವಾಮಿಯವರಿಗೆ ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನನಗೆ ಕೇಳಬೇಡಿ,

ನಿಮ್ಮ ಜೆಡಿ(ಎಸ್) ಹಾಗೂ ಕಾಂಗ್ರೆಸ್ ಶಾಸಕರನ್ನು ನೀವು ಕೇಳಿ. ನಾವು ಜನಸ್ಪಂದನ ಕಾರ್ಯಕ್ರಮ ಮಾಡುತ್ತಿದ್ದೇವೆ. ಇದುವರೆಗೆ ನಾಲ್ಕು ತಿಂಗಳುಗಳಲ್ಲಿ ಐದೂವರೆ ಲಕ್ಷ ಅರ್ಜಿಗಳು ಬಂದಿವೆ. 3.60 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಅಂದರೆ, ಕೊಟ್ಟ ಅರ್ಜಿಗಳಿಗೆ ಪರಿಹಾರ ಕೊಟ್ಟಿದ್ದೇವೆ. ಎಂಡಾರ್ಸ್‌ಮೆಂಟ್ ಕೊಟ್ಟಿಲ್ಲ. ನೀವು ವೆರಿಫೈ ಮಾಡಿಸಿ. ನಾನು ನಮ್ಮ ಕಾಂಗ್ರೆಸ್‌ನ ಶಾಸಕರು ಇದ್ದ ಕಡೆ, ಜೆಡಿ(ಎಸ್) ಶಾಸಕರು ಇದ್ದ ಕಡೆ ಹೋಗಿದ್ದೇನೆ. I am sorry. This is not the way. Please tell him. ಆ ಮೇಲೆ ಮಾತನಾಡಿ clarification ಕೇಳಿ. ಅವರಿಗೆ ಇಷ್ಟ ಇಲ್ಲದಿದ್ದರೆ ಹೋಗುವುದು ಬೇಡ. ನಾನು ವಾಸ್ತವಿಕ ಸ್ಥಿತಿಯನ್ನು ಹೇಳುತ್ತಿದ್ದೇನೆ. ಕೆಲವರು ಒಪ್ಪಬಹುದು, ಕೆಲವರು ಒಪ್ಪದೆ ಇರಬಹುದು. ಅದು ಬೇರೆ ವಿಷಯ.

ಉಪಾಧ್ಯಕ್ಷರು :- ದಯವಿಟ್ಟು clarification ಕೇಳಿ.

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಾಲಕೃಷ್ಣರವರೇ ನಾನು ಹೇಳಿದ್ದೆಲ್ಲ ನೀವು ಒಪ್ಪಬೇಕೆಂದೇನೂ ಇಲ್ಲ. ನನ್ನದೇನೂ ಅಭ್ಯಂತರವಿಲ್ಲ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಸ್ಥಳದಲ್ಲಿಯೇ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ, ಭಾಗ್ಯಲಕ್ಷ್ಮಿಯಿಂದ ಅನ್ಯಾಯವಾಗಿರುವಂಥದ್ದು, ಖಾತೆ ಬದಲಾವಣೆ ಆಗಬೇಕಾಗಿರುವಂಥದ್ದು, ಮಾಡುತ್ತಿದ್ದೇನೆ. ನಿಮ್ಮಿಂದ ನಾನು ಏನು ಸಲಹೆ ಹಾಗೂ ಸಹಕಾರ ಬೇಡುತ್ತಿದ್ದೇನೆಂದರೆ, ಈ ಜನಸ್ಪಂದನ ಕಾರ್ಯಕ್ರಮ ಕೇವಲ ಕೆಲವು ಬಡವರಿಗೆ ಸವಲತ್ತನ್ನು ಕೊಡುವಂತಹ ಕಾರ್ಯಕ್ರಮ ಆಗಬಾರದು. ಕೊನೇ ಪಕ್ಷ ಇಲ್ಲಿರುವಂತಹ ಎಲ್ಲಾ ಶಾಸಕರು, BJP ಯುವರೂ ಸೇರಿಕೊಂಡು ಆತ್ಮಾವಲೋಕನ ಮಾಡಿಕೊಳ್ಳಿ. ನಾವು ಹಳ್ಳಿಗಳಿಗೆ ಹೋಗುತ್ತೇವಾ? ಬೆರಳೆಣಿಸುವಷ್ಟು ಇರಬಹುದು, ಈ ಜನಸ್ಪಂದನ ಕಾರ್ಯಕ್ರಮದ ನೆಪದಲ್ಲಾದರೂ ಪ್ರತಿ ಶನಿವಾರ ಹೋಬಳಿ ಕೇಂದ್ರಗಳಿಗೆ ಹೋಗುವಂತಹ ಅಭ್ಯಾಸವಾದರೆ, ಅಲ್ಲಿಯ ಜನರ ಸಮಸ್ಯೆ ಅರ್ಥವಾಗುತ್ತದೆ, ಅಭಿವೃದ್ಧಿ ಕಾರ್ಯಗಳ ಕ್ವಾಲಿಟಿ ಹೇಗಿದೆ, ಯಾವ ರೀತಿ ಕೆಲಸಗಳು ನಡೆಯುತ್ತಿವೆ ಎಂದು ಗೊತ್ತಾಗುತ್ತದೆ. ನಮ್ಮ ಬಜೆಟ್‌ನಲ್ಲಿ ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ, ನಮ್ಮ ತಾಲ್ಲೂಕು ಪಂಚಾಯಿತಿಗಳಲ್ಲಿ, ನಮ್ಮ ಗ್ರಾಮ ಪಂಚಾಯಿತಿಗಳಲ್ಲಿ ಯಾವ ರೀತಿ ಕೆಲಸಗಳು ನಡೆಯುತ್ತಿವೆ ಅವರ ಬಗ್ಗೆ ಜನ ಏನು ಮಾತನಾಡುತ್ತಿದ್ದಾರೆ, ನಮ್ಮ ಬಗ್ಗೆ ಏನು ಮಾತನಾಡುತ್ತಿದ್ದಾರೆ, ಮತದಾರನ ಹತ್ತಿರ

ಹೋದಾಗ ಅನೇಕ ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ. ನಾವು ಸದನದಲ್ಲಿ ಏಕೆ ಚರ್ಚೆ ಮಾಡುತ್ತೇವೆ, ನಿಮ್ಮ ಅನುಭವದ ಮೇಲೆ ಅನೇಕ ವಿಷಯಗಳು ಇಲ್ಲಿ ಚರ್ಚೆ ಆದಾಗ, ನಮ್ಮ ಅಧಿಕಾರಿಗಳು ಇಲ್ಲಿ ಕುಳಿತಿದ್ದಾರೆ. ಅವರಿಗೆ ತಾವು ಮಾಡುತ್ತಿರುವ ತಪ್ಪಿನ ಅರಿವಾಗಬೇಕು. ಒಳ್ಳೆಯ ಕೆಲಸ ಮಾಡಿದ್ದರೆ ಅಪ್ರಿಷಿಯೇಟ್ ಮಾಡೋಣ. ತಪ್ಪಾಗಿದ್ದರೆ ತಿದ್ದಿಕೊಳ್ಳುವುದಕ್ಕೆ ಒಂದು ಸಂದರ್ಭ ಬಹಳ ಅನುಕೂಲವಾಗಬಹುದು. ನಾನು ನಿಮಗೆ ಬಹಳ ವಿನಯದಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಿನ್ನೆ ಅಲ್ಲ ಮೊನ್ನೆ ನಾನು ಹೋಗಿದ್ದೆ. ಬೆಳಗಾವಿ ಹತ್ತಿರ ಜಾಫರ್‌ವಾಡಿ ಎಂದು ಇದೆ. ನಿನ್ನೆ ಬೆಳಿಗ್ಗೆ ನಿಮ್ಮನ್ನೂ ಕಳುಹಿಸಿ ಕೊಡುವುದಕ್ಕೆ ಹೋಗಿದ್ದೆ. ಜನರ ಸಹಭಾಗಿತ್ವದೊಂದಿಗೆ ಅಲ್ಲಿ ಒಂದು ಗ್ರಾಮವನ್ನು ಅಭಿವೃದ್ಧಿಪಡಿಸಿದ್ದಾರೆ. ಒಂದು ಕೋಟಿ ರೂಪಾಯಿ ಮೇಲೆ ಖರ್ಚು ಮಾಡಿಲ್ಲ. ಆದರೆ ಮಾಹಾತ್ಮಗಾಂಧಿಯವರ ಗ್ರಾಮ ರಾಜ್ಯ ರಾಮ ರಾಜ್ಯದ ಕಲ್ಪನೆ ಅಲ್ಲಿ ಹೋಗಿ ನೋಡಿ ಬರಬಹುದು. ಉದಾಹರಣೆಗೆ ಸನ್ಮಾನ್ಯ ಸಿದ್ದರಾಮಯ್ಯನವರೇ, ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ಕಡೆ ಹಳ್ಳಿಗಳ ಅಭಿವೃದ್ಧಿಗಾಗಿ ನಾವು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಸುವರ್ಣ ಗ್ರಾಮದ ಬಗ್ಗೆ ನಾನು ಮಾನ್ಯ ಶಾಸಕರಿಗೆ ಹಾಗೂ ಅಧಿಕಾರಿಗಳಿಗೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ, ಒಬ್ಬ ಶಾಸಕ ಅಲ್ಲಿಯ ಸಾರ್ವಜನಿಕರ ಸಹಭಾಗಿತ್ವದಲ್ಲಿ ಆ ತರಹ ಒಂದು ಮಾದರಿ ಗ್ರಾಮವನ್ನು ಮಾಡುವುದಕ್ಕೆ ಸಾಧ್ಯವಾಗುವುದಾದರೆ, ನಾವು ಒಂದು ಕೋಟಿಯಿಂದ ಎರಡು ಕೋಟಿ ರೂಪಾಯಿಗಳನ್ನು 1200 ಗ್ರಾಮಗಳಿಗೆ ನಾವು ಖರ್ಚು ಮಾಡುತ್ತಿದ್ದೇವೆ. ಆ 1200 ಗ್ರಾಮ ಈ ಜಾಪರ್‌ವಾಡಿ ಅಷ್ಟಾದರೂ ಅಭಿವೃದ್ಧಿ ಆಗಬೇಕು. ಏಕೆ ಅಬಿವೃದ್ಧಿ ಆಗುವುದಿಲ್ಲ? ಜನ ಕೋಆಪರೇಟ್ ಮಾಡುವುದಕ್ಕೆ ತಯಾರಿಲ್ಲವಾ? ಮಾಡುತ್ತಾರೆ. ನಾವು ಸಮಯ ಕೊಟ್ಟು ಅ ರೀತಿ ಮಾದರಿಯಾಗಿ ಮಾಡಬಹುದಾ? ಅಲ್ಲಿ ಒಂದು ಕೆರೆಯನ್ನು ನಾನು ನೋಡಿಕೊಂಡು ಬಂದೆ. ಕಡಿಮೆಯಾ ಅದು? ಬೆಳಗಾವಿಯಲ್ಲಿ ನಮ್ಮ ಸರ್ಕೀಟ್ ಹೌಸ್ ಪಕ್ಕಲ್ಲಿ ಒಂದು ಕೆರೆಯನ್ನು ಅಭಿವೃದ್ಧಿಗೊಳಿಸಿದ್ದಾರೆ. ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಪ್ರತಿಯೊಂದು ಜಿಲ್ಲೆಯಲ್ಲಿ ಸಾಧ್ಯವಾದರೆ ಒಂದು ತಾಲ್ಲೂಕಿನಲ್ಲಿ ಈ ರೀತಿ ಕೆರೆಗಳನ್ನು ಅಭಿವೃದ್ಧಿಪಡಿಸಿ ಬೆಳಿಗ್ಗೆ ಎದ್ದು ವಾಕ್ ಮಾಡುವುದಕ್ಕೆ, ಸಾಯಂಕಾಲ ಅಲ್ಲಿ ವಾಕ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಚಿತ್ರ ಎಷ್ಟು ಬದಲಾವಣೆ ಅಗಬಹುದು? ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಟೀಕೆ ಮಾಡುವುದು ಇದ್ದಿದ್ದೇ. ರಾಜಕಾರಣದಲ್ಲಿ ನೀವು ಅಲ್ಲಿ ಕುಳಿತು ನಮ್ಮನ್ನು ಹೊಗಳುವುದಕ್ಕಾಗುತ್ತಾ? ಆದರೆ ವಾಸ್ತವಿಕ ಸ್ಥಿತಿಯನ್ನು

ಅರ್ಥ ಮಾಡಿಕೊಂಡು ನಮ್ಮ ಶಾಸಕರು, ನಮ್ಮ ಅಧಿಕಾರಿಗಳು ಅವರ ಜವಾಬ್ದಾರಿಯನ್ನು ಅರಿತುಕೊಂಡು ಕೆಲಸ ಮಾಡಿದರೆ ಒಳ್ಳೆಯದು. ಕಳೆದ 8-9 ದಿವಸಗಳಿಂದ ಇಲ್ಲಿಯ ಶಾಸಕರಿಗೆ ಸಮಯ ಕೊಟ್ಟಿದ್ದೇವೆ attendance ಚೆನ್ನಾಗಿದೆ, ಅಧಿಕಾರಿಗಳು ರಾತ್ರಿ 12 ಗಂಟೆಯವರೆಗೆ ರಿವ್ಯೂ ಮೀಟಿಂಗ್ ಮಾಡಿದ್ದಾರೆ. ಅಂದರೆ ಈ ಒಂದು ಆಸಕ್ತಿ ಒಂದು ರೀತಿಯ ಬದಲಾವಣೆಯ ಸೂಚನೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ಒಂದು ಮಾದರಿ ಗ್ರಾಮಗಳನ್ನು ಮಾಡುವುದಕ್ಕೆ ನಮಗೇನು ತೊಂದರೆ ಇದೆ? ನಾವೇಕೆ ಈ ದಿಕ್ಕಿನಲ್ಲಿ ಚಿಂತನೆ ಮಾಡುವುದಿಲ್ಲ? BPL ಕಾರ್ಡುಗಳ ಬಗ್ಗೆ ಚರ್ಚೆ ಆಯಿತು. ದಿವಸಗಟ್ಟಲೆ ಚರ್ಚೆ ಮಾಡಿದಿರಿ. ನಾನು ಒಂದು ಮಾತು ಹೇಳಿದೆ, ಮಾನ್ಯ ಸಿದ್ದರಾಮಯ್ಯನವರೇ ನೀವು ಆವತ್ತು ಇರಲಿಲ್ಲ ಎಂದು ಕಾಣುತ್ತದೆ. ಏನು ಹೇಳಿದೆ ನಾನು? ಬಡವರಲ್ಲಿ ಬಡವರಿಗೆ BPL ಕಾರ್ಡುಗಳು ಸಿಗಬೇಕು. ನಮ್ಮ ಶಾಸಕರು ನಮ್ಮ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಮೀಟಿಂಗ್‌ಗಳನ್ನು ಮಾಡಿ ಅಧಿಕಾರಿಗಳ ಸಹಕಾರ ತೆಗೆದುಕೊಂಡು, ಮೊದಲು ಈ ಊರಿನಲ್ಲಿರುವ 50%ನಿಜವಾದ ಬಡವರಿಗೆ ಕಾರ್ಡುಗಳು ಸಿಗಲಿಲ್ಲವಾ? ಮೊದಲು ಅವರಿಗೆ ಕೊಟ್ಟು ಬಿಡೋಣ. ಆಗುವುದಿಲ್ಲವಾ? ಎಲ್ಲ ಅಧಿಕಾರಿಗಳೇ ಮಾಡಬೇಕಾ? ನಾವು ಯಾರಿಗೂ ನಿಷ್ಠುರವಾಗುವುದಕ್ಕೆ ತಯಾರಿಲ್ಲ. ಯಾರೇ ಇರಲಿ ನಮ್ಮ ಕಡೆಯವರಿಗೆ ಎಲ್ಲರಿಗೂ ಕೊಡಬೇಕು. ಆದರೆ ಬಡವರಿಗೆ ಸಿಗಲಿಲ್ಲವೆಂದು ಬೊಬ್ಬೆ ಹೊಡೆಯುವುದು. ನಾವು ಯಾರಿಗೆ ಬೊಟ್ಟು ಮಾಡಿ ತೋರಿಸುತ್ತಿದ್ದೇವೆ? ನಾವು ಶಾಸಕರಾಗಿ ನಮ್ಮ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳನ್ನು ಕೂರಿಸಿಕೊಂಡು ಚರ್ಚೆ ಮಾಡಬೇಕು. ಅಲ್ಲಿ ಮನೆಮನೆಗಳಿಗೆ ಹೋಗಿ ಒಂದು ಸರ್ವೆ ಮಾಡಿಸಿ ನಾವು ಅಧಿಕಾರಿಗಳಿಗೆ ಸಹಕಾರವನ್ನು ಕೊಟ್ಟು 50% ನಿಜವಾದ ಬಡವರಿಗೆ ಕೊಡೋಣ. ಮೊದಲು ಅಂಥ ಬಡವರಿಗೆ ಕೊಟ್ಟು ನಂತರ ಏನಾದರೂ ಮಾಡಿಕೊಳ್ಳಲಿ. 65%, 70% ಕಾರ್ಡ್‌ಗಳನ್ನು ಹಂಚಿದರೂ ಕೂಡ ನಿಜವಾದ ಬಡವನಿಗೆ ಕಾರ್ಡ್ ಸಿಕ್ಕಿಲ್ಲವೆಂದರೆ ನಮಗೇ ಅಪಮಾನವಾದಂತೆ. ಯಾರಿಗೆ ಬೊಟ್ಟು ಮಾಡಿ ನಾವು ತೋರಿಸುತ್ತಿದ್ದೇವೆ. ಯಾವುದನ್ನು ಮಾಡಬೇಕಾಗಿದೆಯೋ ಅದೆಲ್ಲದರ ಬಗ್ಗೆ ನಾವು ಅಧಿಕಾರಿಗಳ ಕಡೆಗೆ ಬೊಟ್ಟು ಮಾಡಿ ತೋರಿಸಿ ನಮಗೇನೂ ಸಂಬಂಧವಿಲ್ಲವೆಂದು ನಾವು ಕೈಕಟ್ಟಿಕೊಂಡು ಕುಳಿತುಕೊಂಡರೆ, ನನಗನ್ನಿಸುತ್ತದೆ, ಇದನ್ನು ಯಾರೂ ಒಪ್ಪುವಂಥ ವಿಷಯವಲ್ಲವೆಂದು

ಮತ್ತೊಮ್ಮೆ ನಾನು ಅತ್ಯಂತ ವಿನಯದಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪಕ್ಷಭೇದ ಮರೆತು ನಿಮ್ಮ ಸಹಕಾರವಿದ್ದರೆ ಈ ರೀತಿಯ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಬಹುದು. ಆ ನಿಟ್ಟಿನಲ್ಲಿ ಬರುವ ಮೂರ್‍ನಾಲ್ಕು ವರ್ಷಗಳಲ್ಲಿ ನಾವೆಲ್ಲರೂ ಪ್ರಯತ್ನವನ್ನು ಮಾಡೋಣ.

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಸಿದ್ದರಾಮಯ್ಯ :- ಈಗ ನೀವೇನು ಮಾಡಿದ್ದೀರಿ, ಕಾರ್ಡ್ ಪಡೆಯಲು ನೆಮ್ಮದಿ ಕೇಂದ್ರಕ್ಕೆ ಜನ ಹೋಗಿ ಅರ್ಜಿ ಸಲ್ಲಿಸಬೇಕು, ಡಿಕ್ಲರೇಶನ್ ಮಾಡಿಕೊಡಬೇಕು, 20 ರೂಪಾಯಿಯ ಛಾಪಾ ಕಾಗದದಲ್ಲಿ ಡಿಕ್ಲರೇಶನ್ ಮಾಡಿಕೊಡಬೇಕು ಎನ್ನತಕ್ಕಂಥದ್ದನ್ನು ನೀವು ಹೇಳಿದ್ದೀರಿ. ಇದಲ್ಲದೆ ಫೋಟೋ ತೆಗೆಸುವುದಕ್ಕೆ 50 ರೂಪಾಯಿಗಳನ್ನು ಕೊಡಬೇಕು. ಇದಲ್ಲದೆ ಎರಡು ರೂಪಾಯಿ ಕೊಡಬೇಕು. ಒಟ್ಟು 72 ರೂಪಾಯಿಗಳನ್ನು ಅವನು ನೆಮ್ಮದಿ ಕೇಂದ್ರಕ್ಕೆ ತೆಗೆದುಕೊಂಡು ಹೋಗಬೇಕು. 72 ರೂಪಾಯಿಗಳನ್ನು ತೆಗೆದುಕೊಂಡು ಹೋದರೆ ಮಾತ್ರ ಕಾರ್ಡ್ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಈಗ ಅಲ್ಲೇನಾಗಿದೆಯೆಂದರೆ ಫೋಟೋ ತೆಗೆಯುವವನು, ಅರ್ಜಿ ತೆಗೆದುಕೊಳ್ಳುವ ಕಡೆ, ಡಿಕ್ಲರೇಶನ್ ವಿಚಾರ, ಸ್ಟ್ಯಾಂಪ್ ಪೇಪರ್, ಹೀಗೆ ಇವೆಲ್ಲಾ ಪ್ರೊಸೆಸ್‌ಗಳಲ್ಲಿ ತೊಂದರೆಯಾಗಿ ಬಹಳ ಗೊಂದಲವಾಗಿ ಬಿಟ್ಟಿದೆ. ನೀವು ಎಲ್ಲಾ ಬಡವರಿಗೂ ಕಾರ್ಡ್‌ನ್ನು ಕೊಡಲೇಬೇಕು ಎನ್ನುವುದಾದರೆ ಈ ಪ್ರೋಸೆಸ್ ಏನಿದೆ ಅದನ್ನು simplify ಮಾಡಬೇಕು. ನೀವು ಫೋಟೋ ತೆಗೆಯಲು 50 ರೂಪಾಯಿ ಕಟ್ಟಬೇಕು ಎಂದು ಹೇಳಿದ್ದೀರಿ. ಪಾಪ ಆ ಬಡವನ ಹತ್ತಿರ ಫೋಟೋ ತೆಗೆಸಲು 50 ರೂಪಾಯಿ ಹಣ ಇರುವುದಿಲ್ಲ. ಆದುದರಿಂದ ಸರ್ಕಾರದಿಂದ ಫೋಟೋವನ್ನು ನೀವು ಆತನಿಗೆ ಏಕೆ ತೆಗೆಸಿಕೊಡಬಾರದು? ಅದಕ್ಕೆ ಹೆಚ್ಚು ಹಣವೇನೂ ಖರ್ಚಾಗುವುದಿಲ್ಲ. ಇನ್ನು ಉಳಿದಿರತಕ್ಕಂಥ ಕಡಿಮೆ ಜನರೇನಿದ್ದಾರೆ ಅವರಿಗೆ ನೀವೇ ಫೋಟೋ ತೆಗೆಸಿಕೊಡಬಹುದು. ಅವರೆಲ್ಲರ ಫೋಟೋವನ್ನು ನೀವೇ ತೆಗೆಸಿ, ಸ್ಟ್ಯಾಂಪ್ ಪೇಪರ್ ಮೇಲೆ ಡಿಕ್ಲರೇಶನ್ ತೆಗೆದುಕೊಂಡು ಈ ಕೆಲಸವನ್ನು ನೀವು ಮಾಡಬೇಕು. ಇದು ಒಂದು ವಿಚಾರ. ಇನ್ನು ಎರಡನೆಯದಾಗಿ, ನೀವು ಕಾರ್ಡ್‌ಗೆ ಅರ್ಜಿ ಸಲ್ಲಿಸಲು 31ನೇ ತಾರೀಖೋ ಅಥವಾ 28ನೇ ತಾರೀಖೋ ಕಡೆಯ ದಿನಾಂಕವೆಂದು ಹೇಳಿದ್ದೀರಿ. ನನ್ನ ಮತ ಕ್ಷೇತ್ರದಲ್ಲಿ ಮೂರು ಜನ ತಹಶೀಲ್ದಾರರು ಬರುತ್ತಾರೆ. ಆ ಮೂರು ಜನ ತಹಶೀಲ್ದಾರರನ್ನು ಕರೆಸಿ ನಾನು ಇದರ ಬಗ್ಗೆ ವಿಚಾರಿಸಿದೆ. ಬಹಳ ಜನರು ಅರ್ಜಿಗಳನ್ನು ಕೊಡುತ್ತಿರುವುದರಿಂದ 31ನೇ

ತಾರೀಖಿನೊಳಗೆ ಆಗುವುದಿಲ್ಲವೆನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದುದರಿಂದ ಇನ್ನೂ ಸ್ವಲ್ಪ ದಿವಸ extend ಮಾಡತಕ್ಕಂಥ ಕೆಲಸವನ್ನು ನೀವು ಮಾಡಬೇಕು. ನೀವು ಹೇಳುತ್ತೀರಿ, ಎಲ್ಲಾ ಗ್ರಾಮ ಪಂಚಾಯಿತಿ ಮೆಂಬರ್‌ಗಳು, ತಾಲ್ಲೂಕು ಪಂಚಾಯಿತಿ ಮೆಂಬರ್‌ಗಳು, ಜಿಲ್ಲಾ ಪಂಚಾಯಿತಿ ಮೆಂಬರ್‌ಗಳು, ಎಂ.ಎಲ್.ಎ. ಗಳು ಈ ಗೊಂದಲವನ್ನು ಸರಿಪಡಿಸಿ ಎಂದು ಹೇಳುತ್ತೀರಿ. ಎಲ್ಲಾ ಮಾಡಿದರೂ ಕೂಡ ಅಲ್ಲಿ fair price shop ನವರು ಏನಿದ್ದಾರೆ, ಅದಂರೆ ಆ society ಗಳವರೇನಿದ್ದಾರೆ ಅವರೇ ಒಂದಷ್ಟು ಕಾರ್ಡ್‌ಗಳನ್ನು ಮಾಡಿಕೊಂಡು ಇಟ್ಟುಕೊಂಡುಬಿಟಿದ್ದರು. ಅವರು ಆ ರೀತಿ ಮಾಡಿಕೊಂಡು ಇಟ್ಟುಕೊಂಡಿದ್ದರಿಂದಲೇ ಇವೆಲ್ಲಾ ರೀತಿಯ ತೊಂದರೆಗಳು ನಿರ್ಮಾಣವಾಗಿದ್ದು. ಅವರೇ ಒಂದಷ್ಟು ನೂರೋ, ಇನ್ನೂರೋ ಕಾರ್ಡ್‌ಗಳನ್ನು ಮಾಡಿ ಇಟ್ಟುಕೊಂಡುಬಿಟ್ಟು ಅವರಿಗೆಲ್ಲಾರಿಗೂ ಕಾರ್ಡ್‌ಗಳನ್ನು ಕೊಟ್ಟಿದ್ದೇವೇಂದು ಹೇಳಿ ತಾವೇ ಇಟ್ಟುಕೊಂಡು ದುಡ್ಡು ಹೊಡೆಯುವುದಕ್ಕೋಸ್ಕರವಾಗಿಯೇ ಅವರು ಈ ರೀತಿ ಮಾಡಿಕೊಂಡುಬಿಟ್ಟಿದ್ದರು. ಹೀಗಾಗಿ ಇದು ದೊಡ್ಡ ಸಮಸ್ಯೆಯಾಗಿದೆ. ಈ ರೀತಿಯಿಂದಾಗಿ ನಿಜವಾದ ಬಡವರಿಗೆ ಕಾರ್ಡ್ ಸಿಗದೇ ಹೋಗಿರುವುದು. ಈಗಲೂ ಕೂಡ ಅದನ್ನೇ ಮಾಡುತ್ತಾರೆ. ಇದನ್ನೆಲ್ಲಾ ಮೆಂಬರ್‌ಗಳು ಹೋಗಿ ನೋಡುವುದಕ್ಕಾಗುವುದಿಲ್ಲ. ಅದಕ್ಕಾಗಿ ತಾವು ಅಧಿಕಾರಿಗಳಿಗೆ ಬಹಳ ಸ್ಪಷ್ಟವಾದ ಸೂಚನೆಗಳನ್ನು ಕೊಡಬೇಕು. ಇದರ ಜೊತೆಗೆ process simplify ಮಾಡಬೇಕು. ಇನ್ನು ಸರ್ಕಾರದಿಂದಲೇ ಹಣ ಖರ್ಚು ಮಾಡಿ ಫೋಟೋ ತೆಗೆಸುವ ಕಾರ್ಯವನ್ನು ಮಾಡಿಸಿದರೆ ಒಳ್ಳೆಯದು. ನೆಮ್ಮದಿ ಕೇಂದ್ರದಲ್ಲಿ ಫೋಟೋಗ್ರಾಫರ್‌ನ್ನು ನೀವೇ ಇಟ್ಟು ಅವರೇ ಫೋಟೋ ತೆಗೆಯುವ ಹಾಗೆ ಮಾಡಿದರೆ ಬಹಳ ಜನರಿಗೆ ಅನುಕೂಲವಾಗುತ್ತದೆ. ಏಕೆಂದರೆ ಬಹಳ ಬಡವರಿಗೆ ಈಗ ನೀವು ಮಾಡಿರುವ ವ್ಯವಸ್ಥೆಯಿಂದ ಒಂದು ದಿನ ಕೂಲಿ ಮಾಡುವುದು ತಪ್ಪಿಹೋಗುತ್ತದೆ. ಇದರ ಜೊತೆಗೆ ಆ ಬಡವರು ದುಡ್ಡನ್ನು ಬೇರೆ ಹೊಂದಿಸಿಕೊಂಡು ಹೋಗಬೇಕು. ಆ ಕಾರಣದಿಂದಾಗಿ ನೀವೇ ಫೋಟೋಗ್ರಾಫರ್ ಇಟ್ಟು ನೀವೇ ಫೋಟೋ ತೆಗೆಸುವ ಕೆಲಸವನ್ನು ಸರ್ಕಾರದ ಹಣದಲ್ಲಿ ಮಾಡಬೇಕು. ಎರಡನೆಯದಾಗಿ, time extend ಮಾಡಿ process simplify ಮಾಡತಕ್ಕಂಥ ಕೆಲಸವನ್ನು ನೀವು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. Once and for all ಇದನ್ನು clear ಮಾಡಿಬಿಡಿ. ಇನ್ನೂ ಒಂದ್ಹತ್ತು ದಿವಸವೋ, ಹದಿನೈದು ದಿವಸಗಳ ಹೆಚ್ಚು ಟೈಂ ಕೊಟ್ಟು, ಇನ್ನೊಂದು ಬಾರಿ ಈ ರೀತಿಯ ಸಮಸ್ಯೆ

ಉದ್ಭವವಾಗದಂತೆ ನೋಡಿಕೊಳ್ಳಿ. ಏಕೆಂದರೆ ಪಾಪ ಬಡವರಿಗೆ, ಮೂರು ರೂಪಾಯಿಗೆ ಅಕ್ಕಿಯನ್ನು ಕೊಡುತ್ತೀವಿ, ನಿಜವಾದಂಥ ಬಡವನಿಗೆ 20 ಕೆ.ಜಿ ಅಕ್ಕಿ ಸಿಗದೇ ಹೋದರೆ ಅವನು ಈಗ ಇದೇ ಅಕ್ಕಿಗೆ ಎಷ್ಟು ದುಡ್ಡನ್ನು ಕೊಡಬೇಕಾಗುತ್ತದೆ ಹೇಳಿ. ಈಗ ಎ.ಪಿ.ಎಲ್.ಕಾರ್ಡ್‌ನವರಿಗೆ ನೀವು ಅಕ್ಕಿಯನ್ನು ಕೊಡುತ್ತಿಲ್ಲ. ಎ.ಪಿ.ಎಲ್.ಕಾರ್ಡ್‌ಗೆ ನೀವು ಕೇವಲ ಸೀಮೆಎಣ್ಣೆಯನ್ನು ಮಾತ್ರ ಕೊಡುವುದು. ಈಗ ಎ.ಪಿ.ಎಲ್.ಕಾರ್ಡ್‌ನವರಿಗೆ ಅಕ್ಕಿ ಇಲ್ಲ. ಕೇವಲ ಸೀಮೆಎಣ್ಣೆ ಮಾತ್ರ ಸಿಗುತ್ತಿದೆ. ಹೀಗಿರುವಾಗ ಬಿ.ಪಿ.ಎಲ್. ಕಾರ್ಡ್‌ನವರಿಗಾದರೂ ಅಕ್ಕಿ ಸಿಗುವ ಅನುಕೂಲವಾಗಬೇಕಲ್ಲ? ಆದುದರಿಂದ ಈ ಬಗ್ಗೆ ಎಲ್ಲಾ ಕಡೆಗಳಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಂಡು ಇನ್ನೊಂದ ಬಾರಿ ಈ ಸಮಸ್ಯೆ ಉದ್ಭವವಾಗದಂತೆ ನೋಡಿಕೊಳ್ಳಿ. ಎಲ್ಲೋ ಒಂದು ಪರ್ಸೆಂಟ್, ಎರಡು ಪರ್ಸೆಂಟ್ ಹಾಗೆಯೇ ಉಳಿದುಕೊಂಡುಬಿಡಬಹುದು, ಅದರ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ. ನೂರು ಪರ್ಸೆಂಟ್ ಎಲ್ಲರಿಗೂ ಕಾರ್ಡ್ ಕೊಡುವ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಒಂದು ಪರ್ಸೆಂಟ್, ಎರಡು ಪರ್ಸೆಂಟ್ ಉಳಿದುಕೊಳ್ಳಬಹುದು. ಆದರೆ 25%, 30% ಉಳಿದುಕೊಳ್ಳುವುದು ಸರಿಯಲ್ಲ. ಈಗ ನೀವು 88 ಲಕ್ಷ ಕಾರ್ಡ್‌ಗಳನ್ನು ಕೊಟ್ಟುಬಿಟ್ಟಿದ್ದೀವಿ ಎಂದು ಹೇಳುತ್ತೀರಿ. ನಾನು ಹೇಳುತ್ತೇನೆ, ಹಳ್ಳಿಯಲ್ಲಿ ಈಗ ಒಂದ್ಹತ್ತು ಪರ್ಸೆಂಟ್ ಜನರನ್ನು ಬಿಟ್ಟರೆ ಉಳಿದ 90 ಪರ್ಸೆಂಟ್‌ನಷ್ಟು ಜನರು ಬಡವರಾಗಿಬಿಟ್ಟಿದ್ದಾರೆ. ಹೋಲ್ಡಿಂಗ್ಸ್ ಈಗ ಎಲ್ಲ ಕಡಿಮೆಯಾಗಿ ಬಿಟ್ಟಿದೆ. ನಾವು 5 ವರ್ಷದ, 6 ವರ್ಷದ ಸಣ್ಣ ಹುಡುಗನಿದ್ದಾಗ ನಮ್ಮ ಊರಿನಲ್ಲಿ ಎಲ್ಲರೂ ಅನುಕೂಲಸ್ಥರಿದ್ದರು. ಯಾರೂ ಇನ್ನೊಬ್ಬರ ಮನೆಗೆ ಕೂಲಿ ಮಾಡುವುದಕ್ಕೆ ಹೋಗುತ್ತರಿಲಿಲ್ಲ. ಆದರೆ ಇವೊತ್ತು 90 ಪರ್ಸೆಂಟ್‌ನಷ್ಟು ಜನರು ಮೈಸೂರಿಗೆ ಕೂಲಿ ಮಾಡುವುದಕ್ಕೆ ಬಸ್ಸಿನಲ್ಲಿ ಹೋಗುತ್ತಾರೆ. ನಮ್ಮ ಊರಿನಿಂದ ಮೈಸೂರಿಗೆ ಬಸ್‌ನಲ್ಲಿ 23 ಕಿ.ಮೀ ಇದೆ. ಹಿಂದೆ 25 ಎಕರೆ ಇಟ್ಟುಕೊಂಡಿದ್ದವರೆಲ್ಲರೂ ಈಗ ಒಂದು ಎಕರೆ, ಎರಡು ಎಕರೆ, ಮೂರು ಎಕರೆಗೆ ಬಂದುಬಿಟ್ಟಿದ್ದಾರೆ. ಎಲ್ಲರೂ ಪಾರ್ಟಿಶನ್ ಆಗಿ, ಆಗಿ, ಆಗಿ ಎಲ್ಲರೂ ಈ ರೀತಿ ಮಾಡಿಕೊಂಡು ಇವೊತ್ತು ಈ ರೀತಿಯ ಪರಿಸ್ಥಿತಿಗೆ ಬಂದುಬಿಟ್ಟಿದ್ದಾರೆ. ಹೀಗಾಗಿ, ಈಗೇನು ಬಡವರ ಸಂಖ್ಯೆ ಬಗ್ಗೆ ಕೇಂದ್ರ ಸರ್ಕಾರದವರು ನಮಗೆ ಅಂಕಿ ಅಂಶಗಳನ್ನು ಏನು ಕೊಡುತ್ತಿದ್ದಾರೆ ಅದೇ ಸತ್ಯವೆಂದು ನಾವು ಅಂದುಕೊಳ್ಳುವುದಕ್ಕಾಗುವುದಿಲ್ಲ. ಅದೇ hundred per cent ಸತ್ಯವೆಂದು ನಾವು ಹೇಳುವುದಕ್ಕಾಗುವುದಿಲ್ಲ. 36 ಪರ್ಸೆಂಟೋ, 39 ಪರ್ಸೆಂಟೋ ಬಡವರು

ಇದ್ದಾರೆಂದು ಕೇಂದ್ರ ಸರ್ಕಾರದವರು ಹೇಳಿಬಿಟ್ಟಿದ್ದಾರೆ. ಆ ಕಾರಣದಿಂದ ನಾನು ಹೇಳಿದ ಹಾಗೆ ನೀವು ಮಾಡಿ. ನಿಮಗೆ ಹಾಗೂ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಏಕೆಂದರೆ ನೀವೂ ಕೂಡ ಬಡವರ ಬಗ್ಗೆ ಬಹಳ ಮಾತನಾಡುತ್ತೀರಿ. ಆ ಕಾರಣದಿಂದ ಇದು ಆಗಬೇಕೆಂದರೆ, ನಾನು ಹೇಳಿದಂತೆ ಒಂದ್ಹತ್ತು ದಿವಸ ನೀವು time extend ಮಾಡಿ. ಇದಲ್ಲದೇ process ಏನಿದೆ ಅದನ್ನು ಸರಳೀಕರಣ ಮಾಡಿ. ಇದಲ್ಲದೇ 50 ರೂಪಾಯಿ ಫೋಟೋಗೆ ಎಂದು ಹೇಳಿದ್ದೀರಿ. ಅದನ್ನು ನೀವು ತೆಗೆದುಹಾಕಿ. ಅಫಿಡವಿಟ್‌ನಲ್ಲಿ ಡಿಕ್ಲರೇಶನ್ ಕೇಳಿದ್ದೀರಿ. ಸತ್ಯ ಹೇಳಲಿ, ಸುಳ್ಳು ಹೇಳಬಾರದು, ಒಂದು ಭಯ ಇರಲಿ ಎಂದು ನೀವು ಇದನ್ನು ಮಾಡಿದ್ದೀರಿ. All right ಮಾಡಿ. ಛಾಪಾ ಕಾಗದದ ಮೇಲೆ ಡಿಕ್ಲರೇಶನ್ ಮಾಡಿಸಿಕೊಳ್ಳುವಾಗ ಅವನು ತಪ್ಪು ಮಾಹಿತಿ ಕೊಟ್ಟಿದ್ದರೆ ಅವನನ್ನು ಹಿಡಿದು ನೀವು ಜೈಲಿಗೆ ಕಳುಹಿಸುವುದಕ್ಕೆ ನಿಮಗೆ ಆಗುತ್ತದೆಯೆ? ಸುಳ್ಳು ಮಾಹಿತಿ ಕೊಟ್ಟಿದ್ದರೆ ನೀವು ಅವನನ್ನು ಜೈಲಿಗೆ ಕಳುಹಿಸಿಬಿಡುತ್ತೀರ? ಆಗುವುದಿಲ್ಲ. ಆದುದರಿಂದ process simplify ಮಾಡುವುದು ಬಹಳ ಒಳ್ಳೆಯದು. ಆ ದಿಕ್ಕಿನಲ್ಲಿ ಸ್ವಲ್ಪ ಗಮನ ಕೊಡಿ. ಇಲ್ಲದೇ ಹೋದರೆ, ಈಗ ನೀವು ಹೇಳಿದಿರಲ್ಲ. ನಿಮಗೆ ಅಂಕಿ ಅಂಶಗಳು ಜನ ಸ್ಪಂದನ ಕಾರ್ಯಕ್ರಮದಲ್ಲಿ ಎಷ್ಟಿದೆಯೆಂದು. ಈಗ ಇವೆರಡು ಕಾರ್ಯಕ್ರಮಗಳಲ್ಲಿ ಅರ್ಜಿಗಳು ಹೆಚ್ಚಾಗಿಬಿಟ್ಟಿವೆ. ಅವರು ಯಾವುದನ್ನು ವಿಲೇವಾರಿ ಮಾಡಿಲ್ಲವೆಂದು ಹೇಳುತ್ತಾರಲ್ಲ, ಅವು ಯಾವುವೆಂದರೆ, ಒಂದು ಬಿ.ಪಿ.ಎಲ್. ಕಾರ್ಡ್ ಅರ್ಜಿಗಳು, ಇನ್ನೊಂದು old age pensionದು. ಇನ್ನೊಂದು ಯಾವುದೆಂದರೆ ಮನೆ ಕೊಡಿ ಎಂದು ಕೇಳಿಕೊಂಡಿರುವ ಅರ್ಜಿಗಳು. Whatever you go, ಮನೆ ಕೊಡಿ ಎಂದು ಕೇಳಿ ಜನರು ಅರ್ಜಿಗಳನ್ನು ಕೊಡುತ್ತಾರೆ. ಒಂದು ಹಳ್ಳಿಗೆ ಹೋದರೆ ಒಂದು ನೂರು ಜನ ಮನೆ ಕೊಡಿ ಎಂದು ಅರ್ಜಿಗಳನ್ನು ಕೊಡುತ್ತಾರೆ. ಅದರಲ್ಲಿ ಮನೆ ಕೊಡುವುದಕ್ಕಾಗುವುದಿಲ್ಲವೆಂದು ಬರೆದುಬಿಟ್ಟಿದ್ದಾರೆ. ನಾನು ತಹಶೀಲ್ದಾರರಿಂದ format ನ್ನು ತರಿಸಿಕೊಂಡು ನೋಡಿದೆ. ಯಾವ ಯಾವ ಅರ್ಜಿಗಳು ವಿಲೇವಾರಿಯಾಗಿದೆ ಎಂದು ತಿಳಿದುಕೊಳ್ಳಲು ತರಿಸಿ ನೋಡಿದೆ. ಖಾತೆ ಬದಲಾವಣೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಅರ್ಜಿಗಳು ಬಹಳ ಕಡಿಮೆ ಇತ್ತು. ಮತ್ತೆ ಸಂಧ್ಯಾ ಸುರಕ್ಷಾ ಕಾರ್ಯಕ್ರಮದ್ದು ಕೂಡ ಅರ್ಜಿಗಳು ಬಹಳ ಕಡಿಮೆ. ಯಾವ ಕಾರ್ಯಕ್ರಮಕ್ಕೆ ಅರ್ಜಿಗಳು ಹೆಚ್ಚಾಗಿವೆಯೆಂದರೆ, ಒಂದು ಬಿ.ಪಿ.ಎಲ್. ಕಾರ್ಡ್‌ದು, ಇನ್ನೊಂದು ಮನೆಗಳನ್ನು ಕೊಡಿ ಎಂದು ಕೇಳಿರುವ ಅರ್ಜಿಗಳು, ಇನ್ನೊಂದು old

age pension ಕೊಡಿ ಎಂದು ಕೇಳಿಕೊಂಡಿರುವ ಅರ್ಜಿಗಳು. ಈ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಅರ್ಜಿಗಳು ಬಹಳ ಜಾಸ್ತಿಯಾಗಿಬಿಟ್ಟಿವೆ. ಆ ole-age pension ಸ್ಕೀಂಗೆ ಸಂಬಂಧಪಟ್ಟಂತೆ ಪಡೆದಿರುವ ಅರ್ಜಿಗಳನ್ನು ಒಂದೊಂದು ವರ್ಷ, ಎರಡೆರಡು ವರ್ಷದಿಂದ ಬಹಳ ತಹಶೀಲ್ದಾರರು ತಮ್ಮ ಹತ್ತಿರವೇ ಅರ್ಜಿಗಳನ್ನು ಇಟ್ಟುಕೊಂಡುಬಿಟ್ಟಿದ್ದಾರೆ. ಒಂದೊಂದು ವರ್ಷ, ಎರಡೆರಡು ವರ್ಷ. ಇನ್ನು ಕೆಲವರು ಏನು ಮಾಡುತ್ತಾರೆಂದರೆ, ನಿಮ್ಮ ಅನುಭವಕ್ಕೆ ಬರಲಿ ಎಂದು ಈ ವಿಚಾರ ಹೇಳುತ್ತಿದ್ದೇನೆ. ಅಲ್ಲೇನಾಗಿದೆಯೆಂದರೆ, ಈ voters list ಅನ್ನು ತೆಗೆದುಕೊಂಡುಬಿಡುತ್ತಾರೆ. ಆ voters list ನಲ್ಲಿ ವ್ಯಕ್ತಿಯ ಹೆಸರಿನ ಮುಂದೆ 60 ವರ್ಷ ಎಂದು ವಯಸ್ಸನ್ನು ನಮೂದು ಮಾಡಿಬಿಟ್ಟಿರುತ್ತಾರೆ. ಆದರೆ ನಿಜವಾಗಿ ಅವನಿಗೆ 75 ವರ್ಷ ವಯಸ್ಸಾಗಿರುತ್ತದೆ. ಏ ನಿನ್ನ ವಯಸ್ಸು voters list ನಲ್ಲಿ 60 ವರ್ಷ ಎಂದು ಇದೆಯಾದ ಕಾರಣ old-age pension ಕೊಡುವುದಕ್ಕಾಗುವುದಿಲ್ಲ ಎಂದು ಬರೆದು ಕಳುಹಿಸಿಬಿಡುತ್ತಾರೆ. ನಾನು ಹೇಳುವುದೇನೆಂದರೆ authenticated document ಎಂದರೆ ಡಾಕ್ಟರ್ ಕೊಡುವ ಸರ್ಟಿಫಿಕೇಟ್, Doctor is the competent man to decide the age. Voters' list ಬರೆಯುವವನಲ್ಲ. ಆದ ಕಾರಣ ನೀವು voters' list ನೋಡಿಕೊಂಡು ಕ್ರಮ ತೆಗೆದುಕೊಳ್ಳಬೇಡಿ. ಡಾಕ್ಟರ್ ಕೊಟ್ಟಿರುವ ಸರ್ಟಿಫಿಕೇಟ್‌ನಲ್ಲಿ ಅವನಿಗೆ 65 ವರ್ಷ ವಯಸ್ಸಾಗಿದೆಯೆಂದರೆ ಅವನಿಗೆ ಕೊಡಿ ಎಂದರೆ ಅನೇಕ ಜನ ತಹಶೀಲ್ದಾರರು ಕೊಡುವುದಿಲ್ಲ. ಇಲ್ಲಾ, ಇಲ್ಲಾ, voters' list ನಲ್ಲಿ 65 ವರ್ಷ ಎಂದು ಇದೆ, ಸರ್ ಎನ್ನುತ್ತಾರೆ. ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ, ಇಂಥದನ್ನೆಲ್ಲಾ ನೀವು ಮಾಡುವುದಕ್ಕೆ ಹೋಗಬೇಡಿ. ಇಲ್ಲದೇ ಹೋದರೆ ಬಡವರಿಗೆ ಸಿಗುವುದಿಲ್ಲ. ನಾವು ಬಡವರಿಗೆ 400 ರೂಪಾಯಿ ಕೊಡುತ್ತೇವೆ ಎಂದು ಹೇಳಿ ನಿಜವಾಗಿಯೂ ಬಡವನಾಗಿ ಮತ್ತು deserved ಇರತಕ್ಕಂಥವನಿಗೆ old-age pension ಸಿಗಲಿಲ್ಲವೆಂದರೆ ಬಹಳ ಅನ್ಯಾಯವಾಗುತ್ತದೆ. ಅದಕ್ಕಾಗಿ ಇಂಥದ್ದರ ಬಗ್ಗೆ ನೀವು ಅಧಿಕಾರಿಗಳಿಗೆ ಸ್ಪಷ್ಟವಾದ ಸೂಚನೆಗಳನ್ನು ಕೊಡಬೇಕು. ಜನಸ್ಪಂದನದಲ್ಲಿ ಇಂಥವುದ್ದೇ ಕೇಸ್‌ಗಳು ಜಾಸ್ತಿ. ನಾನೂ ಮೂರ್‍ನಾಲ್ಕು ಕಡೆಗಳಲ್ಲಿ ಜನಸ್ಪಂದನ ಕಾರ್ಯಕ್ರಮಗಳಿಗೆ ಹೋಗಿದ್ದೆ. ಅಲ್ಲಿ ತಹಶೀಲ್ದಾರರ ಜೊತೆ ಬೆಳಗ್ಗೆಯಿಂದ ಸಾಯಂಕಾಲದವರೆಗೂ ಕುಳಿತುಕೊಂಡು ಇಂಥದ್ದೆಲ್ಲವನ್ನೂ ನೋಡಿದ್ದೇನೆ. ಡಿಸ್‌ಪೋಸ್ ಆಗಿರುವುದು

ಇಂಥವುಗಳೇ ಜಾಸ್ತಿ. ಖಾತೆ ಮಾಡುವುದಕ್ಕೆ, ಸರ್ವೆ ಮಾಡಿಸಿಕೊಳ್ಳುವುದಕ್ಕೆ ಇರುತ್ತವೆ. ಇದು ಪೆಂಡಿಂಗ್ ಇದ್ದರೂ ಇದನ್ನೂ ಮಾಡುವುದಿಲ್ಲ. ಡಿಸ್‌ಪೋಸ್ ಆಗಿದೆಯೆಂದು ಕೆಲವಕ್ಕೆ ಅಂಕಿ ಅಂಶ ಕೊಟ್ಟಿದ್ದಾರೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಸಿದ್ದರಾಮಯ್ಯನವರು ಹೇಳಿದಂಥ ಸಲಹೆಯನ್ನು ನಾನು ಗಂಭೀರವಾಗಿ ಪರಿಶೀಲಿಸುತ್ತೇನೆ. ಕೆಲವೊಂದು ವಿಚಾರ ಈ ಮನೆಯ ಹಿರಿಯ ಸದಸ್ಯರಿಗೆ ಗೊತ್ತಿರಬೇಕು. ಕೇಂದ್ರ ಸರ್ಕಾರ ಬಿ.ಪಿ.ಎಲ್. ಕಾರ್ಡ್ ಎಂದು ಹೇಳಿ ಅಕ್ಕಿಯನ್ನು ಕೊಡುತ್ತಿರುವುದು ಕೇವಲ 31 ಲಕ್ಷ ಕುಟುಂಬಗಳವರಿಗೆ. ನಾವು ಸುಮಾರು 65 ರಿಂದ 70 ಲಕ್ಷ ಕುಟುಂಬಗಳಿಗೆ ಕೊಡುತ್ತಿದ್ದೇವೆ. ಈಗ ಅಕ್ಕಿ ದರ 20 ರೂಪಾಯಿಗೂ ದಾಟಿದೆ. ಕೇಂದ್ರ ಕೊಡುವುದಿಲ್ಲ. ಇವೆಲ್ಲಾ ಪರಿಸ್ಥಿತಿಯ ಮಧ್ಯೆಯೂ ಸಹ ನಾನು ಇವೊತ್ತು....

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಮೊದಲಿನಿಂದಲೂ ಕೂಡ, ಕೇಂದ್ರ ಸರ್ಕಾರ ಕಡಿಮೆ ಕೊಟ್ಟರೂ ಕೂಡ, ಸ್ಟೇಟ್ ಸಬ್ಸಿಡಿ ಕೊಟ್ಟು ಉಳಿದುದನ್ನು ಕೊಡುತ್ತಿದ್ದೇವೆ.

ನಾನು ವಿನಂತಿ ಮಾಡುವುದೇನೆಂದರೆ ನೀವು ಸಹಕಾರ ಕೊಟ್ಟರೆ, ಈ ರೀತಿಯಾಗಿ ಬರಗಾಲ, ಅತಿವೃಷ್ಟಿ, ರೈತನ ಆತ್ಮಹತ್ಯೆ ಇವೆಲ್ಲದರ ಹಿನ್ನೆಲೆಯಲ್ಲಿ, ಇಷ್ಟು ದೊಡ್ಡ ಪ್ರಮಾಣದಲ್ಲಿ BPL cardನಲ್ಲಿ ಅಕ್ಕಿ ದಾಸ್ತಾನು ಹಂಚುತ್ತಿದ್ದೇವೆ ಅದರ ಸಂಖ್ಯೆಯನ್ನು ಹೆಚ್ಚು ಮಾಡಿಕೊಡಿ ಎಂದು ಕೇಳುವುದಕ್ಕೆ ಒಟ್ಟಾಗಿ ಹೋಗಿ ಒತ್ತಾಯ ಮಾಡಬೇಕೆನ್ನುವ ದೃಷ್ಟಿಯಿಂದ ತಮ್ಮ ಗಮನಕ್ಕೆ ತಂದೆವು.

ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಾನಾಥಸಿಂಗ್‌ರವರು ಕೃಷಿ ಮಂತ್ರಿಗಳಾಗಿದ್ದಾಗ, ನಮ್ಮ Food Secretary ಮತ್ತು Director ಎಲ್ಲಾ ನಾವೇ delegation ಹೋಗಿ ಕೇಳಿದಾಗ, ನಮ್ಮಲ್ಲಿ ಏನು ಅಂಕಿ ಅಂಶ ಇದೆ, ಆ ಅಂಕಿಅಂಶಗಳ ಪ್ರಕಾರ, Planning Commissionನಲ್ಲಿ ಕೊಟ್ಟಂತಹ ಅಂಕಿಅಂಶದ ಪ್ರಕಾರ ನಾವು ಕೊಡುತ್ತೇವೆ ಹೊರತಾಗಿ ಅದಕ್ಕಿಂತ ಜಾಸ್ತಿ ಕೊಡುವುದಕ್ಕಾಗುವುದಿಲ್ಲ, ಒಂದು ರಾಜ್ಯಕ್ಕೆ ಒಂದು, ಇನ್ನೊಂದು ರಾಜ್ಯಕ್ಕೆ ಒಂದು ರೀತಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ನಾವೆಲ್ಲಾ ಆಗಲೇ ಹೋಗಿ ಬಂದಿದ್ದೇವೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಆದರೆ ನಾವು ಒಂದು ಪ್ರಾಮಾಣಿಕ ಪ್ರಯತ್ನವನ್ನು ಕಳೆದ ಮೂರ್ನಾಲ್ಕು ತಿಂಗಳಿನಲ್ಲಿ ಮಾಡಿದ್ದೇವೆ. ಡಿಸೆಂಬರ್ ಅಂತ್ಯದವರೆಗೆ ಒಟ್ಟು 1,35,000,00 ಲಕ್ಷ ಕುಟುಂಬಗಳಲ್ಲಿ, 1,01,000,00 ಲಕ್ಷ ಕುಟುಂಬಗಳ ಭಾವಚಿತ್ರ ಹಾಗೂ ಬೆರಳಚ್ಚು ತೆಗೆದುಕೊಳ್ಳುವ ಪ್ರಕ್ರಿಯೆ ಮುಗಿದಿದೆ. ನಿಮ್ಮ ಸಲಹೆಯ ಹಿನ್ನೆಲೆಯಲ್ಲಿ ನಾವೆಲ್ಲ ನಿಶ್ಚಯ ಮಾಡಿರುವಂಥಾದ್ದು, ನಿಜವಾದ ಬಡವರು ಯಾರು ಅರ್ಜಿಗಳನ್ನು ಕೊಟ್ಟಿದ್ದಾರೆ, ಅದರ ಪರಿಶೀಲನೆಯನ್ನು ಆಮೇಲೆ ಮಾಡೋಣ. ದಿನಾಂಕ 01.02.09ರಿಂದ ತಾತ್ಕಾಲಿಕ ಕಾರ್ಡುಗಳನ್ನು ಕೊಟ್ಟು ದವಸಧಾನ್ಯಗಳನ್ನು ಪ್ರಾರಂಭ ಮಾಡುವುದು. ನಂತರ ಮೂರು ತಿಂಗಳಿನಲ್ಲಿ verification ಮಾಡಿ ಮಾಡೋಣ, ಅಲ್ಲಿಯವರೆಗೂ ಬಡವರು ಅಕ್ಕಿ ಸಿಗಲಿಲ್ಲವೆಂದು ರಸ್ತೆಯಲ್ಲಿ ನಿಂತುಕೊಳ್ಳುವುದು ಬೇಡವೆಂದು ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಆ ದಿಕ್ಕಿನಲ್ಲಿ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ :- ತಾವು cut off date 31 ಎಂದು ಏನಿದೆ ಅದನ್ನು ತೆಗೆದು ಸ್ವಲ್ಪ ಹತ್ತು ದಿವಸ ಮುಂದಕ್ಕೆ ಹಾಕಿ.

ಡಾ॥ ಬಿ.ಎಸ್. ಯಡಿಯೂರಪ್ಪ :- ಏನಾಗುತ್ತದೆ ಎಂದರೆ, ಆ speed cut ಆಗುತ್ತದೆ. ನಾನು ಈ ತಿಂಗಳ ಕೊನೆಯವರೆಗೆ time ಕೊಟ್ಟಿದ್ದೇನೆ. ಈಗಾಗಲೇ ಎಲ್ಲಾ ಕಡೆಯಿಂದ ಬರುತ್ತಿದ್ದಾರೆ. ಆಮೇಲೆ ನೋಡೋಣ. ಈಗಿರುವ ಪ್ರಕಾರ ಆ ರೀತಿ ಮಾಡುವುದು ಕಷ್ಟವಾಗುತ್ತದೆ. ಮಾನ್ಯ ಸಿದ್ಧರಾಮಣ್ಣನವರೇ ಏನಾಗಿದೆ ಎಂದರೆ APL card ಯಾರಿಗೆ ಕೊಟ್ಟಿದ್ದೇವೆ? ಶ್ರೀಮಂತರಿಗೆ ಅಥವಾ ಮಧ್ಯಮ ವರ್ಗದಿಂದ ಮೇಲ್ಪಟ್ಟವರಿಗೆ ಕೊಟ್ಟಿದ್ದೇವೆ. ಅವರೂ ಕೂಡ BPL card ಬೇಕೆಂದು ಕೇಳುತ್ತಾರೆ. ಅಲ್ಲಿ ನಿಜವಾದ ಬಡವರಿದ್ದರೆ BPL card ಕೋಡೋಣ. ಒಟ್ಟಾರೆ ಏನೆಂದರೆ ನೀವು ಆಡಳಿತ ನಡೆಸಿದ್ದೀರಿ, ಮಾನ್ಯ ಕುಮಾರಸ್ವಾಮಿಯವರು ಆಡಳಿತ ನಡೆಸಿದ್ದಾರೆ, ನಾವೂ ಇವತ್ತು ಆಡಳಿತ ಪಕ್ಷದಲ್ಲಿ ಕುಳಿತಿದ್ದೇವೆ. ಚುನಾಯಿತ ಪ್ರತಿನಿಧಿಗಳು ಪಕ್ಷಬೇಧ ಮರೆತು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಬಡವರಲ್ಲಿ ಬಡವರಿಗೆ ಆದ್ಯತೆ ಮೇಲೆ ಕೊಡಿಸುತ್ತೇವೆ, ನಾವು ಗಮನ ಕೊಡುತ್ತೇವೆಂದು ಸ್ವಲ್ಪ ಗಮನ ಕೊಟ್ಟರೆ, ಅನುಕೂಲವಾಗಿ ಇದ್ದವನು ಬಂದಾಗ ಅವನನ್ನು ಪಕ್ಕಕ್ಕೆ ಸರಿಸಿ, ಇಲ್ಲದವನಿಗೆ ಕೊಡುತ್ತೇವೆನ್ನುವಂತಹ ಧೈರ್ಯವನ್ನು ನಾವು ಮಾಡಿದರೆ, ಹೇಗೂ ನಾವು ಶನಿವಾರ ಒಂದು ಸಭೆ ಮಾಡುತ್ತಿದ್ದೇವೆ. ಅಲ್ಲಿ ಗಟ್ಟಿಯಾಗಿ ಹತ್ತು ಜನ ಬಂದು ನಿಂತಾಗ ನೀನು ಬಡವನಲ್ಲ ಹೋಗು ಎಂದು ಅವರೇ ಹೇಳುತ್ತಾರೆ. ಈ ಜಾಗೃತಿ

ಬರುತ್ತದೆ. ಈ ಹಿನ್ನೆಲೆಯಲ್ಲಿ ತಾವು ಸ್ವಲ್ಪ ಸಹಕಾರ ಕೊಟ್ಟರೆ ನಿಜವಾದ ಬಡವರಿಗೆ ಇದರ ಅನುಕೂಲ ಮಾಡಿಕೊಡಬಹುದು ಎನ್ನುವ ಉದ್ದೇಶ ಅಷ್ಟೇ. ಒಂದು ವಿಚಾರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ಯಾಗಬೇಕಾಗುತ್ತದೆ. ಬೇಕಾದರೆ ನಾನು ನಿಮ್ಮನ್ನೆಲ್ಲ ಕರೆಯುತ್ತೇನೆ. ಇಡೀ ಜಗತ್ತು ಇವತ್ತು ಆರ್ಥಿಕ ಹಿನ್ನಡೆಯಿಂದ ತಲ್ಲಣಗೊಂಡಿರುವುದು ತಮಗೆಲ್ಲ ಗೊತ್ತಿರುವಂತಹ ವಿಚಾರ. ಪ್ರಪಂಚದ super power ಎಂದು ಹೇಳಿದಂತಹ ಅಮೆರಿಕಾ ಅತ್ಯಂತ ದಯನೀಯ ಆರ್ಥಿಕ ಸನ್ನಿವೇಶವನ್ನು ಎದುರಿಸುತ್ತಿದೆ. 1.9 ಮಿಲಿಯನ್ ಜನ ಅಮೆರಿಕಾದಲ್ಲಿ ಕೆಲಸವನ್ನು ಕಳೆದುಕೊಂಡಿದ್ದಾರೆ ಎನ್ನುವುದು ನಿಮಗೂ ನಮಗೂ ಗೊತ್ತಿರುವಂಥಾದ್ದು. ಅದರ ಬಗ್ಗೆ ಲೇಖನಗಳ ಮೇಲೆ ಲೇಖನ ಬಂದಿದೆ. Petroleum ಉತ್ಪನ್ನ ಕ್ಷೇತ್ರ ಒಂದೇ ಕಡೆ 7.61 ಲಕ್ಷ ಜನ ಪ್ರಪಂಚದಲ್ಲಿ ಕೆಲಸವನ್ನು ಕಳೆದುಕೊಂಡಿದ್ದಾರೆ. 2007ರ ಮಧ್ಯಭಾಗದಲ್ಲಿ ಪ್ರಾರಂಭವಾಗಿರುವಂತಹ ಈ ಆರ್ಥಿಕ ಕುಸಿತ, 2008ರಲ್ಲಿ ಮಧ್ಯಮ ವೇಗವನ್ನು ಪಡೆದು, ಇವತ್ತು ಅಮೆರಿಕಾದ ಬ್ಯಾಂಕುಗಳು ಸಹಾಯಕ್ಕಾಗಿ ಬುಷ್ ಆಡಳಿತ 700 ಮಿಲಿಯನ್ ಡಾಲರ್ ಸಹಾಯಧನ ಕೊಟ್ಟಿರುವುದು ನಿಮಗೆ ಗೊತ್ತಿರುವಂಥಾದ್ದು. ಸಾಲ ಕಟ್ಟುವುದಕ್ಕೆ ಸಾಧ್ಯವಾಗದೇ ಮನೆಗಳನ್ನು ಮಾರಿ ಬ್ಯಾಂಕ್‌ನಲ್ಲಿ ದುಡ್ಡು ಕೊಟ್ಟು ಬರುತ್ತಿದ್ದಾರೆ ಎನ್ನುವ ದಯನೀಯ ಸ್ಥಿತಿ ನಾವು ಇವತ್ತು ಕಾಣುತ್ತಿದ್ದೇವೆ. ಬ್ರಿಟನ್‌ನ ಬ್ಯಾಂಕ್ ಆಫ್ ಇಂಗ್ಲೆಂಡ್‌ನ ಒಂದು ವರದಿಯಲ್ಲಿ 2.8 ಟ್ರಿಲಿಯನ್ ಡಾಲರ್ ಹಣ credit crisis ನಲ್ಲಿ ನಷ್ಟವಾಗಿದೆ ಎಂದು ಹೇಳುತ್ತಾರೆ. ಈ ರೀತಿ ಆರ್ಥಿಕ ಕುಸಿತ ಇರುವಂತಹ ಒಂದು ಸಂದರ್ಭದಲ್ಲಿ ನಾವು ಒಂದು ವಿಚಾರ ಗಮನಿಸ ಬೇಕಾಗಿರುವುದು ಎಂದರೆ ಚೈನಾ ದೇಶದ್ದು. Agricultural Bank of China ಮತ್ತು ನಿರ್ಮಾಣಕ್ಕೆ ಆದ್ಯತೆ ನೀಡುವ Construction Bank of China ಇವುಗಳು ಅಲ್ಲಿ ವ್ಯವಸ್ಥೆ ಕುಸಿಯದಂತೆ ಅತ್ಯಂತ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದಾರೆ. ಇವತ್ತು ಕೂಡ ಭಾರತದಲ್ಲಿ ಯಾವರೀತಿ ಪರಿಸ್ಥಿತಿ ಇದೆ ಎನ್ನುವುದನ್ನು ಖPM Panel pegs down GDP growth at 7.1%" ಎಂದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. "What is more alarming is that EAC admitted that the combined fiscal deficit will shoot up to more than 10 per cent - well above a "comfortable

level". The fiscal deficit for the centre is expected to shoot up to 8 per cent compared to the budgeted target of 2.5 per cent in 2008-09". ಎಂದು ಹೇಳುತ್ತಾರೆ. ಇದು ಕೇಂದ್ರ ಸರ್ಕಾರದ ಇವತ್ತಿನ ಹಣಕಾಸಿನ ಪರಿಸ್ಥಿತಿ ಇರಬೇಕಾದರೆ, ಅದರ ಪರಿಣಾಮಗಳು ಎಲ್ಲರ ಮೇಲೆ ಸ್ವಲ್ಪ ಸ್ವಲ್ಪ ಆಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ನಾನು ಒಂದು ಮಾತನ್ನು ತಮಗೆ ಹೇಳುತ್ತೇನೆ, ನಮ್ಮ ಯೋಜನಾ ಗಾತ್ರ 26,188 ಕೋಟಿ ರೂಪಾಯಿ ಪೈಕಿ ಬಜೆಟ್‌ನಲ್ಲಿ ಇಡಬೇಕಾಗಿರುವುದು 23,981 ಕೋಟಿ ರೂಪಾಯಿ. ಇದರಲ್ಲಿ ಡಿಸೆಂಬರ್ ವೇಳೆಗೆ 9,488 ಕೋಟಿ ರೂಪಾಯಿ ವೆಚ್ಚ ಆಗಿದೆ. ಇನ್ನು ಸುಮಾರು 14,000 ಕೋಟಿ ರೂಪಾಯಿ ಮಾರ್ಚ್ ಅಂತ್ಯಕ್ಕೆ ವೆಚ್ಚ ಆಗಬೇಕು. ನನಗೆ ವಿಶ್ವಾಸ ಇದೆ, ಇನ್ನು 11,000 ದಿಂದ 12,000 ಕೋಟಿ ರೂಪಾಯಿ ಮಾರ್ಚ್ ಅಂತ್ಯಕ್ಕೆ ಖರ್ಚಾಗುತ್ತದೆ. 2,000 ಕೋಟಿ ರೂಪಾಯಿ .....

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಎಲ್ಲಿ ಆಗುತ್ತದೆ ಹೇಳಿ?

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ಮಾಡಿ ತೋರಿಸುತ್ತೇನಲ್ಲ, ಮಾರ್ಚ್ end ಗೆ ನಿಮ್ಮ ಮುಂದೆ ಬರುತ್ತೇನಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈಗ 5-6 ಕೋಟಿ ರೂಪಾಯಿ deficit ಇದ್ದಾಗ complete ಇಲ್ಲ.

ಡಾ॥ ಬಿ.ಎಸ್. ಯಡಿಯೂರಪ್ಪ :- ಇರಲಿ, ನಾನು ಹಿಂದೆ ಹಣಕಾಸಿನ ಸಚಿವನಾಗಿದ್ದಾಗ ಕೂಡ ಇದೇ ರೀತಿ ಹೇಳಿದ್ದಿರಿ . ಅದರ ಹಿಂದೆ ಕೂಡ ಹೇಳಿದ್ದಿರಿ. ಹಣಕಾಸಿನ ಅಂಕಿಅಂಶಗಳ ಬಗ್ಗೆ ಸತ್ಯವನ್ನು ಮುಚ್ಚಿಡುವುದಕ್ಕೆ ಆಗುವುದಿಲ್ಲವಲ್ಲ ಸರ್. ಇರಲಿ, ನನ್ನ ಹತ್ತಿರ ಏನು ಮಾಹಿತಿ ಇದೆ ಅದನ್ನು ಹೇಳುತ್ತೇನೆ. ಯೋಜನೇತರ ವೆಚ್ಚದಲ್ಲಿ 36,516 ಕೋಟಿ ರೂಪಾಯಿ ಆಯವ್ಯಯದ ಪೈಕಿ 20,601 ಕೋಟಿ ರೂಪಾಯಿ ಡಿಸೆಂಬರ್ ವರೆಗೆ ವೆಚ್ಚವಾಗಿದೆ. ಇನ್ನು 12,000 ರಿಂದ 13,000 ಕೋಟಿ ರೂಪಾಯಿ ವೆಚ್ಚವಾಗಬಹುದು. ವಿಶೇಷವಾಗಿ ವೇತನಗಳು ಮುಂತಾದ ಬಾಬ್ತುಗಳಲ್ಲಿ ಉಳಿತಾಯದ ಸಾಧ್ಯತೆ ಇದೆ ಎಂದು ನಮಗೆ ಇರುವಂತಹ ಅಂಕಿಅಂಶದ ಪ್ರಕಾರ ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇಲ್ಲಿ ಇದ್ದವರೆಲ್ಲ ಸಾಲದ ಬಗ್ಗೆ ಮಾತನಾಡಿದರು. ನೀವೆಲ್ಲ ಆಡಳಿತ ನಡೆಸಿದವರು. ಇದು ಹೌದು ಎಂದು

ಮಾಧ್ಯಮದ ಮೂಲಕ ಜನತೆಗೆ ಗೊತ್ತಾದರೆ ಏನಂದುಕೊಳ್ಳಬೇಕು? ನೀವು ಸಾಲ ತೆಗೆದುಕೊಳ್ಳಲಿಲ್ಲವೇ?ನಾವು ಬಜೆಟ್ provision ಮಾಡಿ ಅವಕಾಶ ಮಾಡಿಕೊಳ್ಳಲಿಲ್ಲವೇ?ಕಳೆದ ವರ್ಷ 5,300 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದಾರೆ. ಈ ವರ್ಷ ನಮ್ಮ ಬಜೆಟ್‌ನಲ್ಲಿ 7,029 ಕೋಟಿ ರೂಪಾಯಿ ಸಾಲ ಮಾಡುವುದಕ್ಕೆ ನಮ್ಮ ಆಯವ್ಯಯದಲ್ಲಿ ತಿಳಿಸಿ ಸದನದ ಅನುಮತಿಯನ್ನು ನಾವು ಪಡೆದಿದ್ದೇವೆ. ಪ್ರತಿವರ್ಷ ನಾವು ಎಷ್ಟು ಸಾಲ ಮಾಡಿದ್ದೇವೆ? 2004-05ರಲ್ಲಿ 3,600 ಕೋಟಿ ರೂಪಾಯಿ. 2005-06ರಲ್ಲಿ 3,687 ಕೋಟಿ ರೂಪಾಯಿ, 2006-07ರಲ್ಲಿ 4,688 ಕೋಟಿ ರೂಪಾಯಿ, 2007-08ರಲ್ಲಿ 5,300 ಕೋಟಿ ರೂಪಾಯಿ, ಈಗ 7,024 ಕೋಟಿ ರೂಪಾಯಿ ಸಾಲ ಪಡೆಯುವುದಕ್ಕೆ ನಾವು provision ಮಾಡಿಕೊಂಡಿದ್ದೇವೆ. ಇದುವರೆಗೂ ನಾವು 1,500 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿರಬಹುದು ಅಷ್ಟೇ. ಸಾಲವನ್ನು ನಾವು ಬಂದಮೇಲೆ ಮಾಡಿರುವುದು ಅಲ್ಲ. ಬಜೆಟ್‌ನಲ್ಲಿ provision ಮಾಡಿಕೊಂಡಿರುವುದು. 2008-09ನ ಆಯವ್ಯಯದಲ್ಲಿ 57,340 ಕೋಟಿ ರೂಪಾಯಿ ವೆಚ್ಚವನ್ನು ಅಂದಾಜು ಮಾಡಿದ್ದೇವೆ. ಯೋಜನೆ ಮತ್ತು ಯೋಜನೇತರ ಸೇವೆಗೆ ಅಂದರೆ ಸಂಬಳ ಸಾರಿಗೆ ಎಲ್ಲಾ ಸೇರಿ ಸುಮಾರು 4,000 ಕೋಟಿ ರೂಪಾಯಿ ಕಡಿಮೆಯಾಗಬಹುದು. 53,000 ಕೋಟಿ ರೂಪಾಯಿ ವೆಚ್ಚವಾಗಬಹುದು ಎಂದು ಅಂದಾಜು ಇದೆ. ಕಳೆದ ವರ್ಷದ ಅಂದಾಜು ವೆಚ್ಚ 47,816 ಕೋಟಿ ರೂಪಾಯಿ. ವಾಸ್ತವಿಕವಾದ ವೆಚ್ಚ 46,780 ಕೋಟಿ ರೂಪಾಯಿ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸುಮಾರು 6,000 ಕೋಟಿ ರೂಪಾಯಿ ವೆಚ್ಚ ಈ ವರ್ಷ ಹೆಚ್ಚಾಗುತ್ತದೆ. ಅಂದರೆ ಶೇಕಡ 14ರಷ್ಟು ಈ ವರ್ಷ ಹೆಚ್ಚಿನ ವೆಚ್ಚವಾಗುತ್ತದೆ ಮತ್ತು ಆಯವ್ಯಯದ ಪ್ರಕಾರ ಶೇಕಡ ಸುಮಾರು 22 ರಷ್ಟು ಹೆಚ್ಚು ವೆಚ್ಚವಾಗುವ ನಿರೀಕ್ಷೆ ಇದೆ. ಜಗತ್ತಿನ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ಹೋಲಿಕೆ ಮಾಡಿದರೆ ಪರವಾಗಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಆಂಧ್ರ ಪ್ರದೇಶ Reserve Bankನ ಅಂಕಿ ಅಂಶದ ಪ್ರಕಾರ 1,10,145 ಕೋಟಿ ರೂಪಾಯಿ ಸಾಲವನ್ನು ಮಾಡಿದೆ. ತಮಿಳುನಾಡು 67,989 ಕೋಟಿ ರೂಪಾಯಿ ಸಾಲ ಮಾಡಿದೆ. ಮಹಾರಾಷ್ಟ್ರ 1,59,765 ಕೋಟಿ ರೂಪಾಯಿ ಸಾಲ ಮಾಡಿದೆ. ನಮ್ಮ ಕರ್ನಾಟಕ ಇತಿಮಿತಿಯಲ್ಲಿದ್ದು, 54,587 ಕೋಟಿ ರೂಪಾಯಿ ಸಾಲ ಮಾಡಿದ್ದೇವೆ. ನಮ್ಮ ರಾಜ್ಯದ ಸಾಲದ ಹೊರೆ ಅತಿಯಾಗಿಲ್ಲ. ಈ ವರ್ಷ ಆಯವ್ಯಯದಲ್ಲಿ ತೋರಿಸಿದಂತೆ 7,029 ಕೋಟಿ ರೂಪಾಯಿ ಸಾಲ ಪಡೆದರೂ ಸಹ ನಮಗೆ ಅದನ್ನು ನಿರ್ವಹಿಸುವಂತಹ ಸಾಮರ್ಥ್ಯ ಇದೆ. ಈ ವರ್ಷ 1,500 ಕೋಟಿ

ರೂಪಾಯಿ ಮಾತ್ರ ಸಾಲ ಪಡೆದಿದ್ದೇವೆ. ನಾವು Reserve Bank ನಿಂದ overdraft ಅಥವಾ. Ways and means advance ಯಾವುದೂ ಒಂದು ಪೈಸೆ ತೆಗೆದುಕೊಂಡಿಲ್ಲ ಎನ್ನುವುದನ್ನು ಈ ಸದನಕ್ಕೆ ನಾನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ ಮತ್ತು ಯಾವುದೇ ಕಾರಣಕ್ಕೂ ಇದರ ಮಿತಿಯನ್ನು ದಾಟುವುದಿಲ್ಲ ಎನ್ನುವಂತಹ ಮಾತನ್ನು ನಾನು ನಿಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು 2009ನೇ ವರ್ಷವನ್ನು ಕನ್ನಡ ಅನುಷ್ಠಾನ ವರ್ಷ ಎಂದು ಮಾಡಬೇಕೆಂದು ನಾವು ಘೋಷಣೆ ಮಾಡಿ, ಕನ್ನಡಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಪ್ರಯತ್ನವನ್ನು ಮಾಡಿದ್ದೇವೆ. 22ನೇ ತಾರೀಖು ಇಲ್ಲಿ ಬೆಳಗಾಂನಲ್ಲಿ ಚರ್ಚೆಯಾದ ಮೇಲೆ ಉತ್ತರ ಕರ್ನಾಟಕಕ್ಕೆ ಏನೂ ಕೊಡುಗೆ ಕೊಡಲಿಲ್ಲ, ರಾಜ್ಯಪಾಲರ ಭಾಷಣದಲ್ಲೂ ಹೆಚ್ಚು ಅನುಕೂಲವಾಗಲಿಲ್ಲವೆಂದು ತಮ್ಮ ಅನಿಸಿಕೆ ಏನಿತ್ತು, ಇದರ ಹಿನ್ನೆಲೆಯಲ್ಲಿ ನಮ್ಮ ಸಚಿವ ಸಂಪುಟದ ಸಭೆ ನಡೆಯಿತು. ಅಲ್ಲಿ ನಾವು ಕೆಲವು ಪ್ರಮುಖ ಈ ಕೆಳಕಂಡ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ.

1. ಗದಗದಲ್ಲಿ ಪಶು ವೈದ್ಯಕೀಯ ಕಾಲೇಜು ಸ್ಥಾಪನೆಗೆ ರೂ. 50 ಕೋಟಿ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ನಿರ್ಧರಿಸಿದೆ.

2. ಉತ್ತರ ಕರ್ನಾಟಕದ ಸಣ್ಣ ಮತ್ತು ಮಧ್ಯಮ ವರ್ಗ ರೈತರ ಪರಿಸ್ಥಿತಿ ಉತ್ತಮಪಡಿಸಲು ಹಾಗೂ ಹೈನುಗಾರಿಕೆಗೆ ಉತ್ತೇಜನ ನೀಡಲು ಒಂದು ಸಾವಿರ ಹಾಲು ಉತ್ಪಾದಕರ ಸಂಘಗಳನ್ನು ಸ್ಥಾಪಿಸಲು ನಿರ್ಧರಿಸಿದೆ. ಮತ್ತು ಅದಕ್ಕೆ ಪೂರಕವಾಗಿ ಮಿಲ್ಕ್ ರೂಟ್‌ನ್ನು ಪ್ರಾರಂಭಿಸಲು ರೂ.5 ಕೋಟಿ ಮಂಜೂರು ಮಾಡಲಾಗಿದೆ.

3. ಬೆಳವಾಗಿ ನಗರದ ಸಮೀಪ ಉತ್ತಮ ತಾಂತ್ರಿಕತೆ ಹೊಂದಿರುವ ಜವಳಿ ಸೈಜಿಂಗ್ ಘಟಕ ಪ್ರಾರಂಭಿಸಿ ನೇಕಾರರ ಅಭಿವೃದ್ಧಿಗೆ ಅನುಕೂಲ ಕಲ್ಪಿಸಲು ಅನುಮೋದನೆ ನೀಡಿದೆ. ಇದಕ್ಕಾಗಿ ಪವರ್ ಲೂಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ರೂ.5 ಕೋಟಿ ನೀಡಲಾಗುವುದು. ಇದರಂತೆ ರಬಕವಿ-ಬನಹಟ್ಟಿಯಲ್ಲೂ ಸೈಜಿಂಗ್ ಘಟಕ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದು.

4. ಬೀದರ್ ಜಿಲ್ಲಾ ಆಸ್ಪತ್ರೆಗೆ ಈಗಿರುವ 300 ಹಾಸಿಗೆ ಜೊತೆಗೆ ಹೆಚ್ಚುವರಿಯಾಗಿ 250 ಹಾಸಿಗೆಗಳನ್ನು ಒದಗಿಸಿ ಮೇಲ್ದರ್ಜೆಗೇರಿಸಲಾಗುವುದು. ಇದರ ಕಟ್ಟಡ ನಿರ್ಮಾಣ, ಶೀತೋಪಕರಣಗಳು ಮತ್ತು ಯಂತ್ರೋಪಕರಣಗಳಿಗಾಗಿ ರೂ.20 ಕೋಟಿ ಮಂಜೂರು ಮಾಡಲಾಗುವುದು.

5. ಉತ್ತರ ಕರ್ನಾಟಕ ಭಾಗದ ಜನರಿಗೆ ಉತ್ತಮ ಗುಣಮಟ್ಟದ ಮಾನಿಸಿ ಆರೋಗ್ಯ ಚಿಕಿತ್ಸೆ ಲಭ್ಯವಾಗಲು ಧಾರವಾಡದಲ್ಲಿರುವ ಮಾನಸಿಕ ಆಸ್ಪತ್ರೆಯನ್ನು ಬೆಂಗಳೂರಿನ ನಿಮ್ಹಾನ್ಸ್ ಮಾದರಿಯಲ್ಲಿ ಒಂದು ಸ್ವಾಯತ್ತ ಸಂಸ್ಥೆಯಾಗಿ ಉನ್ನತ ದರ್ಜೆಗೆ ಏರಿಸಲಾಗುವುದು. ಇದಕ್ಕಾಗಿ ಸದ್ಯಕ್ಕೆ ರೂ.10 ಕೋಟಿ ಮಂಜೂರಾತಿ ಮಾಡಲು ನಿರ್ಧರಿಸಲಾಗಿದೆ.

6. ಬೆಳಗಾವಿ ಸಾರ್ವಜನಿಕ ಆಸ್ಪತ್ರೆ ಸಾಮರ್ಥ್ಯವನ್ನು ಹಾಲಿ ಇರುವ ಹಾಸಿಗೆಗಳ ಸಂಖ್ಯೆಯನ್ನು 740 ರಿಂದ 1000ಕ್ಕೆ ಹೆಚ್ಚಿಸಲು ರೂ.12.50 ಕೋಟಿ ಒದಗಿಸಲು ತೀರ್ಮಾನಿಸಲಾಗಿದ್ದು, ಇದರಿಂದ ಬೆಳಗಾವಿಯಲ್ಲಿ ಸ್ಥಾಪಿಸಲಾದ ಮೆಡಿಕಲ್ ಕಾಲೇಜ್ ಅಭಿವೃದ್ಧಿಗೆ ಅನುಕೂಲವಾಗಲಿದೆ.

7. ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗದಲ್ಲಿ ಶೇ.25 ರಷ್ಟು ಸೀಟುಗಳನ್ನು ಸಿ.ಇ.ಟಿ./ಪಿ.ಜಿ.ಇ.ಟಿ. ಮೂಲಕ ಹಂಚಲು ರಾಜ್ಯ ಸರ್ಕಾರಕ್ಕೆ ಬಿಟ್ಟುಕೊಡುವ ಷರತ್ತಿನೊಂದಿಗೆ ಎಸ್.ಡಿ.ಎಂ. ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಮತ್ತು ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್, ಧಾರವಾಡ ಇವುಗಳಿಗೆ ಡೀಮ್ಡ್ ಯೂನಿವರ್ಸಿಟಿ ಸ್ಥಾನಮಾನ ನೀಡಲು ನಿರಾಕ್ಷೇಪಣಾ ಪತ್ರ ನೀಡಲು ತೀರ್ಮಾನಿಸಲಾಯಿತು.

8. ಕರ್ನಾಟಕದ ಎಲ್ಲಾ ಗಡಿಭಾಗಗಳ ಸಮಗ್ರ ಅಭಿವೃದ್ಧಿಗೆ **"ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ"** ರಚಿಸಲಾಗುವುದು. ಇದಕ್ಕಾಗಿ ಈ ವರ್ಷ ರೂ.10 ಕೋಟಿ ಅನುದಾನ ನೀಡಲು ತೀರ್ಮಾನಿಸಲಾಗಿದೆ.

9. ರಾಜ್ಯದ ಆರ್ಥಿಕ ಬೆಳವಣಿಗೆಗಾಗಿ ರಸ್ತೆ ಸಂಪರ್ಕ ಜಾಲವನ್ನು ಪಿ.ಪಿ.ಪಿ. ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಿರುವ 10,000 ಕಿ.ಮೀ ರಸ್ತೆಯ ಪೈಕಿ 5,500 ಕಿ.ಮೀ ರಸ್ತೆಯನ್ನು ಉತ್ತರ ಕರ್ನಾಟಕದಲ್ಲಿ ಅಭಿವೃದ್ಧಿಪಡಿಸಲಾಗುವುದು. ಈ ರಸ್ತೆಗಳಿಗೆ ಹೊಂದಿಕೊಂಡಿರುವ ಗ್ರಾಮೀಣ ಸಂಪರ್ಕ ರಸ್ತೆಗಳನ್ನೂ ಅಭಿವೃದ್ಧಿಪಡಿಸಲಾಗುವುದು.

10. ಬೆಳಗಾವಿಯಲ್ಲಿ ಕರ್ನಾಟಕ ವಿಧಾನ ಮಂಡಲದ ಅಧಿವೇಶನಗಳನ್ನು ವ್ಯವಸ್ಥಿತವಾಗಿ ನಡೆಸಲು 112 ಎಕರೆ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಿರುವ ಹಲಗಾ-ಬಸ್ತವಾಡಿ ಗ್ರಾಮದ ಸಮೀಪ ಸುಸಜ್ಜಿತ **"ಸುವರ್ಣ ಸೌಧ"** ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

11. ಕಿತ್ತೂರು ಪ್ರಾಧಿಕಾರಕ್ಕೆ ರೂ.5 **ಕೋಟಿ** ನೀಡಲು ನಿರ್ಧರಿಸಲಾಗಿದೆ. ಇದರ ಜೊತೆ ಚೆನ್ನಮ್ಮನ ಹುಟ್ಟೂರಾದ ಕಾಕತಿಯನ್ನು ಸಹ ಸೇರಿಸಲಾಗುವುದು. ಕಿತ್ತೂರು ಮತ್ತು ಕಾಕತಿ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಈ ಪ್ರಾಧಿಕಾರ ಯೋಜನೆ ತಯಾರಿಸಿ ಕ್ರಮ ತೆಗೆದುಕೊಳ್ಳಲಾಗುವುದು.

12. ಸವದತ್ತಿಯಲ್ಲಿ ಪ್ರಸಿದ್ಧ ಪುಣ್ಯ ಕ್ಷೇತ್ರವಾದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಮತ್ತು ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗಾಗಿ **"ಶ್ರೀ ರೇಣುಕಾ ಯಲ್ಲಮ್ಮ ಅಭಿವೃದ್ಧಿ ಪ್ರಾಧಿಕಾರ"** ದ ರಚನೆ ಮಾಡಲಾಗುವುದು. ಈ ಕ್ಷೇತ್ರ ಅಭಿವೃದ್ಧಿಪಡಿಸಲು ರೂ.50 ಕೋಟಿ ವೆಚ್ಚದಲ್ಲಿ ಸಮಗ್ರ ಯೋಜನೆಯೊಂದನ್ನು ತಯಾರಿಸಲಾಗಿದ್ದು, ಇದನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು.

13. ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ **"ಕರ್ನಾಟಕ ರಾಜ್ಯದ ಕುಡಿಯುವ ನೀರು ಮತ್ತು ನೈರ್ಮಲೀಕರಣದ ಅಭಿವೃದ್ಧಿ"** ಯೋಜನೆಯಡಿ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ನದಿ ಮೂಲದಿಂದ ಒದಗಿಸಲು Techno Economic Feasibility Study ಕೈಗೊಳ್ಳಲು K.U.I.D.F.C. ಮುಖಾಂತರ Ideck ಸಂಸ್ಥೆಗೆ ವಹಿಸಲು ತೀರ್ಮಾನಿಸಲಾಗಿದೆ.

14. ಹಿಪ್ಪರಗಿ ನೀರಾವರಿ ಯೋಜನೆಯಡಿಯಲ್ಲಿ ಅಥಣಿ ತಾಲ್ಲೂಕಿನಲ್ಲಿ ಐನಾಪುರ ಪಶ್ಚಿಮ ನಾಲೆ 2ನೇ ಹಂತದ ಮುಖಾಂತರ 229 ಹೆಕ್ಟೇರ್ ಜಮೀನಿಗೆ ನೀರಾವರಿ ಅಂದಾಜು ವೆಚ್ಚ ರೂ.49.25 ಕೋಟಿ ಹಾಗೂ ಕರಿಮಸೂತಿ ಪೂರ್ವ ನಾಲೆ 2ನೇ ಹಂತಕ್ಕೆ ಅಥಣಿ ತಾಲ್ಲೂಕಿನ 7 ಬರಪೀಡಿತ ಗ್ರಾಮಗಳಿಗೆ ನೀರಾವರಿ ಒದಗಿಸಲು ರೂ.61.35 ಕೋಟಿ ವೆಚ್ಚದಲ್ಲಿ ಒಟ್ಟು ರೂ.110.60 ಕೋಟಿ (ಎರಡು ಯೋಜನೆಗಳಿಗೆ) ಕೈಗೊಳ್ಳಲು ಅನುಮೋದನೆ ನೀಡಲಾಯಿತು.

15. ಶಾಹಪುರ ಬ್ರಾಂಚ್ ಕೆನಾಲ್ ಅಡಿ ವಂಚಿತವಾದ ಪ್ರದೇಶಕ್ಕೆ ಬೋನಾಳ್ ಕೆರೆ ಮುಖಾಂತರ ನೀರನ್ನು ಎತ್ತಿ ನೀರಾವರಿ ಒದಗಿಸುವ ಯೋಜನೆಗೆ ರೂ.17 ಕೋಟಿ ವೆಚ್ಚದ ಯೋಜನೆಗೆ ಅನುಮೋದನೆ ನೀಡಲಾಯಿತು.

16. ಈ ಭಾಗದ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಹಿಡಕಲ್ ಅಣೆಕಟ್ಟಿನ ಬಳಿ ಕೆ.ಆರ್.ಎಸ್.ಮಾದರಿಯಲ್ಲಿ ಉದ್ಯಾನವನ ಹಾಗೂ ವಿಹಾರ ಕೇಂದ್ರ ನಿರ್ಮಾಣಕ್ಕೆ ರೂ.5.5 ಕೋಟಿ ಅನುದಾನ ನೀಡಲು ನಿರ್ಧರಿಸಲಾಗಿದೆ.

17. ದೇವದಾಸಿಯರ ಪುನರ್ವಸತಿಗಾಗಿ ವಿಶೇಷ ವಸತಿ ಯೋಜನೆಗಾಗಿ ರೂ.10 ಕೋಟಿ ಮೀಸಲಿಡಲು ತೀರ್ಮಾನಿಸಲಾಯಿತು.

18. ಬೆಳಗಾವಿ ಜಿಲ್ಲೆಯಲ್ಲಿ ಮರು ಭೂಮಾಪನ, ಹಾಗೂ ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಐ.ಎಲ್.ಆರ್.ಐ.ಸಿ. ಕೇಂದ್ರಗಳ ಸ್ಥಾಪನೆ, ಮೈಸೂರು ಮತ್ತು ಗುಲ್ಬರ್ಗಾಗಳಲ್ಲಿನ ಭೂಮಾಪನಾ ತರಬೇತಿ ಸಂಸ್ಥೆಗಳ ಬಲವರ್ಧನೆ ಮತ್ತು ಇ-ಆಡಳಿತ ಹಾಗೂ ಗಣಕಯಂತ್ರ ಬಳಕೆ ಬಗ್ಗೆ ಸಿಬ್ಬಂದಿಗೆ ತರಬೇತಿಗಾಗಿ ಒಟ್ಟು ವೆಚ್ಚ ರೂ.27.48 ಕೋಟಿ ಪ್ರಸ್ತಾವನೆಗಳನ್ನು ಅನುಮೋದಿಸಲಾಯಿತು.

ಈ ಸಚಿವ ಸಂಪುಟದಲ್ಲಿ ತೀರ್ಮಾನಿಸಿದ ಯೋಜನೆಗಳಲ್ಲದೆ ಬೆಳಗಾವಿ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಇನ್ನೂ ಕೆಲವು ವಿಶೇಷ ಯೋಜನೆಗಳು ಈ ಕೆಳಕಂಡಂತೆ ಇವೆ.

ಬೆಳಗಾವಿ ಅಭಿವೃದ್ಧಿಗೆ ವಿಶೇಷ ಯೋಜನೆಗಳು :

1. ಸುವರ್ಣ ಸೌಧಕ್ಕಾಗಿ ಈ ಹಿಂದೆ ನಿಗದಿಯಾಗಿದ್ದ ಬೆಳಗಾವಿ ನಗರದ ವ್ಯಾಕ್ಸಿನ್ ಡಿಪೋ ಸ್ಥಳದಲ್ಲಿ ಒಂದು ಸುಂದರ ಹೆರಿಟೇಜ್ Botanical ಪಾರ್ಕ್ ನಿರ್ಮಾಣ ಮಾಡಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ರೂ.5 ಕೋಟಿ ಈ ವರ್ಷ ನೀಡಲಾಗುವುದು. ಈ ಬಗ್ಗೆ ತಜ್ಞರಿಂದ ಒಂದು ಸಮಗ್ರ ವರದಿ (Master Plan) ತಯಾರಿಸಿ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗುವುದು.

2. ಬೆಳಗಾವಿ ನಗರದ ಸುತ್ತ ವರ್ತುಲ ರಸ್ತೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇದರ ಭೂಸ್ವಾಧೀನಕ್ಕೆ ರೂ.5 ಕೋಟಿ ನೀಡಲಾಗುವುದು. ಈ ರಸ್ತೆ ಸುಮಾರು 38 ಕಿ.ಮೀ ಉದ್ದವಿದ್ದು, ಇದರ ನಿರ್ಮಾಣಕ್ಕೆ ರೂ.150 ಕೋಟಿ ವೆಚ್ಚವಾಗುವುದು. ಇದನ್ನು ಖಾಸಗೀ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುವುದು.

3. ಬೆಳಗಾವಿ ಜಿಲ್ಲೆಯಲ್ಲಿ ಫೌಂಡ್ರಿ ಘಟಕಗಳು ಪ್ರಬಲವಾಗಿದ್ದು, ಬೆಳಗಾವಿ ತಾಲ್ಲೂಕಿನ ಮಚ್ಚೆ ಗ್ರಾಮದ ಬಳಿ ಸುಮಾರು 500 ಎಕರೆ ಪ್ರದೇಶದಲ್ಲಿ Foundry Cluster (KIADB ಮುಖಾಂತರ) ಅಭಿವೃದ್ಧಿಪಡಿಸಲಾಗುವುದು.

4. ಬೆಳಗಾವಿಯ ಕಣಬರ್ಗಿ ಆಟೋ ಪಾರ್ಕ್ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದು, ಇದಕ್ಕೆ ಅತ್ಯಾವಶ್ಯಕವಾಗಿ ಬೇಕಾದಂತಹ ರಸ್ತೆ ಸಂಪರ್ಕವನ್ನು ರಾಷ್ಟ್ರೀಯ ಹೆದ್ದಾರಿ 4 ರಿಂದ ಕಲ್ಪಿಸಲಾಗುವುದು (3 ಕಿ.ಮೀ) (KIADB ಮುಖಾಂತರ).

5. ಬೆಳಗಾವಿಯಲ್ಲಿ ರೈತರ ತೋಟಗಾರಿಕೆ ಉತ್ಪನ್ನಗಳಿಗೆ ಹೆಚ್ಚು ಮೌಲ್ಯ ದೊರೆಯಲು ರಾಷ್ಟ್ರೀಯ ತೋಟಗಾರಿಕಾ ಮಿಷನ್ (NHM) ಸಹಯೋಗದೊಂದಿಗೆ ಸಗಟು ತೋಟಗಾರಿಕಾ ಉತ್ಪನ್ನಗಳ ಮಾರುಕಟ್ಟೆ ಸ್ಥಾಪನೆಗೆ ಸರ್ಕಾರದಿಂದ ಸಹಾಯಧನ ನೀಡಲಾಗುವುದು. ಈ ಮಾರುಕಟ್ಟೆಯನ್ನು ಭಾರತ ಸರ್ಕಾರದ ಮಾರ್ಗಸೂಚಿ ಪ್ರಕಾರ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುವುದು.

6. ಕರ್ನಾಟಕ ಸಕ್ಕರೆ ಸಂಸ್ಥೆಯ ಅಭಿವೃದ್ಧಿ ಮತ್ತು ಉನ್ನತೀಕರಣಕ್ಕೆ ರೂ.5 ಕೋಟಿ ಮಂಜೂರಾತಿ ಮಾಡಲಾಗುವುದು. ಈ ಸಂಸ್ಥೆಯ ಅಭಿವೃದ್ಧಿಯಿಂದ ಕಬ್ಬು ಬೆಳೆಯುವ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಅನುಕೂಲವಾಗಲಿದೆ.

7. ಬೆಳಗಾವಿ ನಗರದ ಒಳಚರಂಡಿ ವ್ಯವಸ್ಥೆಯು ಸಮರ್ಪಕವಾಗಿಲ್ಲದಿರುವುದರಿಂದ ಇದನ್ನು ನವೀಕರಿಸಲು ಹಾಗೂ ವಿಸ್ತರಿಸಲು ರೂ.120 ಕೋಟಿ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಇನ್ನಷ್ಟು ಯೋಜನೆಗಳು :

1. ಕಬ್ಬು ಬೆಳೆಗಾರರಿಗೆ ಅನುಕೂಲವಾಗಲು ಮುಧೋಳದಲ್ಲಿ ಬೆಲ್ಲದ ಸಂಸ್ಕರಣಾ ಹಾಗೂ ಮಾರಾಟ ಸಂಕೀರ್ಣ ಸ್ಥಾಪಿಸಲು ರೂ.5 ಕೋಟಿ ಒದಗಿಸಲಾಗುವುದು.

2. ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ Centre for Climatic Change and Research Centre ಸ್ಥಾಪನೆಗೆ ರೂ.5 ಕೋಟಿ ನೀಡಲಾಗುವುದು.

3. ಚಿಕ್ಕೋಡಿ ತಾಲ್ಲೂಕಿನ ಮಾಂಗೂರ ಗ್ರಾಮದ 50 ಎಕರೆ ಪ್ರದೇಶದಲ್ಲಿ **"ಬೆಳ್ಳಿ ಆಭರಣ ತಯಾರಿಕಾ ಸಮುಚ್ಚಯ"** ಸ್ಥಾಪನೆಗೆ ರೂ.5 ಕೋಟಿ ನೀಡಲಾಗುವುದು.

4. ಹಾವೇರಿ ಜಿಲ್ಲೆಯ ಬ್ಯಾಡಗಿಯಲ್ಲಿ ಹೆಸರಾಂತ ಮೆಣಸಿನಕಾಯಿ ಹಾಗೂ ಇನ್ನಿತರ ಮಸಾಲ ದಿನಸುಗಳ ಸಂಸ್ಕರಣೆಗೆ ಸ್ಪೈಸ್ ಪಾರ್ಕ್ ಸ್ಥಾಪನೆಗೆ ರೂ.10 ಕೋಟಿ (KIADB ಮುಖಾಂತರ) ನೀಡಲಾಗುವುದು.

5. ರಾಜ್ಯದಲ್ಲಿ ಹೆಚ್ಚು ಟ್ರಕ್‌ಗಳನ್ನು ಹೊಂದಿರುವ ಬಸವ ಕಲ್ಯಾಣ ತಾಲ್ಲೂಕಿನಲ್ಲಿ 20 ಎಕರೆ ಪ್ರದೇಶದಲ್ಲಿ ಆಟೋ ಪಾರ್ಕ್ ಸ್ಥಾಪನೆಗೆ ರೂ.10 ಕೋಟಿ ನೀಡಲಾಗುವುದು.

6. ಕೊಪ್ಪಳ ಜಿಲ್ಲೆಯಲ್ಲಿ 10,000 ಎಕರೆ ಪ್ರದೇಶದಲ್ಲಿ ಸ್ಟೀಲ್ (ಉಕ್ಕು) ಪಾರ್ಕ್ ಸ್ಥಾಪನೆ KIADB ಮುಖಾಂತರ ಮಾಡಲಾಗುವುದು. ಇದರಿಂದ ಹೊರದೇಶಗಳಿಗೆ ರಫ್ತು

ಹೊಂದಿರತ್ತಿರುವ ಅದಿರನ್ನು ಇಲ್ಲಿಯೇ ಮೌಲ್ಯವರ್ಧಿತ ಉತ್ಪನ್ನಗಳನ್ನಾಗಿ ಪರಿವರ್ತಿಸಲು ಸಾಧ್ಯವಾಗುವುದು.

7. ನೂತರ ರೈಲ್ವೆ ಯೋಜನೆಗಳಾದ 1) ಧಾರವಾಡ-ಬೆಳಗಾವಿ ನೇರ ಸಂಪರ್ಕ, 2) ಕುಡಚಿ-ಬಾಗಲಕೋಟೆ, 3) ಗದಗ-ಹಾವೇರಿ, 4) ಆಲಮಟ್ಟಿ-ಕೊಪ್ಪಳ ಯೋಜನೆಗಳಿಗೆ ಚಾಲನೆ ನೀಡಲು ರಾಜ್ಯ ಸರ್ಕಾರದಿಂದ ಶೇ. 50 ಪಾಲು ಹಣ ಒದಗಿಸಲಾಗುವುದು.

8. ಉತ್ತರ ಕರ್ನಾಟಕದಲ್ಲಿ ಫ್ಲೋರೈಡ್‌ಬಾಧಿತ 848 ಗ್ರಾಮಗಳಲ್ಲಿ 78 ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು. (ಅಂದಾಜು ಸುಮಾರು ರೂ.600 ಕೋಟಿ).

9. ಕಾರವಾರದಲ್ಲಿ ಪ್ರವಾಸಿ ತಾಣವಾದ ಠ್ಯಾಗೋರ್ ಬೀಚ್ ಅನ್ನು ಅಭಿವೃದ್ಧಿಪಡಿಸಲು ರೂ.5 ಕೋಟಿ ಮಂಜೂರು ಮಾಡಲಾಗುವುದು.

10. ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶವಿದ್ದು ಈ ಗ್ರಾಮಗಳಿಗೂ ಸಹ ರಸ್ತೆ ಸಂಪರ್ಕ ಕಲ್ಪಿಸುವ ಸಲುವಾಗಿ 500 ಕಾಲು ಸಂಕಗಳ ನಿರ್ಮಾಣಕ್ಕೆ ರೂ.15 ಕೋಟಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

11. ಬಿಜಾಪುರ ಜಿಲ್ಲೆಯ ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿಯಲ್ಲಿ 20 ಟಿ.ಎಂ.ಸಿ. ನೀರನ್ನು ಎತ್ತಿ ಮುದ್ದೇಬಿಹಾಳ, ಬಸವನಬಾಗೇವಾಡಿ, ಸಿಂಧಗಿ, ಇಂಡಿ ಮತ್ತು ಬಿಜಾಪೂರ ತಾಲ್ಲೂಕುಗಳ ಒಟ್ಟು 87,067 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಲು ಉದ್ದೇಶಿಸಿದೆ. ಇದರ ಒಟ್ಟು ವೆಚ್ಚ ರೂ.2193 ಕೋಟಿ, 2009-10ನೇ ಸಾಲಿನಲ್ಲಿ ರೂ.63.20 ಕೋಟಿ ವೆಚ್ಚದಲ್ಲಿ ಏತ ನೀರಾವರಿಯ ಹೆಡ್ ವರ್ಕ್ಸ್ ಹಾಗೂ ಕಾಲುವೆಗಳ ಕೆಲಸಗಳನ್ನು ಕೈಗೊಳ್ಳಲಾಗುವುದು.

12. ಬಿಜಾಪುರ ಜಿಲ್ಲೆ ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯ 2ನೇ ಹಂತದಡಿಯಲ್ಲಿ ಇಂಡಿ ಮತ್ತು ಸಿಂಧಗಿ ತಾಲ್ಲೂಕಿನಲ್ಲಿ ಒಟ್ಟು 20,690 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಲು ಯೋಜನೆಯನ್ನು ತಯಾರಿಸಲಾಗಿದೆ. ಇದರ ಒಟ್ಟು ವೆಚ್ಚ ರೂ.255 ಕೋಟಿ, 2009-10ನೇ ಸಾಲಿನಲ್ಲಿ ರೂ.128 ಕೋಟಿ ವೆಚ್ಚ ಮಾಡಿ ಕಾಲುವೆ ಕೆಲಸಗಳನ್ನು ಕೈಗೊಳ್ಳಲಾಗುವುದು.

ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಎಲ್ಲಾ ಪ್ರದೇಶಗಳ ಎಲ್ಲಾ ವರ್ಗಗಳ ಸಮತೋಲನ ಅಭಿವೃದ್ಧಿಗೆ ನಾವು ಕಟಿಬದ್ಧರಾಗಿದ್ದು, ನಮ್ಮ ಈ ಪ್ರಾಮಾಣಿಕ ಪ್ರಯತ್ನ ಈ ದಿಕ್ಕಿನಲ್ಲಿ ನಡೆದಿದೆ. ಬೆಳಗಾವಿ ಮತ್ತು ಉತ್ತರ ಕರ್ನಾಟಕದ ಜೊತೆಗೆ, ಬಹಳ ದಿವಸಗಳಿಂದ ನಿರೀಕ್ಷಿಸುತ್ತಿದ್ದ, ಈ ಅಧಿವೇಶನ ಈಗ ಮುಕ್ತಾಯದ ಹಂತದಲ್ಲಿರುವ ಕಾಲದಲ್ಲಿ ಎರಡು ಪ್ರಮುಖವಾದ ಅಂಶಗಳನ್ನು ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊದಲನೆಯದಾಗಿ ಅತ್ಯಂತ ಸಂತೋಷ ತರುವಂಥ ಪ್ರಯತ್ನವೆಂದರೆ ಕೃಷಿ ಮಿಷನ್ ಅನ್ನು ನಾವು ರಚನೆ ಮಾಡಿದೆವು. ನಾವು ಇದಕ್ಕಾಗಿ ಬಜೆಟ್‌ನಲ್ಲಿ ನೂರು ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಜನವರಿ 26ನೇ ತಾರೀಖಿಗೆ 50,000 ರೈತ ಕುಟುಂಬಗಳು ಯಾರು ಸಾವಯವ ಕೃಷಿಯನ್ನು ಮಾಡುತ್ತಿದ್ದಾರೆ, ಅವರು ಕುಟುಂಬ ಸಮೇತ ಬೆಂಗಳೂರಿಗೆ ಬಂದು ಪ್ರತಿಜ್ಞೆ ಸ್ವೀಕಾರ ಮಾಡುತ್ತಿದ್ದಾರೆ. ಭೂಮಿಗೆ ವಿಷ ಉಣಿಸುವುದಿಲ್ಲ. ಬೀಜಕ್ಕಾಗಿ ಬೇರೆಯವರ ಹತ್ತಿರ ಕೈ ಚಾಚುವುದಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ, ನಾವು ಸ್ವಾವಲಂಬಿಗಳಾಗಿ ಸಾವಯವ ಕೃಷಿಗೆ ಮುಂದೆ ಬರುತ್ತೇವೆಂದು ಅವರೆಲ್ಲರೂ ಇಲ್ಲಿಗೆ ಬರುತ್ತಿದ್ದಾರೆ. ಅದಕ್ಕೆ ನಿಮ್ಮೆಲ್ಲರನ್ನು ಈ ಸಂದರ್ಭದಲ್ಲಿ ಆಮಂತ್ರಣ ಮಾಡುತ್ತಿದ್ದೇನೆ. ಬಿಜಾಪುರ ಜಿಲ್ಲೆಯ ಇಂಡಿ, ಸಿಂಧಗಿ ತಾಲ್ಲೂಕುಗಳಲ್ಲಿ 2006-07ನೇ ಸಾಲಿನಲ್ಲಿ ಬೆಳೆದ ಹೆಚ್ಚು ಕಬ್ಬನ್ನು ಕಾರ್ಖಾನೆಗಳಲ್ಲಿ ನುರಿಸಲು ಸಾಧ್ಯವಾಗದೇ ರೈತರಿಗೆ ಹಾನಿಯಾಗಿರುವುದನ್ನು ಪರಿಶೀಲಿಸಿ, ಅವರಿಗೆ ಉಳಿದ ಬಾಕಿ ಪರಿಹಾರ ಹಣವನ್ನು ನೀಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ.

ಕೆರೆಗಳ ಅಭಿವೃದ್ಧಿಗಾಗಿ 50 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಅತ್ಯಂತ ವಿನಮ್ರತೆಯಿಂದ ಒಂದು ಮಾತನ್ನು ಹೇಳುತ್ತೇನೆ. ಈ ಹಣವನ್ನು, ನಂಜುಂಡಪ್ಪ ವರದಿ ಆಧಾರದ ಮೇಲೆ ಅತಿ ಹಿಂದುಳಿದ 114 ತಾಲ್ಲೂಕುಗಳಿಗೆ ಹಂಚಿದ್ದೇವೆ. ಕಾಂಗ್ರೆಸ್ಸಿನ ಶಾಸರಿರುವ ಕಡೆಗಳಿಗೆ 21 ಕೋಟಿ ರೂಪಾಯಿಗಳು, ಬಿ.ಜೆ.ಪಿ. ಶಾಸಕರಿರುವ ಕಡೆಗಳಿಗೆ 21 ಕೋಟಿ 61 ಲಕ್ಷ ರೂಪಾಯಿಗಳು, ಉಳಿದಂಥ ಸುಮಾರು 7 ಕೋಟಿ ರೂಪಾಯಿಗಳನ್ನು ಜೆ.ಡಿ.(ಎಸ್) ಶಾಸಕರುಗಳಿರುವ ಕಡೆಗೆ ಹಂಚಿದ್ದು, ಎಲ್ಲ ಕಡೆಗೂ ಸಮನಾಗಿ ಹಂಚುವಂಥ ಪ್ರಯತ್ನವನ್ನು ಮಾಡಿದ್ದೇವೆ.

ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಮತ್ತು 12ನೇ ಹಣಕಾಸಿನ ಆಯೋಗದ ಹಣದಲ್ಲಿ, ನಂಜುಂಡಪ್ಪ ವರದಿಯಲ್ಲಿ ಹೇಳಿರುವಂಥ ತಾಲ್ಲೂಕುಗಳಿಗೆ 71 ಕೋಟಿ 33 ಲಕ್ಷ ರೂಪಾಯಿಗಳನ್ನು ಹಂಚಿದ್ದೇವೆ. ಇತರೆ ಎಲ್ಲ

ತಾಲ್ಲೂಕುಗಳಿಗೆ 82 ಕೋಟಿ 29 ಲಕ್ಷ ರೂಪಾಯಿಗಳನ್ನು ಸಮಾನವಾಗಿ ಬಿಡುಗಡೆ ಮಾಡಿದ್ದೇವೆ. R.D.P.R. ನಲ್ಲಿ, ಶೀರ್ಷಿಕೆ-5054, ಗ್ರಾಮೀಣ ರಸ್ತೆ ಅಡಿಯಲ್ಲಿ, ನಂಜುಂಡಪ್ಪ ವರದಿಯಲ್ಲಿ ಬರುವ 114 ತಾಲ್ಲೂಕುಗಳಿಗೆ 45 ಕೋಟಿ ರೂಪಾಯಿಗಳು ಮತ್ತು ಇತರೆ ಎಲ್ಲ ತಾಲ್ಲೂಕುಗಳಿಗೆ 180 ಕೋಟಿ ರೂಪಾಯಿಗಳನ್ನು ಸಮನಾಗಿ ಹಂಚಿಕೆ ಮಾಡುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ.

ಇನ್ನು, ತಾವು ವರ್ಗಾವಣೆ ಬಗ್ಗೆ ಮಾತನಾಡಿದಿರಿ. ನಾನು ಏನು ಹೇಳಲಿ, ಅವರು ಏನು ಹೇಳಲಿ, ಅದನ್ನು ವರದಿ ಮಾಡುವಂಥಾದ್ದನ್ನು ನಮ್ಮ ಮಾಧ್ಯಮ ಸ್ನೇಹಿತರ ಕರ್ತವ್ಯ. ಆದರೆ ಸತ್ಯವನ್ನು ಮರೆಮಾಚಬಾರದು. ಶಾಸಕರುಗಳಿಗೂ ಸತ್ಯ ಸಂಗತಿ ಗೊತ್ತಿರಬೇಕು. ಅದಕ್ಕಾಗಿ ಹೇಳುತ್ತಿದ್ದೇನೆ ಅಷ್ಟೇ. 2004ರಲ್ಲಿ 24,169 ಜನರನ್ನು ವರ್ಗಾವಣೆ ಮಾಡಿದ್ದೀರಿ. 2005ರಲ್ಲಿ 34,160 ಜನರನ್ನು ವರ್ಗಾವಣೆ ಮಾಡಿದ್ದೀರಿ, 2006ರಲ್ಲಿ 44,402 ಜನರನ್ನು ವರ್ಗಾವಣೆ ಮಾಡಿದ್ದೀರಿ. 2007ರಲ್ಲಿ 25,402 ಜನರನ್ನು ವರ್ಗಾವಣೆ ಮಾಡಿದ್ದೀರಿ. ಆದರೆ, 2008ರಲ್ಲಿ ನಾವು ವರ್ಗಾವಣೆ ಮಾಡಿರುವುದು 15.153 ಜನರನ್ನು. ಆದರೆ ಮಾಧ್ಯಮದ ಮೂಲಕ, ತಾವು ಹೇಳುತ್ತಿರುವ ಮಾತನ್ನು ಕೇಳಿದರೆ ನಿಮಗಿಂತಲೂ ಹೆಚ್ಚಾಗಿ, ನಾವು ವರ್ಗಾವಣೆ ದಂಧೆಯನ್ನೇ ಮಾಡುತ್ತಿದ್ದೇವೆ ಎನ್ನುವ ಅರ್ಥ ಬರುವ ರೀತಿಯಲ್ಲಿ ತಾವು ಹೇಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎನ್ನುವುದು ಇದರಿಂದ ತಿಳಿಯುತ್ತದೆ. ಮಲ್ಲಿಕಾರ್ಜುನ ಖರ್ಗೆಯವರು ಹಿರಿಯ ನಾಯಕರಿದ್ದಾರೆ. ಅವರ ಬಗ್ಗೆ ನಮಗೆ ಗೌರವವಿದೆ. ಅವರಿಗೆ ಅಂಕಿಅಂಶಗಳನ್ನು ತಪ್ಪು ಕೊಟ್ಟಿದ್ದಾರೇನೋ, ನಮಗೆ ಗೊತ್ತಿಲ್ಲ. ಪೊಲೀಸ್ ಇಲಾಖೆಯ ಬಗ್ಗೆ ತಾವು ಪ್ರಸ್ತಾಪ ಮಾಡಿದಿರಿ. ನನ್ನ ಹತ್ತಿರ ಎಲ್ಲ ಅಂಕಿಅಂಶಗಳಿವೆ. ಒಂದು ಇಲಾಖೆಯದನ್ನು ಮಾತ್ರ ನಾನು ಹೇಳುತ್ತೇನೆ. ಏಕೆಂದರೆ, ಇದನ್ನು ಬೆಳೆಸುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಒಳಾಡಳಿತ ಇಲಾಖೆಯಲ್ಲಿ 2005ರಲ್ಲಿ 9,089 ವರ್ಗಾವಣೆ ಮಾಡಿದ್ದೀರಿ, 2006ರಲ್ಲಿ 7,749 ವರ್ಗಾವಣೆ ಮಾಡಿದ್ದೀರಿ, 2007ರಲ್ಲಿ 4,816 ವರ್ಗಾವಣೆ ಮಾಡಿದ್ದೀರಿ, 2008ರಲ್ಲಿ ನಾವು 2,669 ವರ್ಗಾವಣೆ ಮಾಡಿದ್ದೇವೆ. ಅದರ ಪಟ್ಟಿಯನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಆದರೆ, ಇಲ್ಲಿ ಚರ್ಚೆಯಾಗುವುದನ್ನು ನೋಡಿದರೆ ಬೇರೆ ರೀತಿಯೇ ಇತ್ತು. ನನಗೆ ಗೊತ್ತಿಲ್ಲದೇ ನೀವೇನಾದರೂ ವರ್ಗಾವಣೆ ಮಾಡುತ್ತಿರುವಿರಾ ಎಂದು ನಮ್ಮ ಅಧಿಕಾರಿಗಳನ್ನು ಕೇಳಿದೆ. ಮಲ್ಲಿಕಾರ್ಜುನ ಖರ್ಗೆಯುವರು ಪ್ರತಿಪಕ್ಷದ ನಾಯುಕರು, ಗೃಹ

ಇಲಾಖೆಯನ್ನು ನೋಡಿಕೊಂಡಂಥವರು ಅವರು, ಅವರಿಗೆ ಅಂಕಿ ಅಂಶಗಳನ್ನು ನಮ್ಮ ಅಧಿಕಾರಿಗಳೇ ಕೊಟ್ಟಿರಬೇಕು, ಆ ಮಾಹಿತಿಯನ್ನು ತೆಗೆದುಕೊಳ್ಳುವಂಥ ಅಧಿಕಾರ ಅವರಿಗಿದೆ. ಏಕೆ ಹೀಗೆ ಅಂಕಿಅಂಶಗಳಲ್ಲಿ ವ್ಯತ್ಯಾಸ ಬರುತ್ತಿದೆ ಎಂದು ನಾನು ನಮ್ಮ ಅಧಿಕಾರಿಗಳನ್ನು ಕೇಳಿದೆ. ರಾಜಕಾರಣದಲ್ಲಿ ಕಲಿಯುವುದು ಎಷ್ಟಿದೆ ನೋಡಿ ಎಂದು ನಾನು ನಮ್ಮವರಿಗೆ ಹೇಳುತ್ತಿದ್ದೆ. ಆವತ್ತು ನಾವು ಪ್ರತಿಪಕ್ಷವಾಗಿ ಕೆಲಸ ಮಾಡುವಾಗಲಾದರೂ ಕಲಿಯಬೇಕಿತ್ತು, ಆದರೆ ನಾವು ಕಲಿಯಲಿಲ್ಲ. ಆಡಳಿತ ಪಕ್ಷವಾಗಿ ಇರುವಾಗಲಾದರೂ ನಮ್ಮ ಶಾಸಕರು ಇಂಥಾದ್ದನ್ನು ಕಲಿಯಬೇಕು. ಹೀಗೆ, ಕೆಲವು ಅಂಕಿ ಅಂಶಗಳನ್ನು ಹೇಳಿ, ಇನ್ನು ಕೆಲವು ಅಂಕಿ ಅಂಶಗಳನ್ನು ಹೇಳದೇ, ರಾಜ್ಯದ ಜನರಲ್ಲಿ ವ್ಯವಸ್ಥಿತವಾಗಿ ಗೊಂದಲ ಉಂಟು ಮಾಡುವುದರಲ್ಲಿ ನಮ್ಮ ಪ್ರತಿಪಕ್ಷದ ನಾಯಕರು ಎಷ್ಟು ಯಶಸ್ವಿಯಾಗುತ್ತಿದ್ದಾರೆ ಎನ್ನುವುದನ್ನು ನೋಡಿ, ಅವರಿಂದ ಪಾಠ ಕಲಿಯದಿದ್ದರೆ, ಇನ್ನು ಯಾವಾಗ ನಾವು ಕಲಿಯುವುದು? ಇರುವಂಥ ಅಂಕಿ ಅಂಶಗಳನ್ನು ನೋಡಿ ನಾನು ಹೇಳುತ್ತಿದ್ದೇನೆ. ಇದರಲ್ಲಿ ಮುಚ್ಚುಮರೆ ಮಾಡುವಂಥಾದ್ದೇನೂ ಇಲ್ಲ ಅಥವಾ ನಿಮ್ಮನ್ನು ಟೀಕೆ ಮಾಡುವುದಕ್ಕಾಗಿ ಹೇಳುತ್ತಿಲ್ಲ. ನಾನು ಏನು ಹೇಳುತ್ತೇನೆ ಎಂದರೆ, Advocates ಎಂದರೆ ನಿಜವಾಗಿ ಹೀಗಿರಬೇಕು. ಮರ್ಡರ್ ಮಾಡಿದವನು ಯಾರು, ಅವನೋ, ಇವನೋ ಎಂದು ಜಡ್ಜ್‌ಗೇ confusion ಆಗಬೇಕು. ಆ ರೀತಿ ನೀವು ವಕಾಲತ್ತು ವಹಿಸಿದರೆ, ನಾವು ಏನು ಮಾಡಬೇಕು ಎಂದು ನಮಗೆ ಅರ್ಥವಾಗಲಿಲ್ಲ.

(ಗೊಂದಲ)

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಅದನ್ನು ಅವರು sportiveಆಗಿ ತೆಗೆದುಕೊಂಡಿದ್ದಾರೆ. Please, ನೀವು ಯಾರೂ ಬೇರೆ ರೀತಿಯಾಗಿ ತೆಗೆದುಕೊಳ್ಳಬೇಡಿ. ಬಹಳ ಮುಖ್ಯವಾಗಿ ನಾನು ಒಂದು ವಿಷಯಕ್ಕೆ ಬರುತ್ತಿದ್ದೇನೆ. ನೀವಂತೂ ನಮ್ಮನ್ನು ದಾಯಾದಿಗಳಾಗಿ ನೋಡುತ್ತಿದ್ದೀರಿ. ಕೇಂದ್ರ ಸರ್ಕಾರವೂ ಸಹ ಒಂದಲ್ಲ ಒಂದು ಕಾರಣಕ್ಕಾಗಿ ನಮ್ಮನ್ನು ಆ ರೀತಿಯೇ ನೋಡಿದರೆ ನಾವು ಬದುಕುವುದು ಹೇಗೆ ಸ್ವಾಮಿ? ನಾವು ಸರ್ಕಾರ ನಡೆಸುವುದು ಹೇಗೆ? ಆಡಳಿತ ಮಾಡುವುದು ಹೇಗೆ? ಹೈದರಾಬಾದ್ ಕರ್ನಾಟಕಕ್ಕೆ ಸಂವಿಧಾನದ 371ನೇ ವಿಧಿಯ ಪ್ರಕಾರ ಒಂದು ವಿಶೇಷ ಸ್ಥಾನಮಾನ ಬೇಕು. ಅದಕ್ಕೆ ನೀವು ಈಗಲಾದರೂ ವಿಶೇಷ ಪ್ರಯತ್ನ ಮಾಡಿ. ಈಗ ಲೋಕಸಭಾ ಚುನಾವಣೆ ಬಂದಿದೆ. ಅದರ ಲಾಭವನ್ನು

ನೀವೇ ಮಾಡಿಕೊಳ್ಳಿ. ಅದರ ಅಗತ್ಯ ಎಷ್ಟಿದೆ ಎನ್ನುವುದನ್ನು ಈ ಭಾಗದಲ್ಲಿರುವಂಥ ಮುಖಂಡರಿಗೆ ನಾವು ಹೇಳುವಂಥ ಅಗತ್ಯವಿಲ್ಲ. ಕರ್ನಾಟಕಕ್ಕೆ ಅಗತ್ಯವಿರುವಂಥ I.I.T. ಮಂಜೂರಾಗಲಿಲ್ಲ. ರಾಜ್ಯಕ್ಕೆ N.S.G. ಘಟಕವನ್ನು ಕೊಡುತ್ತೇವೆ ಎಂದು ಪ್ರಧಾನಿಯವರು ಬರೆದಿದ್ದರು. ಆ paraವನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಈಗ ಅವರ ಆರೋಗ್ಯ ಸುಧಾರಿಸಬೇಕು ಮತ್ತು ಅವರು ಒಳ್ಳೆಯ ಕೆಲಸ ಮಾಡುವಂಥ ಶಕ್ತಿಯನ್ನು ಭಗವಂತ ಅವರಿಗೆ ಕೊಡಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಆದರೆ, ನಮಗೆ N.S.G. ಘಟಕವನ್ನು ಕೊಡಲಿಲ್ಲ. ಹೊಸ ರೈಲ್ವೆ ಯೋಜನೆಗಳನ್ನು ನಮಗೆ ಕೊಡಲಿಲ್ಲ. ಅತಿವೃಷ್ಟಿ ಬಗ್ಗೆ ಹಣವನ್ನು ಕೊಡಲಿಲ್ಲ. ಹೀಗೆ ಯಾವುದೇ ವಿಷಯಕ್ಕೆ ಹೋದರೂ ಸಹ ನಮಗೆ ಒಂದು ರೀತಿಯ ಅನ್ಯಾಯವೇ ಆಗುತ್ತಿದೆಯಲ್ಲ? ಇದಕ್ಕೆ ನಾವೆಲ್ಲರೂ ಒಟ್ಟಾಗಿ ಸೇರಿ ರಾಜ್ಯದ ಹಿತವನ್ನು ಕಾಪಾಡದಿದ್ದರೆ, ಇದಕ್ಕೆ ಪರಿಹಾರ ಸಿಗುವುದು ಯಾವಾಗ ಸ್ವಾಮಿ?

ಇನ್ನು ಅನುದಾನದ ತಾರತಮ್ಯದ ಬಗ್ಗೆ ತಾವು ಮಾತನಾಡಿದಿರಿ. 2004 ರಿಂದ 2008ರವರೆಗೆ ಅಂದರೆ ಒಟ್ಟು ನಾಲ್ಕು ವರ್ಷಗಳಲ್ಲಿ, ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಶೀರ್ಷಿಕೆಯಡಿಯಲ್ಲಿ ಒಟ್ಟಾರೆ ಒದಗಿಸಿರುವಂಥ ಅನುದಾನ 4,563 ಕೋಟಿ ರೂಪಾಯಿಗ್ಗಳು. ಇದರಲ್ಲಿ ಎಷ್ಟರ ಮಟ್ಟಿಗೆ ತಾರತಮ್ಯವನ್ನು ಮಾಡಿದ್ದಾರೆ ಎನ್ನುವುದನ್ನು ನೋಡಿ ಈ ಭಾಗದ ಜನ ಈಗ ಎದ್ದೇಳಬೇಕು. ಒಟ್ಟು ಇರುವ 4,563 ಕೋಟಿ ರೂಪಾಯಿಗಳಲ್ಲಿ, ದಕ್ಷಿಣ ವಲಯಕ್ಕೆ ಖರ್ಚು ಮಾಡಿರುವುದು 3,029 ಕೋಟಿ ರೂಪಾಯಿಗಳು. ಉತ್ತರ ವಲಯಕ್ಕೆ ಮಾಡಿರುವಂಥ ವೆಚ್ಚ 1,533 ಕೋಟಿ ರೂಪಾಯಿಗಳು. ಯಾರು ತಾರತಮ್ಯ ಮಾಡಿದರು ಸ್ವಾಮಿ? ಹಾಸನ ಜಿಲ್ಲೆ ಒಂದಕ್ಕೇ ಅತ್ಯಧಿಕ ಎಂದರೆ, 325 ಕೋಟಿ ರೂಪಾಯಿಗಳು ಹಂಚಿಕೆಯಾಗಿದೆ. ಹೊಳೆನರಸೀಪುರ ತಾಲ್ಲೂಕು ಒಂದಕ್ಕೇ 90 ಕೋಟಿ 44 ಲಕ್ಷ ರೂಪಾಯಿಗಳು ಹಂಚಿಕೆಯಾಗಿದೆ. ಕುಮಾರಸ್ವಾಮಿಯವರು ಈಗ ಇಲ್ಲಿ ಇರಬೇಕಾಗಿತ್ತು. ರಾಮನಗರ ಜಿಲ್ಲೆಗೆ ಒಟ್ಟಾರೆಯಾಗಿ 282 ಕೋಟಿ ರೂಪಾಯಿಗಳು ಹಂಚಿಕೆಯಾಗಿ ದ್ದರೆ, ಅದರಲ್ಲಿ ರಾಮನಗರ ತಾಲ್ಲೂಕಿಗೆ 126 ಕೋಟಿ 35 ಲಕ್ಷ ರೂಪಾಯಿಗಳು ಹಂಚಿಕೆಯಾಗಿದೆ. ಅತ್ಯಂತ ಹಿಂದುಳಿದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿಗೆ 17 ಕೋಟಿ 85 ಲಕ್ಷ ರೂಪಾಯಿಗಳು, ಬೀಳಗಿ ತಾಲ್ಲೂಕಿಗೆ 9 ಕೋಟಿ 46 ಲಕ್ಷ ರೂಪಾಯಿಗಳು, ಭಾಲ್ಕಿ ತಾಲ್ಲೂಕಿಗೆ 13 ಕೋಟಿ 93 ಲಕ್ಷ ರೂಪಾಯಿಗಳು ಹಂಚಿಕೆಯಾಗಿದೆ. ರಾಮನಗರ, ಹೊಳೆನರಸೀಪುರ ತಾಲ್ಲೂಕುಗಳಿಗೆ ಮಾಡಲಾದ

ಹಣದ ಹಂಚಿಕೆಗೆ ಹೋಲಿಸಿದರೆ, ಹಿಂದುಳಿದ ತಾಲ್ಲೂಕುಗಳು ಮತ್ತು ಇತರೆ ತಾಲ್ಲೂಕುಗಳಿಗೆ ಮಾಡಿರುವ ಅನ್ಯಾಯ ಎಷ್ಟಿದೆ ಎಂದರೆ, ಮಂಡ್ಯ ಜಿಲ್ಲೆಗೆ ಹಂಚಿಕೆಯಾದ ಅನುದಾನ 295 ಕೋಟಿ 24 ಲಕ್ಷ ರೂಪಾಯಿಗಳು. ತುಮಕೂರು ಜಿಲ್ಲೆಗೆ ಕೊಟ್ಟಂಥ ಅನುದಾನ 253 ಕೋಟಿ ರೂಪಾಯಿಗಳು. ಗದಗಕ್ಕೆ ಮಾಡಿದ ಹಂಚಿಕೆ 88 ಕೋಟಿ, 47 ಲಕ್ಷ ರೂಪಾಯಿಗಳು. ಬೆಳಗಾವಿಗೆ ಮಾಡಲಾದ ಹಂಚಿಕೆ 86 ಕೋಟಿ 29 ಲಕ್ಷ ರೂಪಾಯಿಗಳು. ಬಳ್ಳಾರಿಗೆ ಮಾಡಲಾದಂಥ ಹಂಚಿಕೆ 74 ಕೋಟಿ 48 ಲಕ್ಷ ರೂಪಾಯಿಗಳು. ಹಣವನ್ನು ಹಂಚಿರುವುದರಲ್ಲಿ ಸಹ ಜಿಲ್ಲೆ ಜಿಲ್ಲೆಗೆ ಹೇಗೆ ಅನ್ಯಾಯವಾಗಿದೆ ಎನ್ನುವುದನ್ನು ನೋಡಬಹುದು. ಅಪೆಂಡಿಕ್ಸ್-ಇ ನಲ್ಲಿ ಹಣ ಹಂಚಿಕೆಯಲ್ಲಿನ ವ್ಯತ್ಯಾಸ. 2005-06ರಲ್ಲಿ ರಾಮನಗರ ಕ್ಷೇತ್ರಕ್ಕೆ ಅಪೆಂಡಿಕ್ಸ್-ಇ ಅಡಿಯಲ್ಲಿ ಗರಿಷ್ಠ ಎಂದರೆ 660 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿದ್ದರೆ, ಕನಿಷ್ಠ 4 ಕೋಟಿ 76 ಲಕ್ಷ ರೂಪಾಯಿಗಳು ಹೊಳೆಹೊನ್ನೂರು ಕ್ಷೇತ್ರಕ್ಕೆ ಹಂಚಿಕೆಯಾಗಿದೆ. ಅತಿ ಹಿಂದುಳಿದ ತಾಲ್ಲೂಕುಗಳಾದ ಗುಬ್ಬಿಗೆ 26 ಲಕ್ಷ ರೂಪಾಯಿಗಳು, ಶಿರಾಕ್ಕೆ 27 ಲಕ್ಷ ರೂಪಾಯಿಗಳು ಹಂಚಿಕೆಯಾಗಿದೆ. 2004-05ರಲ್ಲಿ 67 ಕ್ಷೇತ್ರಗಳಿಗೆ ಅಪೆಂಡಿಕ್ಸ್-ಇ ಅಡಿಯಲ್ಲಿ ಯಾವುದೇ ಅನುದಾನವನ್ನು ಹಂಚಿಕೆ ಮಾಡಿಲ್ಲ. 2005-06ರಲ್ಲಿ ಕೂಡ 129 ಕ್ಷೇತ್ರಗಳಿಗೆ ಸರಾಸರಿ 55 ಲಕ್ಷ 95 ಸಾವಿರ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ. 2004 ರಿಂದ 2008 ರವರೆಗೆ ಹೊಳೆನರಸೀಪುರ ಕ್ಷೇತ್ರಕ್ಕೆ ಒಟ್ಟಾರೆ 7,349 ಲಕ್ಷ ರೂಪಾಯಿಗಳು, ಹಾಸನಕ್ಕೆ 7,012 ಲಕ್ಷ ರೂಪಾಯಿಗಳು, ರಾಮನಗರಕ್ಕೆ 6,450 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ. 2008-09ನೇ ಸಾಲಿನ ಅಪೆಂಡಿಕ್ಸ್-ಇ ನಲ್ಲಿ ಅನುದಾನ ಹಂಚಿಕೆಯಾಗಿಲ್ಲ. ಸಿದ್ದರಾಮಯ್ಯನವರು ಈಗ ಇಲ್ಲಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರಕ್ಕೆ ಉಪ ಚುನಾವಣೆ ನಡೆದಾಗ ಸಿದ್ದರಾಮಯ್ಯನವರನ್ನು ಸೋಲಿಸಬೇಕು ಎನ್ನುವ ಒಂದೇ ಕಾರಣಕ್ಕಾಗಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 5,940 ಫಲಾನುಭವಿಗಳಿಗೆ ನೇರವಾಗಿ ಐದು ಸಾವಿರ ರೂಪಾಯಿಗಳನ್ನು ಕೊಟ್ಟರು. ಅವರು ಬ್ಯಾಂಕರ್ ಹತ್ತಿರ ಹೋಗಿ 500 ರೂಪಾಯಿಗಳನ್ನು ಬಿಟ್ಟು ಉಳಿದ ಹಣವನ್ನು ಡ್ರಾ ಮಾಡಿದರು. ಅದರಿಂದ ಅವರ ಸ್ವಂತ ಅಭಿವೃದ್ಧಿಯೂ ಆಗಲಿಲ್ಲ. ಅವನ ಹಣೆಬರಹ ಏನು ಎನ್ನುವುದು ಅವನಿಗೇ ಗೊತ್ತು. ಇವರು ಉಪದೇಶ ಹೇಳುತ್ತಾರೆ! ನಾವು ನಮ್ಮ ಕಾಲದಲ್ಲಿ ಏನು ಮಾಡಿದ್ದೇವೆ ಎಂದು ಯೋಚನೆ ಮಾಡದೇ ಬರೀ ಆರೋಪ ಮಾಡಿದರೆ ಅದು ಎಷ್ಟರ ಮಟ್ಟಿಗೆ ಸರಿ ಎಂದು ಯೋಚಿಸಬೇಕು. ಹೇಳುತ್ತಾ ಹೋದರೆ

ಇನ್ನೂ ಬಹಳಷ್ಟು ವಿವರಗಳಿವೆ. ಈಗ ಇಷ್ಟೆಲ್ಲಾ ಚರ್ಚೆಯಾಯಿತಲ್ಲ ಸ್ವಾಮಿ? ಬಳ್ಳಾರಿ ವಿಶೇಷ ಪ್ಯಾಕೇಜ್ ಅಡಿಯಲ್ಲಿ 1994ರಿಂದ 2004ರ ಅವಧಿಯಲ್ಲಿ ಘೋಷಣೆಯಾದ ಮೊತ್ತ 3,297 ಕೋಟಿ ರೂಪಾಯಿಗಳು. ಈ ಪ್ಯಾಕೇಜಿನ ಅಡಿಯಲ್ಲಿ ಇದುವರೆಗೆ 1,042 ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ. ಈ ಯೋಜನೆಯ ವಿವಿಧ ಕಾಮಗಾರಿಗಳ ಅನುಷ್ಠಾನಕ್ಕೆ 816 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ. ಈ ಪ್ಯಾಕೇಜಿನ ಅಡಿಯಲ್ಲಿ 2,896 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಡಿಸೆಂಬರ್ ಅಂತ್ಯಕ್ಕೆ 2,642 ಕಾಮಗಾರಿಗಳು ಪೂರ್ಣವಾಗಿವೆ. ಡಿಸೆಂಬರ್ ಅಂತ್ಯಕ್ಕೆ 393 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಈ ರೀತಿಯ ವಿಶೇಷ ಪ್ಯಾಕೇಜನ್ನು ಒಂದೇ ಜಿಲ್ಲೆಗೆ ಕೊಡಬಹುದೇ? ಅಂದರೆ, ನಾವು ಅಧಿಕಾರದಲ್ಲಿದ್ದಾಗ ನಾವು ಸರಿಯಾಗಿದ್ದರೆ, ಮುಂದೆ ಅಧಿಕಾರಕ್ಕೆ ಬಂದವರು ಎಚ್ಚರಿಕೆಯಿಂದ ಆಡಳಿತ ನಡೆಸುತ್ತಾರೆ. ನೀವು ಏನು ಮಾಡಿದಿರೋ ಅದು ಸರಿ. ಲೋಕೋಪಯೋಗಿ ಇಲಾಖೆಯಲ್ಲಿ ಏನೇನು ಕೊಟ್ಟಿದ್ದಾರೆ, ಮಲ್ಲಿಕಾರ್ಜುನ ಖರ್ಗೆಯವರ ಕ್ಷೇತ್ರಕ್ಕೆ ಏನು ತೆಗೆದುಕೊಂಡಿದ್ದಾರೆ, ಯಡಿಯೂರಪ್ಪನವರ ಕ್ಷೇತ್ರಕ್ಕೆ ಏನು ಕೊಟ್ಟಿದ್ದಾರೆ, ಇವೆಲ್ಲವನ್ನೂ ಮುಂದಿನ ಬಜೆಟ್ ಅಧಿವೇಶನದಲ್ಲಿ ಚರ್ಚೆ ಮಾಡೋಣ. ನಾವು ರೆಡಿ ಇದ್ದೇವೆ.

ಯಾವ ಕ್ಷೇತ್ರಗಳಿಗೆ ಅನುದಾನ ಕಡಿಮೆಯಾಗಿದೆ, ಅದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ನಾನು ಭರವಸೆಯನ್ನು ಕೊಡುತ್ತೇನೆ. ಆದರೆ, ಹೊಸದಾಗಿ ಶಾಸಕರು ಬಂದು ಒತ್ತಾಯವನ್ನು ಮಾಡಿದಾಗ ಒಂದಿಷ್ಟು ಕೊಟ್ಟಿರಬಹುದು. ನೀವೇನು ಅಂಕಿಅಂಶ ಕೊಟ್ಟಿದ್ದೀರಿ, ಅದೆಲ್ಲವನ್ನೂ ಪರಿಶೀಲನೆ ಮಾಡಿ ನಂತರ ನಿಮಗೆ ಹೇಳುತ್ತೇನೆ. ಇನ್ನು Airport ಬಗ್ಗೆ ಹೇಳುವುದಾದರೆ, ಗುಲಬರ್ಗಾ ಮತ್ತು ಶಿವಮೊಗ್ಗ ವಿಮಾನ ನಿಲ್ದಾಣಗಳನ್ನು PPP ಆಧಾರದ ಮೇಲೆ ಅಭಿವೃದ್ಧಿಪಡಿಸುವುದಕ್ಕೆ ಈಗಾಗಲೇ ನಾಗಾರ್ಜುನ ಮತ್ತು V.L.S. International Construction Company ಗೆ ಅನುಮೋದನೆ ಮಾಡಿ ಕೊಟ್ಟಿದ್ದೇವೆ. ಆದರೆ, Maytas ಸಂಸ್ಥೆ ಈ ವಿಮಾನ ನಿಲ್ದಾಣ ಕಾಮಗಾರಿಗೆ ಎಲ್ಲಾ clearance ಗಳನ್ನು ಪಡೆದು ನಿರ್ಮಾಣ ಕಾರ್ಯ ಪ್ರಾರಂಭಿಸುವ ಹಂತದಲ್ಲಿದ್ದರೂ, ಈ ಸಮಯದಲ್ಲಿ ಕಂಪನಿ ಮಾಲೀಕರು ಸತ್ಯಂ ಸಂಸ್ಥೆಯ ಮಾಲಿಕರಾಗಿರುವುದರಿಂದ ನಾವು ಅವರಿಗೆ ಕೊಡಬೇಕೆ? ಅಥವಾ ಕ್ಯಾನ್ಸಲ್ ಮಾಡಿ ಬೇರೆಯವರಿಗೆ ಕೊಡಬೇಕೆ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಆದ್ದರಿಂದ, ಈ ವಿಮಾನ ನಿಲ್ದಾಣ ಕಾಮಗಾರಿಯನ್ನು ಪೂರ್ಣಗೊಳಿಸಿ, operations ಪ್ರಾರಂಭ ಮಾಡುವುದಕ್ಕೆ ಸಿದ್ಧವೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ ಮಾಡಬೇಕೆಂದು Chief Secretary ಯವರಿಗೆ ನಾನು ಹೇಳಿದ್ದೇನೆ. Airstrip ಮತ್ತು Airport ಬಗ್ಗೆ ರಾಯಚೂರು, ಚಿಕ್ಕಮಗಳೂರು, ಕುಶಾಲನಗರ ಈ ಮೂರು Airstrip ಗಳಿಗೆ ಈಗಾಗಲೇ ಭೂಮಿಯನ್ನು ಗುರುತಿಸಿದ್ದೇವೆ, ಇವುಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ Karnataka Housing Board ಮುಖಾಂತರ ಕ್ರಮ ಪ್ರಾರಂಭಿಸಿದ್ದೇವೆ. ರಾಯಚೂರು Airstrop ಗೆ DGCA ಮತ್ತು Airport Authority ಯಿಂದ ಅನುಮತಿ ಸಿಕ್ಕಿದ್ದು ಟೆಂಡರ್ ಕರೆದಿದ್ದೇವೆ. ಚಿಕ್ಕಮಗಳೂರು Airstrip ಗೆ DGCA ಮತ್ತು Airport Authority ಯಿಂದ ಇತ್ತೀಚೆಗೆ clearance ಬಂದಿದೆ. Detailed Project Report ತಯಾರಾಗುತ್ತಿದೆ. ಶೀಘ್ರದಲ್ಲಿಯೇ ಟೆಂಡರ್ ಕರೆಯುತ್ತೇವೆ. ಕುಶಾಲ ನಗರಕ್ಕೆ ಸಂಬಂಧಿಸಿದಂತೆ DGCA & AAI ಯಿಂದ ಇನ್ನೂ ತಪಾಸಣೆಯಾಗಿ clearance ಬಂದಿಲ್ಲ, ನಾವು ಹಣ ಸಹ ಕೊಟ್ಟಿದ್ದೇವೆ. ಬಾಗಲಕೋಟೆ, ದಾವಣಗೆರೆ, ಗದಗ, ಚಿತ್ರದುರ್ಗ, ಹಾವೇರಿ, ಚಾಮರಾಜನಗರ ಜಿಲ್ಲೆಗಳಲ್ಲಿ ಸೂಕ್ತ ಸರ್ಕಾರಿ ಜಮೀನು ಇನ್ನೂ ಸಿಕ್ಕಿಲ್ಲ. ಹಾಗಾಗಿ, ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ತಯಾರಿ ನಡೆಸಿದ್ದೇವೆ. ಉಡುಪಿಯಲ್ಲಿ ಸರ್ಕಾರಿ ಸ್ಥಳ ಸಿಕ್ಕಿದೆ. AAI & DGCA ಯ ತಂಡ ಇಲ್ಲಿಯವರೆಗೆ ಸ್ಥಳ ಪರಿಶೀಲನೆಗೆ ಬಂದಿಲ್ಲ. ನಾವು ಅದಕ್ಕಾಗಿ ಹಣವನ್ನು ಸಹ ಕಟ್ಟಿದ್ದೇವೆ. ಬೀದರ್ ವಿಮಾನ ನಿಲ್ದಾಣದ ಬಗ್ಗೆ ಬೀದರ್‌ನಲ್ಲಿರುವ Air force ವಿಮಾನ ನಿಲ್ದಾಣವನ್ನು ನಾಗರಿಕ ವಿಮಾನಯಾನಕ್ಕೆ ಉಪಯೋಗಿಸುವುದಕ್ಕೆ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯಿಂದ ಅನುಮತಿ ಪಡೆದು, ಸುಮಾರು 120 ಎಕರೆ ಭೂಮಿಯನ್ನು ನಮ್ಮ ಖರ್ಚಿನಲ್ಲಿ ಸ್ವಾಧೀನಪಡಿಸಿಕೊಂಡಿದ್ದೇವೆ. Airport Authority of India (AAI) ರವರಿಗೆ terminal ಕಟ್ಟಡ ಕಟ್ಟಿ, ನಾಗರಿಕ ವಿಮಾನಯಾನಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾವೀಗಾಗಲೇ ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ. ದುರಾದೃಷ್ಟವಶಾತ್ ಎಂದರೆ, ಕೇಂದ್ರ ಸರ್ಕಾರ ಈ ಬಗ್ಗೆ ಈವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಎಷ್ಟೇ ಒತ್ತಾಯ ಮಾಡಿದರೂ terminal ಕಟ್ಟಡ ಕಟ್ಟುವುದಕ್ಕೆ ಮುಂದೆ ಬಂದಿಲ್ಲ. ಆ ಕಟ್ಟಡವನ್ನು ನಾವೇ ಕಟ್ಟುವುದಕ್ಕೋಸ್ಕರ ಹಣವನ್ನು

ಕೊಟ್ಟು 4 ಕೋಟಿ ರೂಪಾಯಿಗಳ ಖರ್ಚಿನಲ್ಲಿ ಜಿಲ್ಲಾಧಿಕಾರಿಗಳಿಗೆ ನೀಡಿ, ಕಳೆದ ತಿಂಗಳಿನಲ್ಲಿ terminal ಕಟ್ಟಡ ಸಹ ಪೂರ್ಣ ಮಾಡಿದ್ದೇವೆ. ಈಗ ಬೀದರ್ ವಿಮಾನ ನಿಲ್ದಾಣ ನಾಗರಿಕ ವಿಮಾನಯಾನಕ್ಕೆ ಸಿದ್ಧವಿದ್ದರೂ ಸಹ ಕೇಂದ್ರ ಸರ್ಕಾರ ಅನುಮತಿ ನೀಡಬೇಕಾಗಿದೆ. ಇದು ಯಾವ ನ್ಯಾಯ ಎನ್ನುವುದನ್ನು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಹೈದರಾಬಾದ್ ವಿಮಾನ ನಿಲ್ದಾಣವನ್ನು ನಡೆಸುತ್ತಿರುವಂಥ GMR Company ಯವರು, ನಮಗೆ Hyderabad Airport ಗೆ ಬೀದರ್ ಹತ್ತಿರವಾಗುತ್ತದೆ ಎಂದೇನು objection ಮಾಡಿ ಒತ್ತಾಯ ಮಾಡುತ್ತಿದ್ದಾರೆ, ಆ GMR ಕಂಪನಿಯವರ ಜೊತೆ ನಾವು ಮಾತನಾಡಿದ್ದೇವೆ. ಇದಕ್ಕೆ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಅಡ್ಡಿ ಮಾಡಬೇಡಿ, ಅಪರೂಪಕ್ಕೆ ಈ ಕೆಲಸ ಮಾಡುತ್ತಿದ್ದೇವೆಂದು ಹೇಳಿದ್ದೇವೆ. ರಸಗೊಬ್ಬರದ ಬಗ್ಗೆ ಚರ್ಚೆಯಾಯಿತು. ಖರೀದಿಗಾಗಿ Marketing Federation ಗೆ 25 ಕೋಟಿ ರೂಪಾಯಿಗಳ ಸಹಾಯಧನವನ್ನು ನೀಡುವುದಲ್ಲದೆ, State Bank of Mysore ನಿಂದ ಡಿಸೆಂಬರ್‌ನಲ್ಲಿ 250 ಕೋಟಿ ರೂಪಾಯಿಗಳ ಸಾಲ ಪಡೆಯುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಅವರ working capital ಸಾಲಕ್ಕೆ Marketing Federation ನೀಡುವ ಬಡ್ಡಿಯನ್ನು ರಾಜ್ಯ ಸರ್ಕಾರದಿಂದ ನಾವು ನೀಡುತ್ತಿದ್ದೇವೆ. ಇದಲ್ಲದೆ, Government guarantee ಯನ್ನು ಸಹ ಕೊಟ್ಟಿದ್ದೇವೆ. ಮುಂದಿನ ಮುಂಗಾರು ಬೆಳೆಗೆ advance ಆಗಿ ರಸಗೊಬ್ಬರ ಖರೀದಿ ಮಾಡುವುದಕ್ಕೋಸ್ಕರ Marketing Federation ಗೆ 400 ಕೋಟಿ ರೂಪಾಯಿಗಳವರೆಗೆ ಸಾಲ ಪಡೆಯುವುದಕ್ಕೆ ಮತ್ತು ಆ ಸಾಲದ ಬಡ್ಡಿ ಹಾಗೂ guarantee ನೀಡುವುದಕ್ಕೆ ಈ ತಿಂಗಳು ನಡೆದಂಥ ಸಚಿವ ಸಂಪುಟದ ಸಭೆಯಲ್ಲಿ ನಾವು ಅವರಿಗೆ ಅನುಮತಿಯನ್ನು ಕೊಟ್ಟಿದ್ದೇವೆ. ಇವತ್ತು ಸಾಕಷ್ಟು ಸಮಯವಾಗಿದೆ. ಕೊನೆಯದಾಗಿ, ನನ್ನ ಕರ್ತವ್ಯ. ಈ ಬೆಳಗಾವಿ ಅಧಿವೇಶನದ ಯಶಸ್ಸಿಗೆ ಕಾರಣರಾದಂಥ ಎಲ್ಲರನ್ನೂ ಸ್ಮರಿಸಿ, ನಾನು ಕೃತಜ್ಞತೆಯನ್ನರ್ಪಿಸುತ್ತಿದ್ದೇನೆ. ಮೊದಲಿಗೆ, ಎರಡನೇ ಬಾರಿಗೆ ಅಧಿವೇಶನವನ್ನು ಅತ್ಯಂತ ಅಚ್ಚುಕಟ್ಟಾಗಿ ನಡೆಸಿಕೊಟ್ಟಿದ್ದಕ್ಕೆ ಶ್ರೀ ಪ್ರಭಾಕರ ಕೋರೆಯವರ ನೇತೃತ್ವದ KLE ಸಂಸ್ಥೆಯ ಎಲ್ಲ ಪದಾಧಿಕಾರಿಗಳು, ಅಧ್ಯಾಪಕ ವೃಂದದವರು, ವಿದ್ಯಾರ್ಥಿ, ವಿದ್ಯಾರ್ಥಿನಿಯವರು ಎಲ್ಲರೂ ಸಹಕಾರವನ್ನು ಕೊಟ್ಟಿದ್ದಾರೆ, ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. KLE ಸಂಸ್ಥೆಯ ವಿಶಾಲವಾದ ಇಡೀ

complex ಅನ್ನು ನಮಗೆ ಕೊಟ್ಟು, ಅದ್ಭುತವಾದ ಆತಿಥ್ಯವನ್ನು ನೀಡಿ, ನಮ್ಮೆಲ್ಲರನ್ನೂ ಸಮಾಧಾನ, ಸಂತೋಷದಿಂದಿಟ್ಟಿದ್ದಾರೆ. ಯಾವುದೇ ಕೊರತೆ ಯಾಗದಂತೆ ನೋಡಿಕೊಂಡಿದ್ದಾರೆ. ವಿಧಾನ ಸಭಾಧ್ಯಕ್ಷರು, ಉಪಾಧ್ಯಕ್ಷರು ಹಾಗೂ ವಿಧಾನ ಸಭಾ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೊತೆಗೆ, ವಿಧಾನ ಪರಿಷತ್ತಿನ ಸಭಾಪತಿಗಳು, ಉಪಸಭಾಪತಿಗಳು, ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ಅಧಿವೇಶನದ ಯಶಸ್ಸಿಗೆ ರಾತ್ರಿ ಹಗಲು ಕೆಲಸ ಮಾಡಿದ್ದಾರೆ. ಅವರೆಲ್ಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎರಡೂ ಸದನಗಳಲ್ಲಿ ವಿರೋಧ ಪಕ್ಷದ ನಾಯಕರು ಈ ಅಧಿವೇಶನದ ಯಶಸ್ಸಿಗೆ ಸರ್ಕಾರದೊಂದಿಗೆ ತಾವು ಸಹಕರಿಸಿದ್ದೀರಿ. ಪ್ರತಿಭಟನೆ, ಅಭಿಪ್ರಾಯಭೇದ, ಮೊದಲಾದ ಕಾರಣಕ್ಕೆ ಬಿಸಿಯೇರಿದ ಸಂದರ್ಭದಲ್ಲಿಯೂ ಸಹ ಸಭಾಧ್ಯಕ್ಷರು ಮತ್ತು ಸಭಾಪತಿಯವರು ಮಧ್ಯೆ ನಿಂತು ಸಮಸ್ಯೆಯನ್ನೆಲ್ಲ ಬಗೆಹರಿಸಿದ್ದಾರೆ. ನಮ್ಮ ಎರಡೂ ಮನೆಯ ಶಾಸಕರು ಹತ್ತು ದಿವಸ ಗಳ ಕಾಲ ತಮ್ಮ ಊರು ಮತ್ತು ಕುಟುಂಬಗಳಿಂದ ದೂರವಿದ್ದು, ಈ ಅಧಿವೇಶನದಲ್ಲಿ ಭಾಗವಹಿಸಿ, ಒಳ್ಳೆಯ ಸಲಹೆ ಮತ್ತು ಸಹಕಾರವನ್ನು ಕೊಟ್ಟಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಎಲ್ಲ ಹಿರಿಯ ಅಧಿಕಾರಿಗಳ ತಂಡದೊಂದಿಗೆ, ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಬೆಳಗಾವಿಗೆ ಆಗಮಿಸಿ, ಅಧಿವೇಶನ ಸುಗಮವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಜಿಲ್ಲಾಡಳಿತ ಈ ಅಧಿವೇಶನದ ಯಶಸ್ಸಿಗಾಗಿ ಹಗಲಿರುಳು ಕೆಲಸ ಮಾಡಿದ್ದಾರೆ. ಸಮರ್ಪಕ ವ್ಯವಸ್ಥೆ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಇತರೆ ಅಧಿಕಾರಿ, ಸಿಬ್ಬಂದಿಯವರು ಒಳ್ಳೆಯ ಕೆಲಸ ಮಾಡಿದ್ದಾರೆ, ಅವರಿಗೆಲ್ಲ ಕೃತಜ್ಞತೆ ಸಲ್ಲಿಸುತ್ತೇನೆ. ಎಲ್ಲದಕ್ಕಿಂತ ಹೆಚ್ಚಾಗಿ, ಬೆಳಗಾವಿಯ ನಾಗರಿಕರು ವಿಶೇಷವಾಗಿ ವಿದ್ಯಾರ್ಥಿ ಯುವಜನರು ನಮ್ಮ ಅಭಿನಂದನೆಗೆ ಪಾತ್ರರು. ಮೊದಲೇ ಹೇಳಿದಂತೆ, ಇಡೀ ನಗರವನ್ನು ನವವಧುವಿನಂತೆ ಸಿಂಗರಿಸಿ, ಆತ್ಮೀಯ ಸ್ವಾಗತವನ್ನು ನೀಡಿದ್ದಾರೆ. ಭಾರಿ ಸಂಖ್ಯೆಯ ವಾಹನಗಳ ಓಡಾಟವಿದ್ದರೂ ಸಹ ನಾಗರಿಕರಿಗೆ ಕಿರಿಕಿರಿ ಇದ್ದರೂ ಸಹ ಶಾಂತ ರೀತಿಯಿಂದ ಅವಕಾಶ ಮಾಡಿಕೊಟ್ಟಿದ್ದಾರೆ. ಭಯೋತ್ಪಾದನೆಯ ವಿರುದ್ಧ ವಿದ್ಯಾರ್ಥಿ ಸಮುದಾಯ ದೊಡ್ಡ ಪ್ರಮಾಣದಲ್ಲಿ ಅಭಿಯಾನದಲ್ಲಿ ಭಾಗವಹಿಸಿದ್ದಾರೆ. ಮಾಧ್ಯಮದ ಸ್ನೇಹಿತರು, ಬೆಳಗಾವಿ ಮಾಧ್ಯಮಗಳ ಸ್ನೇಹಿತರು ಮತ್ತು ಬೆಂಗಳೂರಿನಿಂದ ದೊಡ್ಡ ಸಂಖ್ಯೆಯಲ್ಲಿ ಬಂದಿರುವ ಮಾಧ್ಯಮಗಳ ಸ್ನೇಹಿತರು ಎರಡೂ ಸದನಗಳ ಕಲಾಪಗಳು ಹಾಗೂ ವಿವಿಧ ಸಭೆ ಸಮಾರಂಭಗಳ ಬಗ್ಗೆ ರಾತ್ರಿವರೆಗೆ ಕಾಯ್ದು, ಒಳ್ಳೆಯ

ರೀತಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ, ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಅವರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಒಟ್ಟಾರೆ, ಬೆಳಗಾವಿ ವಿಧಾನ ಮಂಡಲದ ಅಧಿವೇಶನಕ್ಕೆ ಸಹಕರಿಸಿದ ಎಲ್ಲರನ್ನೂ ತುಂಬು ಹೃದಯದಿಂದ ನಾನು ಅಭಿನಂದಿಸಿ ಮುಂದೆ ಅಧಿವೇಶನ ನಡೆಯುವಂಥ ಕಾಲದಲ್ಲಿಯೂ ಸಹ ಇದೇ ರೀತಿಯ ಸಹಕಾರವನ್ನು ನೀಡಬೇಕೆಂದು ವಿನಂತಿ ಮಾಡಿ, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೇನು ಚರ್ಚೆಯಾಯಿತು, ಇನ್ನೂ ಅನೇಕ ವಿಷಯ ಗಳನ್ನು ಹೇಳುವುದಿದೆ. ಆದರೆ, ಮನೆಗೆ ಹೋಗುವ ಸಮಯದಲ್ಲಿ, ಅಧಿವೇಶನ ಮುಗಿಯುವ ಸಂದರ್ಭದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಅಥವಾ ಪ್ರತಿಪಕ್ಷದ ನಾಯಕರಿಗೆ ಮುಜುಗರ ಉಂಟು ಮಾಡುವ ಅನೇಕ ಅಂಶಗಳನ್ನು ನಾನು ಹೇಳುವುದರಿಂದ ಯಡಿಯೂರಪ್ಪನವರೆ, ಹಳೆಯ ಕತೆ ಏಕೆ? ಅಧಿಕಾರ ಸಿಕ್ಕಿದೆ ಈಗ ನೀವೇನು ಮಾಡಿದಿರಿ? ಎಂದು ಮಲ್ಲಿಕಾರ್ಜುನ ಖರ್ಗೆಯವರು ಎದ್ದು ನಿಂತು ಗಟ್ಟಿಯಾಗಿ ಕೇಳುತ್ತಾರೆಂದು ನನಗೆ ಗೊತ್ತಿರುವುದರಿಂದ ಅವರಿಗೆ ಮುಜುಗರ ಮಾಡಬಾರದೆಂದು ಇನ್ನೂ ಅನೇಕ ವಿಷಯಗಳಿದ್ದರೂ ಅವುಗಳನ್ನಿಲ್ಲಿ ಪ್ರಸ್ತಾಪ ಮಾಡದೆ, ಮುಂದಿನ ಬಜೆಟ್ ಅಧಿವೇಶನದಲ್ಲಿ, ಗಣಿಗಾರಿಕೆ ಬಗ್ಗೆ ಮುಗಿದಿದೆ ಎಂದು ಅವರು ಹೇಳಲಿಲ್ಲ, ನಾವು ಮುಂದಿನ ಅಧಿವೇಶನದಲ್ಲಿ ಅದನ್ನು ಮುಂದುವರಿಸುತ್ತೇವೆಂದು ಹೇಳಿದ್ದಾರೆ, ಏಕೆಂದರೆ, ಅವರಿಗೆ ಬೇರೆ issues ಇಲ್ಲ. ಅದಕ್ಕೆ ಇದನ್ನಿಲ್ಲಿಯೇ ಬಿಟ್ಟು ಅಲ್ಲೇನೂ ಹೊಸ ವಿಷಯ ಪ್ರಸ್ತಾಪಿಸಿ ಎಂದು ನಾನು ವಿನಂತಿಸಿ, ಅಧ್ಯಕ್ಷರೆ, ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ನನ್ನ ಮನವಿ ಏನೆಂದರೆ, ಉತ್ತರ ಕರ್ನಾಟಕದಲ್ಲಿ ಈ Session ಅನ್ನು ನಡೆಸಿದ್ದೇವೆ. ಸಾಕಷ್ಟು ಸದಸ್ಯರಿಗೆ ಮಾತನಾಡುವ ಅವಕಾಶ ಸಿಕ್ಕಿಲ್ಲ. ಆದರೆ, ಕನಿಷ್ಠ ಅವರು clarification ಅನ್ನಾದರೂ ಕೇಳುವುದಕ್ಕೆ ಅವರಿಗೆ ಅವಕಾಶ ಕೊಟ್ಟರೆ ಅವರವರ ಭಾಗದ ಏನಾದರೂ ಅಭಿವೃದ್ಧಿ ಕೆಲಸಗಳ ಬಗ್ಗೆ ಮುಖ್ಯಮಂತ್ರಿಯವರನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇಲ್ಲವಾದರೆ, ಇದು ಕೇವಲ ಅವರಿಗೆ ಬೇಕಾದಂಥವರ ಕಾರ್ಯಕ್ರಮವನ್ನು ಘೋಷಣೆ ಮಾಡಿ ಹೋದ ಹಾಗಾಗುತ್ತದೆ. ಮೊದಲನೆಯದಾಗಿ, ನನ್ನ ಅನಿಸಿಕೆ ಏನೆಂದರೆ, ಇವರು ಸಚಿವ ಸಂಪುಟದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಕೆಲವು ನಿರ್ಣಯಗಳನ್ನು

ತೆಗೆದುಕೊಂಡಿದ್ದಾರೆ. ಏಕೋ, ಏನೋ ಗೊತ್ತಾಗಲಿಲ್ಲ, ಕೆಲವು ಪ್ರಮುಖ ಅಭಿವೃದ್ಧಿ ಕೆಲಸಗಳು ಗುಲಬರ್ಗಾ ಭಾಗದ ಮತ್ತು ರಾಯಚೂರು ಇದರಲ್ಲಿ ಯಾವುದೂ ಕೂಡ ಇಲ್ಲ. ರಸ್ತೆ ಹದಗೆಟ್ಟು ಹೋಗಿದ್ದು, ಕೆಲವು ನೀರಾವರಿ ಯೋಜನೆಗಳು, Medical College, ಗುಲಬರ್ಗಾದ್ದು, ಆಸ್ಪತ್ರೆಯ ಬಗ್ಗೆ ನೋಡಿದರೆ ಇವುಗಳ ಬಗ್ಗೆ ಏನೂ ಹೇಳಿಲ್ಲ. ನೀವು ಬೆಳಗಾವಿಯ ಬಗ್ಗೆ ಆಸಕ್ತಿ ತೋರಿಸಿ ಕೆಲವು ಮಾಡಿದ್ದೀರಿ, ಬಿಜಾಪುರದಲ್ಲಿ ನೀರಾವರಿ ಬಗ್ಗೆ ಘೋಷಣೆ ಮಾಡಿದಿರಿ ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇದೆಲ್ಲ ಮಾಡಬೇಕಾದರೆ, ಸಾವಿರಾರು ಕೋಟಿ ರೂಪಾಯಿ ಗಳು ಬೇಕು. ಮುಂದಿನ ಬಜೆಟ್‌ನ ಒಂದು ಮಿನಿ ಬಜೆಟ್ ರೀತಿ ಇದೆ. ಏಕೆಂದರೆ, ಈ ಬಜೆಟ್ ಅನ್ನೇ implement ಮಾಡುವುದಕ್ಕೆ ನಿಮ್ಮಲ್ಲಿ 6000, 7000 ಕೋಟಿ ರೂಪಾಯಿಗಳ ಕೊರತೆ ಇದ್ದಾಗ ಇದನ್ನು implement ಮಾಡುವುದೆಲ್ಲಿಂದ ಬರುತ್ತದೆ? ಇದೊಂದು ಪ್ರಚಾರದ ಕಾಗದ ಅಷ್ಟೇ ಇದೊಂದು hand bill, pamplet. ಇದು ಬಿಟ್ಟರೆ, ಎರಡು ತಿಂಗಳಲ್ಲಿ ಇವುಗಳಲ್ಲಿ ಒಂದೆರಡಾದರೂ ಅನುಷ್ಠಾನಕ್ಕೆ ಬರುವುದಕ್ಕೆ ಸಾಧ್ಯವೇ? ಮೂರನೆಯದಾಗಿ, ತಾರತಮ್ಯ ಮಾಡಿರುವ ಬಗ್ಗೆ ನಾವು ಕೇಳಿದೆವು. ಖಂಡಿತವಾಗಿ ನಾನು ಸರಿಪಡಿಸುತ್ತೇನೆ, ಎಲ್ಲಾ ಶಾಸಕರಿಗೆ ತಾರತಮ್ಯವಾಗಿದೆ, ಅದು ಗ್ರಾಮೀಣಾಭಿವೃದ್ಧಿಯಲ್ಲಾಗಲಿ, PWD ಯಲ್ಲಾಗಲಿ, ಸಣ್ಣ ನೀರಾವರಿಯಲ್ಲಾಗಲಿ, ಕಟ್ಟಡಗಳಲ್ಲಾಗಲಿ ಇದು ತಪ್ಪಾಗಿದೆ, ಇದನ್ನು ನಾನು ಸರಿಪಡಿಸಿಕೊಡುತ್ತೇನೆ ಎನ್ನುವುದನ್ನು ಹೇಳಲಿಲ್ಲ. CR Fund ನಲ್ಲಿಯೂ discrimination, roads ನಲ್ಲಿಯೂ discrimination, Rural Road Development ನಲ್ಲಿಯೂ discrimination ಇದೆ. ಕನಿಷ್ಠ ಅದರ ಬಗ್ಗೆಯಾದರೂ ನಮ್ಮ ಶಾಸಕರಿಗೆ ಹೇಳಬೇಕಲ್ಲವೇ? ನಾವು ಕುಳಿತಿದ್ದೇಕೆ? ವ್ಯತ್ಯಾಸಗಳಿದ್ದು ಅದನ್ನು ಸರಿಪಡಿಸುತ್ತೀರಿ ಎನ್ನುವ ದೃಷ್ಟಿಯಿಂದ ನಾವು ನಿಮ್ಮ ಗಮನಕ್ಕೆ ತಂದಿದ್ದು. ಇಲ್ಲಿ ನಿಮ್ಮ ನಿಮ್ಮ ಜಗಳವೇ ನಡೆಯಿತು. ಹೊಳೆನರಸೀಪುರಕ್ಕೆ ಇಷ್ಟು ಆಯಿತು, ರಾಮನಗರಕ್ಕೆ ಇಷ್ಟು ಆಯಿತು, ಶಿಕಾರಿಪುರಕ್ಕೆ ಇಷ್ಟು ಆಯಿತು, ಶಿವಮೊಗ್ಗಕ್ಕೆ ಇಷ್ಟು ಆಯಿತು, ಹಾವೇರಿಗೆ ಅಷ್ಟಾಯಿತು, ನಮ್ಮದೇನು ಸ್ವಾಮಿ? ನಿಮ್ಮಿಬ್ಬರ ಜಗಳವನ್ನು ಕೇಳುವುದೇ, ನೋಡುವುದೇ ಆಯಿತೇ ವಿನಾ ನಮ್ಮ ಎಲ್ಲಾ ಶಾಸಕರ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆ ತಾವೇನೂ ಹೇಳಲಿಲ್ಲ. ಹೊಳೆನರಸೀಪುರದಲ್ಲಿ, ರಾಮನಗರದಲ್ಲಿ ಹೀಗೆ ಮಾಡಿದರು ಎಂದು ನೀವು ಹೇಳಲಿಲ್ಲವೇ? ಇದನ್ನೇ ನೀವು ಹೇಳಿಕೊಂಡು ಸಮರ್ಥನೆ ಮಾಡಿಕೊಂಡಿರಿ. ನಿಮ್ಮ

ಕಾಲದಲ್ಲಿಯೂ ಅದೇ ಮಾಡಿದ್ದು ಅಲ್ಲವೇ? ನೀವಿಬ್ಬರೂ ಕೂಡಿ ಶಾಸಕರಿಗೆ ಆಗ ಅನ್ಯಾಯ ಮಾಡಿದಿರಿ. Further ಅದನ್ನೇ continue ಮಾಡಿದ್ದೀರಿ. ಅದಕ್ಕೆ, ದಯವಿಟ್ಟು ಅದನ್ನು ಸರಿಪಡಿಸುತ್ತೇವೆಂದು ಹೇಳಿ. ಸ್ಪಷ್ಟವಾಗಿ ಎಲ್ಲಾ ಶಾಸಕರಿಗೆ ಸರಿಸಮಾನವಾಗಿ ಕೊಟ್ಟು ಉಳಿದಂಥ amount ಏನಾದರೂ ಇದ್ದರೆ ಅಥವಾ ನೀವು ಮುಖ್ಯಮಂತ್ರಿಗಳಾಗಿದ್ದೀರಿ, ಯಾರೋ ಬರುತ್ತಾರೆ, discretion ಇದೆ ಕೊಡಿ ಎಂದು ಹೇಳುತ್ತಾರೆ, ಕೊಡಿ. ಆದರೆ, ನಿಮ್ಮ ಪಕ್ಷದ MLA ಗೇ ಒಂದು ಅಭಿವೃದ್ಧಿ ಕೆಲಸ, ಬೇರೆ MLA ಗಳಿಗೇ ಒಂದು ಅಭಿವೃದ್ಧಿ ಕೆಲಸವೆಂದರೆ, ನಾವೇನೂ ಈ ದೇಶದಲ್ಲಿ ಹುಟ್ಟಿಲ್ಲವೇ? ಈ ರಾಜ್ಯದಲ್ಲಿ ಇಲ್ಲವೇ? ನಾವು ಆರಿಸಿ ಬಂದಿಲ್ಲವೇ? ನಮಗೆ responsibility ಇಲ್ಲವೇ? ಇವತ್ತಿನ ದಿವಸ ತಾವೆಲ್ಲ ನೋಡಬಹುದು.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು, ತಾವೆಲ್ಲ ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇದನ್ನು ತಾವು ಸರಿಪಡಿಸಬೇಕೆಂದು ನಾವು ತಮ್ಮಿಂದ ನಿರೀಕ್ಷೆ ಮಾಡುತ್ತಿದ್ದೇವೆ. ಈ ಅಭಿವೃದ್ಧಿ ಘೋಷಣೆಯಲ್ಲೂ ತಾರತಮ್ಯವಾಗಿದೆ, ಅದನ್ನು ಸರಿಪಡಿಸಬೇಕು. ಮೂರನೆಯದಾಗಿ, ration card ವಿಷಯದ ಬಗ್ಗೆ ಈಗಾಗಲೇ ಮಾನ್ಯ ಸಿದ್ಧರಾಮಯ್ಯನವರು ಮಾತನಾಡಿದ್ದಾರೆ. ಅದರ ಸಮಯವನ್ನು extension ಮಾಡುವುದಲ್ಲದೆ ಬಡವರಿಗೆ Photo ತೆಗೆಸಿಕೊಳ್ಳುವ ಶಕ್ತಿ, affidavit ಹಾಕುವ ಶಕ್ತಿ ಇರುವುದಿಲ್ಲ, ಅದಕ್ಕೆ ಸರ್ಕಾರವೇ ಅದನ್ನು ವಹಿಸಿಕೊಂಡು ಮಾಡಬೇಕು. ಇಲ್ಲದಿದ್ದರೆ, ಇದು ದೊಡ್ಡ ತಾಪತ್ರಯವಾಗುತ್ತದೆ ಮತ್ತು ನಿಜವಾದ ಬಡವರಿಗೆ ಅದು ಸಿಗದೆ ವತ್ಯಾಸವಾಗುತ್ತದೆ. ಅದಕ್ಕೆ ಈ ಮೂರು ವಿಷಯಗಳ ಬಗ್ಗೆ ಸ್ಪಷ್ಟ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು :- ಇನ್ನೂ ಇಬ್ಬರು ಮೂವರು ಶಾಸಕರು ಮಾತನಾಡಬೇಕೆಂದು ಕೇಳುತ್ತಿದ್ದಾರೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಅವರು ಮಾತನಾಡಿ ಮುಗಿಸಿದ ಮೇಲೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು :- ಅವರಿಗೆ ಉತ್ತರ ಕೊಟ್ಟ ಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಗುಲಬರ್ಗಾದಲ್ಲಿ ಸಚಿವ ಸಂಪುಟ ಸಭೆ ನಡೆದಾಗ ಆ ಭಾಗಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ. ಎರಡನೆಯದಾಗಿ, ಗಡಿ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಆ ಭಾಗದಲ್ಲಿ ಏನೇನು ಮಾಡಬೇಕೋ ಅದನ್ನು ಮಾಡುತ್ತೇವೆ. ಬೀದರ್ ಜಿಲ್ಲಾ ಆಸ್ಪತ್ರೆಗೆ ಈಗಿರುವ 300 ಹಾಸಿಗೆಗಳ ಜೊತೆಗೆ ಹೆಚ್ಚುವರಿ 250 ಹಾಸಿಗೆಗಳನ್ನು ಒದಗಿಸಿ ಅದನ್ನು ಮೇಲ್ದರ್ಜೆಗೆ ಏರಿಸುತ್ತೇವೆಂದು ಹೇಳಿದ್ದೇವೆ. ರಾಜ್ಯದ ಆರ್ಥಿಕ ಬೆಳವಣಿಗೆ, ರಸ್ತೆ ಜಾಲ ಸರಿಪಡಿಸುವುದಕ್ಕೆ ಈ ಭಾಗಕ್ಕೆ ಐದೂವರೆ ಸಾವಿರ ಕಿಲೋ ಮೀಟರ್ ರಸ್ತೆ ಅಭಿವೃದ್ಧಿಗೆ ಬರುವ 10-12 ದಿವಸಗಳಲ್ಲಿ ಕಾರ್ಯಕ್ರಮ ರೂಪಿಸುತ್ತಿದ್ದೇವೆನ್ನುವ ಮಾತನ್ನು ಹೇಳಿದ್ದೇನೆ. ರಾಜ್ಯದಲ್ಲಿ ಹೆಚ್ಚು truck ಹೊಂದಿರುವ ಬಸವಕಲ್ಯಾಣದ ಅಭಿವೃದ್ಧಿಗಾಗಿ ಅಲ್ಲಿ 20 ಎಕರೆ ಪ್ರದೇಶದಲ್ಲಿ Auto Park ಮಾಡುತ್ತೇವೆಂದು ಹೇಳಿದ್ದೇವೆ. ಕೊಪ್ಪಳ ಜಿಲ್ಲೆಯಲ್ಲಿ 10 ಸಾವಿರ ಎಕರೆ ಪ್ರದೇಶದಲ್ಲಿ Steel Park ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದೇವೆ. ಉತ್ತರ ಕರ್ನಾಟಕದ ಗುಲಬರ್ಗಾದಲ್ಲಿ 50% flouride problem ಇದೆ. ಅಲ್ಲಿ flouride problem ಇರುವ 842 ಗ್ರಾಮಗಳಲ್ಲಿ 78 ಕುಡಿಯುವ ನೀರಿನ ಬಗ್ಗೆ ಹೇಳಿದ್ದೇವೆ. ನೀವೇನು ಸಲಹೆ ಕೊಟ್ಟಿದ್ದೀರಿ, ಬಜೆಟ್ ಸಂದರ್ಭದಲ್ಲಿ ಅದರ ಬಗ್ಗೆ ಸಮಾಲೋಚನೆ ಮಾಡಿ ಏನು, ಎಷ್ಟು ಸಾಧ್ಯವೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಗುಲಬರ್ಗಾ ಜಿಲ್ಲೆ 13 ತಾಲ್ಲೂಕು ಹೊಂದಿದ್ದು, ಇದು ಇಡೀ ರಾಜ್ಯದಲ್ಲಿ ಬಿಜಾಪುರ್ united district ಏನಿತ್ತು ಮತ್ತು ಬೆಳಗಾಂ ಜಿಲ್ಲೆ ಏನಿದೆ, ಅದರ ಸರಿಸಮಾನವಾಗಿರುವ ಜಿಲ್ಲೆ. ಈ ಜಿಲ್ಲೆಯನ್ನು ನೀವು ಪೂರ್ತಿ neglect ಮಾಡಿದ್ದೀರಿ, ಏಕೆ? ಅಲ್ಲಿಂದ ನಾವು ಆರಿಸಿ ಬಂದಿದ್ದು ತಪ್ಪೇ? ಅಥವಾ ನಿಮಗೆ ಸಹನೆ ಇಲ್ಲವೇ?

ಡಾ॥ ಬಿ.ಎಸ್. ಯಡಿಯೂರಪ್ಪ :- ನೀವು ಅಧಿಕಾರದಲ್ಲಿದ್ದಾಗ ಎಷ್ಟೆಲ್ಲ ಮಾಡಿಕೊಂಡಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾವು ಮಾಡಿದ್ದೇವೆಂದೇ ನಾನು 9 ಸಲ ಆರಿಸಿ ಬಂದಿದ್ದೇನೆ. ಅದು ಬಿಡಿ. ಜಿಲ್ಲೆ ಪ್ರಶ್ನೆ ಬಂದಾಗ ತಾವು ಗಮನಿಸಬೇಕು. ಈ ರೀತಿ ತಾರತಮ್ಯ ಮಾಡಿದರೆ ಹೇಗೆ?

ಡಾ॥ ಬಿ.ಎಸ್. ಯಡಿಯೂರಪ್ಪ :- ನಾನು ಗಮನದಲ್ಲಿಟ್ಟುಕೊಂಡು ಮುಂದೆ ಆದ್ಯತೆ ಏನು ಕೊಡಬೇಕೋ ಕೊಡುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಬೀದರೆ ಹೇಗಿದೆ ಎಂದರೆ, ಕರ್ನಾಟಕದ ಕಿರೀಟ ಎಂದರೆ ಅದು ಬೀದರ್. ಏಕೆಂದರೆ, ಎಲ್ಲದಕ್ಕಿಂತ ಮೇಲೆ ಇರುವ ಜಿಲ್ಲೆ ಬೀದರ್ ಆಗಿದೆ. ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಅದರಲ್ಲೂ ಬೆಳಗಾಂನಲ್ಲಿ ಅಧಿವೇಶನ ನಡೆಯುವಾಗ ಕಳೆದ ಸಲವೂ ನಾವು ಹೇಳಿದ್ದೆವು, ನಮಗೆ actually ಬೀದರ್‌ನಿಂದ ಬೆಂಗಳೂರಿನಗೆ 650 ಕಿಲೋ ಮೀಟರ್, ಬೆಳಗಾಂ 550 ಕಿಲೋ ಮೀಟರ್ ದೂರವಿದೆ. ಕೇವಲ 100 ಕಿಲೋ ಮೀಟರ್ ವ್ಯತ್ಯಾಸವಿದೆ. ಆದರೂ, ಉತ್ತರ ಕರ್ನಾಟಕದಲ್ಲಿ ಎಲ್ಲದಕ್ಕಿಂತ ಹಿಂದುಳಿದ ಜಿಲ್ಲೆ ಎಂದರೆ ಬೀದರ್. ಹಾಗಾಗಿ, ಮುಖ್ಯಮಂತ್ರಿಯವರು ನಂಜುಂಡಪ್ಪ ವರದಿ ಪ್ರಕಾರ ಕಳೆದ ವರ್ಷ, ಈ ವರ್ಷ ಎರಡೂ ಸೇರಿ 4000 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದರೆ, ಡಾ॥ ನಂಜುಂಡಪ್ಪನವರ ವರದಿ ಅನುಷ್ಠಾನ ಸಮಿತಿಯ ಅಧ್ಯಕ್ಷರ ಮೊನ್ನೆಯ ಒಂದು ಹೇಳಿಕೆ ಪ್ರಕಾರ 800 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ನಾವೆಲ್ಲ ಆ ಭಾಗದಿಂದ ಬಂದಿರುವುದರಿಂದ ನಮ್ಮ ಕಣ್ಣೆದುರಿಗೆ ಯಾವುದೂ regular scheme ನಲ್ಲಿ ಅಂದರೆ, bore-well, bore-well pipe, ಸಣ್ಣ ಸಣ್ಣ ರಸ್ತೆಗಳನ್ನು ತೆಗೆದುಕೊಂಡಿದ್ದಾರೆಯೇ ವಿನಾ ಆ ಭಾಗದ ಯಾವುದೇ ಒಂದು ಸರ್ವಾಂಗೀಣ ಅಭಿವೃದ್ಧಿ ಕಡೆಯಿಂದ ಯಾವುದೇ ಕೆಲಸ ತೆಗೆದುಕೊಂಡಿರುವುದು ನಮಗೆ ಕಾಣಿಸಲಿಲ್ಲ. ಇದನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಗಮನಿಸಬೇಕು. ನನ್ನ ಬೀದರ್ ದಕ್ಷಿಣ ಕ್ಷೇತ್ರವು ಸಮಗ್ರ ಹಳ್ಳಿಗಳಿಂದ ಕೂಡಿದ ಕ್ಷೇತ್ರವಾಗಿದೆ. ಅದರಲ್ಲಿ 100 ಹಳ್ಳಿಗಳು ಬರುತ್ತವೆ. 80 ಹಳ್ಳಿಗಳು ಬೀದರ್ ತಾಲ್ಲೂಕಿಗೆ ಸೇರಿವೆ. ಅವು ನಂಜುಂಡಪ್ಪ ವರದಿಯಲ್ಲಿ ಬರುವುದಿಲ್ಲ. ಭಾಲ್ಕಿ ಮತ್ತು ಬೀದರ್‌ನಲ್ಲಿ 50-60 ಹಳ್ಳಿಗಳು ಬರುತ್ತವೆ. ಹಾಗಾಗಿ ಈಗಾಗಲೇ ನಾನು ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಈ ಹಳ್ಳಿಗಳಿಗೆ ಯಾವುದೇ ಅನುದಾನ ಸಿಗುತ್ತಿಲ್ಲ. ಈ ಹಳ್ಳಿಗಳು ಆ ಭಾಗದಲ್ಲಿ ಬರುವುದರಿಂದ ಮುಂದಿನ ದಿನಗಳಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಈ ಹಳ್ಳಿಗಳಿಗೂ ಆದ್ಯತೆ ಕೊಡಬೇಕು. ಏಕೆಂದರೆ, ಈ ಹಳ್ಳಿಗಳು ಬೀದರ್ ತಾಲ್ಲೂಕಿಗೆ ಸೇರಿವೆಯೇ ವಿನಾ ಆ ಹಳ್ಳಿಗಳು ಯಾವ ರೀತಿಯಿಂದಲೂ ಅಭಿವೃದ್ಧಿಯಾಗಿಲ್ಲ. ಕಳೆದ ಸಾಲ ನಾನು city MLA ಆಗಿ

ಆರಿಸಿಬಂದಿದ್ದರೂ ನಮಗೆ 50 ಲಕ್ಷ ರೂಪಾಯಿಗಳ Hyderabad-Karnataka Development Fund ಬಂದಿತ್ತು. ಆಮೇಲೆ ಬೇರೆ ಹಳ್ಳಿ ಜಾಸ್ತಿ ಇರುವ ಜನರಿಗೆ 60-70-80 ಲಕ್ಷ ರೂಪಾಯಿಗಳಷ್ಟು ಬಂದಿದೆ. ಈ ವರ್ಷ ಎಲ್ಲರಿಗೂ ಕೇವಲ 30 ಲಕ್ಷ ರೂಪಾಯಿಗಳು ಮಾತ್ರ ಬಂದಿದೆ. ಈ ವರ್ಷ ಏಕೆ ಕಡಿಮೆ ಮಾಡಿದ್ದೀರಿ? ನಮಗೆ 50 ಲಕ್ಷ ರೂಪಾಯಿಗಳು ಬಂದಿಲ್ಲ. Airport ಬಗ್ಗೆ ಹೇಳಿದರು. ಆ Airport ಈಗಾಗಲೇ complete ಆಗಿದ್ದು, ಅದಕ್ಕೆ ಚಾಲನೆ ಕೊಟ್ಟಿದ್ದರೆ ಬೀದರ್ ಜಿಲ್ಲೆಗೆ ಅನುಕೂಲವಾಗುತ್ತಿತ್ತು. ಮುಂದಿನ ದಿನಗಳಲ್ಲಿ ಬೆಳಗಾಂನಲ್ಲಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಸಂಗೊಳ್ಳಿ ರಾಯಣ್ಣನವರ ಫೋಟೋ ಹಾಕಿ ಆ ವ್ಯಕ್ತಿಗೂ ಗೌರವ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಖಮರುಲ್ ಇಸ್ಲಾಂ :- ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ Corporation ಬಗ್ಗೆ ಹೇಳುತ್ತಿದ್ದರು. ಮಾನ್ಯ ಮುಖ್ಯಮಂತ್ರಿಯವರು 100 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ, declare ಆಯಿತು, ಕೆಲಸ ಮಾಡುವುದಕ್ಕೆ ಪಟ್ಟಿ ತಯಾರಿಸಿದ್ದಾರೆ. Gulbarga Corporation comprised two constituencies. ಗುಲ್ಬರ್ಗಾ ಉತ್ತರದಲ್ಲಿ 31 ವಾರ್ಡ್, ಗುಲಬರ್ಗಾ ದಕ್ಷಿಣದಲ್ಲಿ 24 ವಾರ್ಡ್ ಇವೆ. ಅಲ್ಲಿ ನಮ್ಮ Cooperation Minister ರವರ ನೇತೃತ್ವದಲ್ಲಿ ಒಂದು Committee ಮಾಡಿದ್ದಾರೆ. ಪಟ್ಟಿ ನೋಡಿದ ಮೇಲೆ ನನಗೆ ಬಹಳ ನೋವಾಗಿದೆ, ಗುಲ್ಬರ್ಗಾ ಉತ್ತರ ಕ್ಷೇತ್ರದ ಜನರಿಗೆ ನೋವಾಗಿದೆ. ಅಲ್ಲಿ ಎರಡು Storm water Drain 6.25, 5.25 ಕೋಟಿ ರೂಪಾಯಿಗಳ ಕೆಲಸ ಕೋಟನೂರಿಗೆ ಹೋಗುತ್ತಿದೆ. ಕಪನೂರಿನಲ್ಲಿ ಒಂದು downfall ಇದೆ, ಅಲ್ಲಿ ಒಂದು ಲಕ್ಷ ಇಲ್ಲ, ಒಂದು ಸಾವಿರ ಗುಲಬರ್ಗಾ ಉತ್ತರಕ್ಕೆ ಆಗಿಲ್ಲ. 71 ಕೋಟಿ ರೂಪಾಯಿಗಳ ಕೆಲಸ ರಸ್ತೆ ಸಲುವಾಗಿ ಕೊಟ್ಟ ಮೇಲೆ ಒಂದು ಲಕ್ಷ ರೂಪಾಯಿ ಸಹ ನಮ್ಮ ಕ್ಷೇತ್ರಕ್ಕೆ ಬಂದಿಲ್ಲ. 4 Circle ಗಳನ್ನು ಸುಂದರೀಕರಣ ಮಾಡುವ ಸಲುವಾಗಿ ತೆಗೆದುಕೊಂಡಿದ್ದಾರೆ. ಉತ್ತರ ಕ್ಷೇತ್ರದಲ್ಲಿ ಒಂದು circle ಅನ್ನೂ ತೆಗೆದುಕೊಂಡಿಲ್ಲ. ನಮ್ಮ ದೇಶದಲ್ಲಿ cremation ಗೆ 33 ಕೋಟಿ ರೂ. ಇದೆ. ಇಲ್ಲಿಯ ಜನ graveyard ಗೆ ಹೋಗುತ್ತಿದ್ದಾರೆ, ಏಕೆಂದರೆ, everybody will not be burnt. There are more than 50% people who

will be buried. Grave yardಗೆ ಒಂದು ಲಕ್ಷ ರೂಪಾಯಿ ಸಹ ಇಲ್ಲ. ಕೇವಲ cremation ground ಗೆ 3 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. Discrimination ಏಕೆ ಮಾಡುತ್ತಿದ್ದೀರಿ? ಕೇವಲ cremation ಗೆ ಕೊಡುತ್ತಿದ್ದೀರಿ, grave yard ಗೆ ಕೊಡುತಿಲ್ಲ. ಈ ತರಹ ಇದು highly discriminative ಇದೆ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿ ಮಾಡುತ್ತಿದ್ದೇನೆ. ತಾವು ಆದೇಶ ಕೊಟ್ಟು Cooperative Minister ರವರು ಆ ಪಟ್ಟಿ ಸರಿಪಡಿಸಬೇಕೆಂದು ಹೇಳಿ. ಆ ತರಹ ಮಾಡಿದರೆ ಜನರಿಗೆ ಒಳ್ಳೆಯದಾಗುತ್ತದೆ. ತಾವು discrimination ಮಾಡಬಾರದು. ಮಾನ್ಯ ಮುಖ್ಯಮಂತ್ರಿಯವರು promise ಮಾಡಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹೇಳಿದರು. ರಾಮನಗರ, ಮಂಡ್ಯ, ಹೊಳೆನರಸೀಪುರ, ಹಾಸನ, ಇಲ್ಲಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದಾರೆಂದು ಹೇಳಿದರು. ಆ ಸಂದರ್ಭದಲ್ಲಿ ಹಣಕಾಸಿನ ಸಚಿವರು ಯಾರು ಆಗಿದ್ದರು ಎಂಬುದನ್ನೂ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಅದೇ ಸಂದರ್ಭದಲ್ಲಿ ಹೊಳೆನರಸೀಪುರಕ್ಕೆ ಎಷ್ಟು ಹೋಗಿದೆ ಎನ್ನುವುದರ ಜೊತೆಗೆ ಶಿಕಾರಿಪುರಕ್ಕೆ ಎಷ್ಟು ಹೋಗಿದೆ ಎಂಬುದನ್ನು ಕೂಡ ಬಹಿರಂಗಪಡಿಸಬೇಕು. ಇವರಿಬ್ಬರು ಕ್ಯಾಬಿನೇಟ್‌ನಲ್ಲಿ ಕುಸ್ತಿ ಮಾಡಿಕೊಂಡು ಹೊಳೆನರಸೀಪುರ ಮತ್ತು ಶಿಕಾರಿಪುರಕ್ಕೆ ಹಂಚಿಕೊಂಡರೆ ವಿನಾ ಹೊಳೆನರಸೀಪುರ ಅಭಿವೃದ್ಧಿಯಾದರೆ ಇಡೀ ದಕ್ಷಿಣ ಕರ್ನಾಟಕ ಅಭಿವೃದ್ಧಿಯಾಗುವುದಿಲ್ಲ. ರಾಮನಗರ ಅಭಿವೃದ್ಧಿಯಾದರೆ ಇಡೀ ದಕ್ಷಿಣ ಕರ್ನಾಟಕ ಅಭಿವೃದ್ಧಿಯಾಗುವುದಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ತಿಳಿಸಬೇಕು. ಜೊತೆಗೆ ಆಕಸ್ಮಿಕವಾಗಿ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಂಥವರು, ಅವರಿಗೆ ಉತ್ತರ ಕರ್ನಾಟಕದ ಬಗ್ಗೆ ಐಡಿಯಾ ಇರಲಿಲ್ಲ. ಉತ್ತರ ಕರ್ನಾಟಕದ ಬಗ್ಗೆ ಹೆಚ್ಚು ಓಡಾಟ ಮಾಡಿ, ವಿರೋಧ ಪಕ್ಷದ ನಾಯಕರಾಗಿ ಹೆಚ್ಚು ತಿಳಿದುಕೊಂಡಿರತಕ್ಕಂಥವರು, ಆವತ್ತು ಅವರೇ ಹಣಕಾಸಿನ ಸಚಿವರಾಗಿ ಬಜೆಟ್‌ನ್ನು ಕೊಟ್ಟಂಥವರು. ಆ ದಿವಸ ಉತ್ತರ ಕರ್ನಾಟಕಕ್ಕೆ ಕೊಡಬೇಡಿ ಎಂದು ಮುಖ್ಯಮಂತ್ರಿಗಳಾಗಲಿ ಅಥವಾ ಯಾರೂ ಕೂಡ ಅಡ್ಡಿಪಡಿಸಿರಲಿಲ್ಲ. ಆ ದಿವಸ ಉತ್ತರ ಕರ್ನಾಟಕಕ್ಕೆ ಕೊಡಬೇಡಿ ಎಂದು ನಾವು ಯಾರು

ಹೇಳಿರಲಿಲ್ಲ, ಕೊಡಬಹುದಾಗಿತ್ತು. ದಯಮಾಡಿ ಯಾವುದೋ ನಾಲ್ಕೈದು ಕ್ಷೇತ್ರ ಅಭಿವೃದ್ಧಿಯಾಗಿದೆ ಎಂದು ನಮ್ಮನ್ನೆಲ್ಲ ಕಡೆಗಣಿಸತಕ್ಕಂಥದ್ದಲ್ಲ. ಅವರೇನು ತಾರತಮ್ಯವನ್ನು ಈಗ ಮಾಡಿದ್ದಾರೆ, ಈ ತಾರತಮ್ಯವನ್ನು ಹೋಗಲಾಡಿಸಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ಎಲ್ಲಾ ಕ್ಷೇತ್ರಗಳಿಗೂ ಸಮನಾಗಿ ಹಂಚಿಕೆ ಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳನ್ನು ನಾನು ತಮ್ಮ ಮೂಲಕ ವಿನಂತಿಸುತ್ತೇನೆ. ನಮ್ಮ ರಾಯಚೂರು ಜಿಲ್ಲೆಯನ್ನು ಈ ಪಟ್ಟಿಯಲ್ಲಿ ಸಂಪೂರ್ಣವಾಗಿ ಮರೆತುಬಿಟ್ಟಿದ್ದೀರಿ. ದಯವಿಟ್ಟು ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ನಾಲೆಗೆ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡುವುದಕ್ಕೆ ಈಗಾಗಲೇ ನಮ್ಮ ಸರ್ಕಾರದಲ್ಲಿ ನಮ್ಮಮಾನ್ಯ ಮಂತ್ರಿಗಳು ಸರ್ವೇಯನ್ನು ಮಾಡಿ ಇಟ್ಟುಕೊಂಡಿದ್ದಾರೆ. ಅದಕ್ಕಾದರೂ ಇದನ್ನು ಸೇರಿಸಿದರೆ ನಾವು ಒಂದು ಸ್ವಲ್ಪ ಮುಖ ತೋರಿಸುವುದಕ್ಕೆ ಬರುತ್ತದೆ. ಹೀಗಾಗಿ ದಯವಿಟ್ಟು ಇದನ್ನಾದರೂ ಸೇರಿಸಿ ಅದಕ್ಕೆ 100 ಕೋಟಿ ರೂಪಾಯಿ ಇಟ್ಟಿದ್ದಾರೆ. ಅದನ್ನಾದರೂ ಸೇರಿಸಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ. ಏಕೆಂದರೆ, ಎಲ್ಲಾ ಜಿಲ್ಲೆಗಳ ಹೆಸರು ಬಂದಿದೆ, ನಮ್ಮ ಜಿಲ್ಲೆಯ ಹೆಸರು ಇಲ್ಲ. ನಮ್ಮ ಜಿಲ್ಲೆಯನ್ನು ಇದರಲ್ಲಿ ಸೇರಿಸಿಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ) :- ನಮ್ಮಲ್ಲಿ ಸುಮಾರು ಹದಿನೈದು ಸಾವಿರ ಟ್ರಕ್‌ಗಳಿವೆ. ಟ್ರಕ್ ಟರ್ಮಿನಲ್ ಮಾಡಿರುವುದಕ್ಕೆ ಮಾನ್ಯ ಮುಖ್ಯಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಸವ ಕಲ್ಯಾಣ ಡೆವಲೆಪ್‌ಮೆಂಟ್ ಅಥಾರಿಟಿಗೂ ದುಡ್ಡು ಕೊಟ್ಟಿದ್ದಾರೆ, ಇದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ಪ್ರಕಾರ ನನ್ನ ಒಂದು ಸಲಹೆ ಈ ಸರ್ಕಾರಕ್ಕೆ ತಮ್ಮ ಮೂಲಕ ಕೊಡುವುದೇನೆಂದರೆ, ನಮ್ಮ ಬಸವಕಲ್ಯಾಣದಲ್ಲಿ ARTO ಅಫೀಸ್ ಇಲ್ಲ. ನಮ್ಮಲ್ಲಿ ಸುಮಾರು ಹದಿನೈದು ಸಾವಿರ ಟ್ರಕ್‌ಗಳಿವೆ. ನಾವು RTO ಆಫೀಸ್‌ಗೆ ಹೋಗಬೇಕಾದೆ ಭಾಲ್ಕಿಗೆ ಹೋಗಬೇಕಾಗುತ್ತದೆ. ಇಲ್ಲಾಂದ್ರೆ ಹೈದರಾಬಾದ್ ಪಾಸಿಂಗ್ ಆಗಿ ಸುಮಾರು ಆರೆಂಟು ಕೋಟಿ ರೂಪಾಯಿ ಹಣ ಸರ್ಕಾರಕ್ಕೆ ವ್ಯರ್ಥವಾಗುತ್ತಿದೆ. ಬಸವಕಲ್ಯಾಣದಲ್ಲಿ ARTO ಆಫೀಸ್ ಮಾಡಬೇಕೆಂದು ವಿನಂತಿ

ಮಾಡಿಕೊಳ್ಳುತ್ತಿದ್ದೇನೆ. ಬೀದರ್‌ನಿಂದ ಗುಲ್ಬರ್ಗಾದವರೆವಿಗೂ ರೈಲ್ವೆ ಲೈನ್ ಈಗ ಮಾಡುತ್ತಿದ್ದಾರೆ. ನನ್ನ ವಿನಂತಿ ಏನೆಂದರೆ, ಸಮಗ್ರ ಅಭಿವೃದ್ಧಿಯಾಗಿ ಬಸವ ಕಲ್ಯಾಣವನ್ನು ಮಾಡುತ್ತಿರುವಾಗ ಬೀದರ್-ಹುಮ್ನಾಬಾದ್-ಬಸವಕಲ್ಯಾಣ-ಮಾರ್ಗವಾಗಿ ಗುಲ್ಬರ್ಗಾಕ್ಕೆ ಹೋಗಲಿಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುತ್ತಿದ್ದೇನೆ. ನಂತರ ಕೇಂದ್ರೀಯ ವಿಶ್ವ ವಿದ್ಯಾಲಯ ಸ್ಥಾಪಿಸುವ ಸಲುವಾಗಿ ನಮ್ಮ ಎಲ್ಲಾ ಬೀದರ್ ಜಿಲ್ಲೆಯ ಜನರದ್ದು ಮತ್ತು ನಮ್ಮ ಎಲ್ಲ ಈ ಭಾಗದ ಜನರದ್ದು ಬಸವ ಕಲ್ಯಾಣ ಅಭಿವೃದ್ಧಿಯಾಗಬೇಕೆನ್ನುವ ಒತ್ತಾಯವಿದೆ. ಅದಕ್ಕೆ ಕೇಂದ್ರೀಯ ವಿಶ್ವ ವಿದ್ಯಾಲಯ ಸ್ಥಾಪಿಸುವುದಕ್ಕೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಪಿ. ಪಾಟೀಲ್ (ನಿಪ್ಪಾಣಿ) :- ನನಗೆ ಮಾತನಾಡುವುದುಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿಸುತ್ತೇನೆ. ನಿಪ್ಪಾಣಿ ಮತ್ತು ಕಿತ್ತೂರು ತಾಲ್ಲೂಕುಗಳೆಂದು ತಾವು ಇವತ್ತಿನ ದಿವಸ ಘೋಷಿಸಬೇಕು. ಏಕೆಂದರೆ, 1975 ರಲ್ಲಿ ವಾಸುದೇವರಾಯ್ ಕಮೀಷನ್, ಹುಂಡೇಕರ್ ಕಮೀಷನ್,ಗದ್ದಿಗೌಡರ್ ಕಮೀಷನ್ ಈ ಮೂರು ಕಮೀಷನ್‌ಗಳ ವರದಿ ಪ್ರಕಾರ ಕಿತ್ತೂರು ಮತ್ತು ನಿಪ್ಪಾಣಿ ತಾಲ್ಲೂಕು ಮಾಡುವುದಕ್ಕೆ ಯಾರದ್ದು ತಕರಾರಿಲ್ಲ. ಮಾನ್ಯ ಅಧ್ಯಕ್ಷರೆ ತಾವು ಕಂದಾಯ ಸಚಿವರಾಗಿದ್ದಾಗ, ತಾಲ್ಲೂಕು ಪರಿಶೀಲನೆ ಸಮಿತಿಯ ಸಭೆ ನಡೆದಾಗ ನಿಪ್ಪಾಣಿ ಮತ್ತು ಕಿತ್ತೂರು ತಾಲ್ಲೂಕುಗಳೆಂದು ಆಗುವಾಗ ಡಿ-ಲಿಮಿಟೇಷನ್ ಕಮಿಟಿಯಿಂದ ಅಡ್ಡಬಂತು. ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗ ಕಿತ್ತೂರು ಮತ್ತು ನಿಪ್ಪಾಣಿ ಯನ್ನು ವಿಶೇಷ ತಾಲ್ಲೂಕುಗಳೆಂದೆಣಿಸಿ ವಿಶೇಷ ತಹಶೀಲ್ದಾರ್ ಇಲ್ಲಿ ಬೇಕೆಂದು ಪರಿಗಣಿಸಿದ್ದಾರೆ. ಬೆಳಗಾವಿಯಲ್ಲಿ ಎರಡು ಬಾರಿ ಅಧಿವೇಶನ ನಡೆದಾಗ ಕಿತ್ತೂರು ಮತ್ತು ನಿಪ್ಪಾಣಿ ತಾಲ್ಲೂಕುಗಳೆಂದು ಘೋಷಿಸಬೇಕಾದರೆ, ಯಾರದೂ ಅಕ್ಷೇಪಣೆ ಇಲ್ಲ. ಉಳಿದ ಕಡೆ ತಾವು ಅಡಳಿತ ಮಾಡುವ ದೃಷ್ಟಿಯಿಂದ ಮಾಡುವುದಾದರೆ ಅದಕ್ಕೆ ಇದಕ್ಕೆ ಸಂಬಂಧವಿಲ್ಲ. ಇದು ಒಂದು ಮಾತ್ರ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಈ ನಿಪ್ಪಾಣಿ ಮತ್ತು ಕಿತ್ತೂರು ಎರಡು ತಾಲ್ಲೂಕುಗಳು. ಕಿತ್ತೂರು ಒಂದು ಐತಿಹಾಸಿಕ ಸ್ಥಳ. ಬ್ರಿಟಿಷರ ವಿರುದ್ಧ ಹೋರಾಡಿದಂಥ ಕಿತ್ತೂರು ರಾಣಿ ಚೆನ್ನಮ್ಮನ ಸ್ಮಾರಕವಾಗುತ್ತದೆ. ಗಡಿ ಭಾಗದಲ್ಲಿ ವಿಶೇಷವಾಗಿರುವ ನಿಪ್ಪಾಣಿಯನ್ನು ತಾಲ್ಲೂಕು ಮಾಡುವುದರಿಂದ ತಾವು ಕೊಡುಗೆ ಕೊಟ್ಟ ಹಾಗೆ ಆಗುತ್ತದೆ, ಅದಕ್ಕೆ ನಾನು ತಮ್ಮ

ಮೂಲಕ ಮನವಿ ಮಾಡುತ್ತೇನೆ. ಮತ್ತೊಂದು ವಿಷಯ ಏನೆಂದರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ತಾವೇನು ಮೈನಾರಿಟಿಗೆ ಗುರಿ ನಿಗದಿಪಡಿಸುತ್ತೀರಿ, ಅದು ಪ್ರತಿಯೊಂದು ಮತಕ್ಷೇತ್ರಕ್ಕೆ ಮೈನಾರಿಟಿಯಲ್ಲಿ ಒಂದು ಗುರಿ ಕೊಟ್ಟಿದ್ದಾರೆ. ನಮ್ಮ ನಿಪ್ಪಾಣಿ ಮತಕ್ಷೇತ್ರದಲ್ಲಿ ಮೈನಾರಿಟೀಸ್ ಜನ ಮುಸ್ಲಿಂಸ್ ಮತ್ತು ಜೈನ್ಸ್ ಬರುತ್ತಾರೆ. ಪ್ರತಿಯೊಂದು ಕ್ಷೇತ್ರಕ್ಕೆ ನೀವು ಒಂದು ಗುರಿ ಕೊಟ್ಟರೆ ಅದು ನಮ್ಮ ಜಿಲ್ಲೆಯಲ್ಲಿ ಸಾಕಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಜೈನ್ ಮತ್ತು ಮುಸ್ಲಿಂಸ್ ಜನಸಂಖ್ಯೆ ಇರುವುದರಿಂದ ಗಂಗಾ ಕಲ್ಯಾಣ ಯೋಜನೆ ಯಡಿಯಲ್ಲಿ ಗುರಿ ಕೊಡುವಾಗ, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಲಿಫ್ಟ್ ಮುಖಾಂತರ ಬಹಳ ಒಳ್ಳೆಯ ರೀತಿಯಲ್ಲಿ ತಮ್ಮ ಕೆಲಸವನ್ನು ರೈತರು ಮಾಡುತ್ತಿದ್ದಾರೆ. ಅದಕ್ಕೆ ಸಮಾಜ ಕಲ್ಯಾಣ ಇಲಾಖೆಗೆ ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿ, ಪ್ರತಿಯೊಂದು ಮತಕ್ಷೇತ್ರಕ್ಕೂ ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊನೆಯ ಪಕ್ಷ 25 ಕೊಡಬೇಕೆನ್ನುವ ವ್ಯವಸ್ಥೆ ಮಾಡಬೇಕು. ಏಕೆಂದರೆ, ಅಥಣಿ, ರಾಯಬಾಗ್, ಕಾಗವಾಡ್, ಕುಡುಚಿ, ಹುಕ್ಕೇರಿ, ಈ ಭಾಗದಲ್ಲಿ ಕೂಡ ಈ ಸಮಸ್ಯೆಯಿದೆ. ಹೀಗಾಗಿ ನಿಪ್ಪಾಣಿ, ಕಿತ್ತೂರುಗಳನ್ನು ತಾಲ್ಲೂಕುಗಳೆಂದು ಮಾಡುವುದಕ್ಕೆ ಯಾರದ್ದೂ ಆಕ್ಷೇಪಣೆಯಿಲ್ಲ. ಹೀಗಾಗಿ ಈ ಕೆಲಸ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಅಶೋಕ್ ಪಟ್ಟಣ (ರಾಮದುರ್ಗ) :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಬೆಳಗಾವಿ ಜಿಲ್ಲೆಯಲ್ಲಿ ಸವದತ್ತಿ ಮತ್ತು ರಾಮದುರ್ಗ ಈ ಭಾಗದಲ್ಲಿ ಒಂದು ವೀರಭದ್ರೇಶ್ವರ ಏತ ನೀರಾವಾರಿ ಯೋಜನೆ ಮಾಡಬೇಕೆಂದು ನಮ್ಮ ರೈತರ ಬೇಡಿಕೆ. ಈ ಏತ ನೀರಾವರಿಗೆ ನಾವು ಮತ್ತು ನಮ್ಮ ಎಲ್ಲಾ ರೈತರು ಸೇರಿಕೊಂಡು ವೀರಭದ್ರೇಶ್ವರ ಏತ ನೀರಾವರಿ ಯೋಜನೆ ಎಂದು ಹೆಸರಿಟ್ಟಿದ್ದೇವೆ. ಸವದತ್ತಿ ತಾಲ್ಲೂಕಿನ ಹದಿಮೂರು ಹಳ್ಳಿಗಳು ಮತ್ತು ರಾಮದುರ್ಗದ ತಾಲ್ಲೂಕಿನ ಹನ್ನೆರಡು ಹಳ್ಳಿಗಳಿಗೆ ಬಹಳ ನೀರಿನ ಅವಶ್ಯಕತೆಯಿದೆ. ಆ ಇಪ್ಪತ್ತನಾಲ್ಕು ಹಳ್ಳಿಗಳ ಮಧ್ಯೆ ಘಟಪ್ರಭಾ ಒಂದು ಕಡೆ ಇದೆ. ಘಟಪ್ರಭಾ ಬಲದಂಡೆ ಒಂದು ಕಡೆ ಇದೆ. ಮತ್ತೆ ಎಡದಂಡೆ ಮಲಪ್ರಭಾ ಒಂದು ಕಡೆ ಇದೆ. ಇನ್ನೊಂದು ಕಡೆ ಮಾರ್ಕಂಡೇಯ ಯೋಜನೆ ಇದೆ. ಇಷ್ಟಿದ್ದರೂ ಕೂಡ ಸುಮಾರು ನಲವತ್ತೇಳು ಸಾವಿರ ಎಕರೆ ಫಲವತ್ತಾದ ಒಣ ಭೂಮಿಗೆ ನೀರುಣಿಸಬೇಕಾಗಿದೆ. ಆದ್ದರಿಂದ, ಮಾನ್ಯ ನೀರಾವರಿ ಮಂತ್ರಿಗಳು ಈ ವೀರಭದ್ರೇಶ್ವರ ಏತ ನೀರಾವರಿ ಯೋಜನೆಯನ್ನು ಆದಷ್ಟು

ಬೇಗನೆ ಮಾಡಿ ಕೊಡಬೇಕು. ಈಗಾಗಲೇ ನಾವು ಬೇಕಾದಷ್ಟು ಸಾರಿ ನೀರಾವರಿ ಇಲಾಖೆಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಅರ್ಪಿಸಿದ್ದರೂ, ಇದು ಇನ್ನೂ ಡಿಸ್‌ಕಷನ್ ಲೆವಲ್‌ನಲ್ಲಿದೆ. ಆದುದರಿಂದ, ತಾವು ವೀರಭದ್ರೇಶ್ವರ ಏತ ನೀರಾವರಿ ಯೋಜನೆಯನ್ನು ಮಾಡಿದರೆ ಸವದತ್ತಿ ಮತ್ತು ರಾಮದುರ್ಗದ ತಾಲ್ಲೂಕಿನ ಸುಮಾರು 25 ಹಳ್ಳಿಗಳಿಗೆ ಅನುಕೂಲವಾಗುತ್ತದೆಂದು ನಾನು ಈ ಮೂಲಕ ಅಗ್ರಹಪಡಿಸುತ್ತೇನೆ. ಮತ್ತೊಂದು ಮುಖ್ಯವಾದ ವಿಚಾರ ಏನೆಂದರೆ, ಚುನಾವಣೆಯ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು ನಮ್ಮ ರಾಮದುರ್ಗದ ತಾಲ್ಲೂಕಿಗೆ ಬಂದಿದ್ದರು. ಮುಳ್ಳೂರು ಗುಡ್ಡ ಎನ್ನುವ ಬಹಳ ದೊಡ್ಡದಾದ ಗುಡ್ಡ ಇದೆ. ಅಲ್ಲಿ ಬೇಕಾದಷ್ಟು ಅಪಘಾತಗಳಾಗುತ್ತಿರುವ ಸಂಗತಿ ಎಲ್ಲರಿಗೂ ಗೊತ್ತಿರುವಂಥದ್ದೆ. 29-09-2008 ರ ಸೋಮವಾರ ದಿವಸ ಒಂದು ಬಸ್ ಬಿದ್ದು ಸುಮಾರು 41 ಪ್ರಯಾಣಿಕರು ದೇವರ ದಯೆಯಿಂದ ಪಾರಾಗಿದ್ದಾರೆ. 12-12-2008 ರಂದು ಇನ್ನೊಂದು ಬಸ್ ಕಮರಿಗೆ ಬಿದ್ದು ಸುಮಾರು 120 ಜನರು ಪಾರಾಗಿದ್ದಾರೆ. ಪೋಲಿಸರ ವರದಿ ಪ್ರಕಾರ 1995 ರಿಂದ 2008 ರವರೆಗೆ ಅಪಘಾತಗಳ ಸಂಖ್ಯೆ : 40, ಪ್ರಾಣ ಕಳೆದುಕೊಂಡವರು 38, ತೀವ್ರವಾಗಿ ಗಾಯಗೊಂಡವರು 265, ಮತ್ತು ಸಣ್ಣ ಪ್ರಮಾಣದಲ್ಲಿ ಗಾಯಗ್ಗೊಂಡವರು 226 ಆದ್ದರಿಂದ ಈ ಗುಡ್ಡವನ್ನು ಕೆ-ಶಿಪ್ ದೊಳಗೆ ತೆಗೆದುಕೊಳ್ಳಬೇಕು. ಈಗಾಗಲೇ ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಜೊತೆಗೆ ಮಾತನಾಡಿದಾಗ ಕೆ-ಶಿಪ್ ಎರಡನೇ ಹಂತದೊಳಗೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇದನ್ನು ದಯಮಾಡಿ ಒಂದನೇ ಹಂತದಲ್ಲಿ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಷಯ ಏನೆಂದರೆ, ರಾಮದುರ್ಗದ ಬಸ್ ಡಿಪೋ ಬಹಳ ಹಿಂದೆ ಇದೆ. ತಾವೇನು ಮಿನಿ ವಿಧಾನ ಸೌಧ ಕಟ್ಟಿಸಿದ್ದೀರಿ, ಅದರ ಎದುರುಗಡೆ ಕುದುರೆ ಬಯಲು ಎನ್ನುವ ಬಹಳ ದೊಡ್ಡ ಜಾಗವಿದೆ. ಆ ಜಾಗ ಏನಾಗಿದೆ, ಸರ್ಕಾರ ಮೊದಲು ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘದವರಿಗೆ ಕೊಟ್ಟಿದ್ದಾರೆ. ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ವಿದ್ಯಾ ಪ್ರಚಾರ ಸಮಿತಿ ಅವರಿಗೊಂದು ಕೊಟ್ಟಿದ್ದಾರೆ. ಇವರಿಬ್ಬರದೂ ಗಲಾಟೆಯಾಗಿ ಹೈಕೋರ್ಟ್, ಸುಪ್ರೀಂಕೋರ್ಟ್‌ಗೆ ವ್ಯಾಜ್ಯ ಹೋಗಿದೆ. ಇದು ಮೂಲ ಸರ್ಕಾರದ ಜಮೀನು ಆಗಿರುವುದರಿಂದ, ಇದು ಇಬ್ಬರಿಗೂ ಕ್ಯಾನ್ಸಲ್ ಮಾಡಿ ಅಕ್ವೈರ್ ಮಾಡಿಕೊಂಡು ರಾಮದುರ್ಗ ಬಸ್ ನಿಲ್ದಾಣದ ಎದುರುಗಡೆ ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಈಶ್ವರ ಖಂಡ್ರೆ (ಭಾಲ್ಕಿ) :- ಮಾನ್ಯ ಸಭಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸಿ ತಮ್ಮ ಮೂಲಕ ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕು ನಂಜುಡಪ್ಪ ಆಯೋಗದ ವರದಿಯನ್ವಯ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳು ಏನಿವೆ ಅದರಲ್ಲಿ ನಮ್ಮ ತಾಲ್ಲೂಕು ಸೇರುತ್ತದೆ ಎಂದು ಹೇಳಬಯಸುತ್ತೇನೆ. ಆದರೆ, ನಂಜುಂಡಪ್ಪ ವರದಿಯನ್ವಯ ಅಲ್ಲಿ ಯಾವುದೇ ಈ ವರ್ಷದ ಕಾಮಗಾರಿಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಅದಕ್ಕೆ ವಿಶೇಷವಾದ ಪ್ಯಾಕೇಜ್ ಕೊಟ್ಟು ಅಭಿವೃದ್ಧಿ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಸರ್ಕಾರ ಹೋದ ವರ್ಷದ ಆಯವ್ಯಯದಲ್ಲಿ ಹದಿನೇಳು ಕೋಟಿ ರೂಪಾಯಿಗಳನ್ನು ಹೊಸ ಐಟಿಐ ಸ್ಥಾಪಿಸುವುದಕ್ಕೆ ಕೊಟ್ಟಿತ್ತು. ಒಂಭತ್ತು ತಾಲ್ಲೂಕುಗಳಲ್ಲಿ ಎಲ್ಲಿ ಐಟಿಐ ಇಲ್ಲ ಅಲ್ಲಿ ಪ್ರಾರಂಭಿಸಬೇಕೆಂದು ಸರ್ಕಾರ ನಿರ್ಧರಿಸಿತ್ತು. ಅದರಂತೆ ಐಟಿಐ ಇಲ್ಲದ ತಾಲ್ಲೂಕು ಎಂದರೆ ನಮ್ಮ ಭಾಲ್ಕಿ ತಾಲ್ಲೂಕು ಸೇರುತ್ತದೆ. ಇಲ್ಲಿ ಇವತ್ತಿನವರೆವಿಗೂ ಪ್ರಾರಂಭವಾಗಿಲ್ಲ. ಇದನ್ನು ಪ್ರಾರಂಭಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಅದೇ ಪ್ರಕಾರ ಗಡಿ ಭಾಗದಲ್ಲಿ ಸುಮಾರು 15 ಹಳ್ಳಿಗಳು ನೆರೆ ರಾಜ್ಯವಾದ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿವೆ. ನಮ್ಮಲ್ಲಿ ವಿದ್ಯುತ್ ಕೊರತೆಯಿಂದಾಗಿ ಸುಮಾರು ನಾಲ್ಕಾರು ತಿಂಗಳವರೆಗೆ ಟ್ರಾನ್ಸ್‌ಫಾರ್ಮರ್‌ಗಳು ರಿಪ್ಲೇಸ್ ಅಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಸವ ಕಲ್ಯಾಣಕ್ಕೆ ಬಂದಾಗ ನಾನು ಅವರ ಗಮನಕ್ಕೆ ಈ ವಿಷಯ ತಂದಿದ್ದೆ. ಹೀಗಾಗಿ ಅಲ್ಲಿ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ವಿದ್ಯುತ್ ಕೊಡುವುದೇ ಆರು ಗಂಟೆ. ಒಂದು ಗ್ರಾಮಕ್ಕೆ ನಾಲ್ಕು ತಿಂಗಳಿನಿಂದ ಕೊಟ್ಟಿಲ್ಲ. ಇದನ್ನು ನಾನು ದಾಖಲೆ ಸಮೇತವಾಗಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ರಿಪೇರಿ ಸೆಂಟರ್‌ನ್ನು ಪ್ರಾರಂಭಿಸಬೇಕೆಂದು ಮನವಿ ಮಾಡುತ್ತಿದ್ದೇನೆ. ಇದರ ಜೊತೆಯಲ್ಲಿ ರಸ್ತೆಗಳ ಪರಿಸ್ಥಿತಿ ಎಷ್ಟೊಂದು ಹದಗೆಟ್ಟಿದೆ ಎಂದರೆ, ನಮ್ಮಲ್ಲಿ ಬ್ಲಾಕ್ ಸಾಯಿಲ್ ಇದೆ. ಲೋಕೋಪಯೋಗಿ ಇಲಾಖಾವತಿಯಿಂದ ನಂಜುಂಡಪ್ಪ ವರದಿಯಡಿಯಲ್ಲಿ ಈ ವರ್ಷದಲ್ಲಿ ಒಂದೇ ಒಂದು ಕಾಮಗಾರಿ ಪ್ರಾರಂಭವಾಗಿಲ್ಲ. ಈಗಾಗಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಭಾಲ್ಕಿ ತಾಲ್ಲೂಕಿಗೆ ಸುಮಾರು ವರ್ಷಗಳಿಂದ ಬರೀ ಹದಿಮೂರು ಕೋಟಿ ರೂಪಾಯಿ ಮಾತ್ರ ಸಿಕ್ಕಿದೆ. ಒಂದೊಂದು ತಾಲ್ಲೂಕಿಗೆ 100, 200 ಕೋಟಿ ರೂಪಾಯಿ ಸಿಕ್ಕಿದೆ. ಹೀಗಾಗಿ ವಿಶೇಷವಾಗಿ ಆದ್ಯತೆ ಕೊಟ್ಟು ಇದನ್ನು ಅಭಿವೃದ್ಧಿಪಡಿಸಬೇಕೆಂದು ಮನವಿ ಮಾಡಿಕೊಂಡು, ಕೊನೆಯದಾಗಿ ಒಂದೇ ಒಂದು

ಮಾತು ಹೇಳಬಯಸುತ್ತೇನೆ. ಬೀದರ್ ಜಿಲ್ಲೆಯಲ್ಲಿ ಇರುವ ಒಂದೇ ಒಂದು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಅತ್ಯಂತ ಹಿಂದುಳಿದಿದೆ. ಆ ಕಾರ್ಖಾನೆಯನ್ನು ನವೀಕರಣ ಮಾಡಬೇಕು. ನಾನು ಏಕೆ ಈ ಮಾತು ಹೇಳುತ್ತೇನೆಂದರೆ, ಸರ್ಕಾರ ಖಾಸಗಿಯವರಿಂದ ವಿದ್ಯುತ್ ಖರೀದಿ ಮಾಡುತ್ತಿದೆ. ಪ್ರತಿ ಯೂನಿಟ್‌ಗೆ 9 ರಿಂದ 10 ರೂಪಾಯಿನಂತೆ ವಿದ್ಯುತ್ ಖರೀದಿಸುತ್ತಿದೆ. ಆದರೆ, ನಮ್ಮ ಕಾರ್ಖಾನೆಯಲ್ಲಿ ವಿದ್ಯುತ್ ಘಟಕ ಇಲ್ಲ. ಇದನ್ನು ನವೀಕರಣ ಮಾಡಬೇಕೆಂದರೆ ಸರ್ಕಾರ ಮಧ್ಯ ಪ್ರವೇಶಿಸಬೇಕು. ಈ ಕಾರ್ಖಾನೆ ಪುನಃಶ್ಚೇತನಗೊಳಿಸಿ ಬೀದರ್ ಜಿಲ್ಲೆಯ ರೈತರಿಗೆ ವಿಶೇಷವಾದ ಯೋಜನೆ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಯ್ಯದ್ ಯಾಸೀನ್ (ರಾಯಚೂರು) :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. 31ನೇ ಮಾರ್ಚ್‌ನ ICC ಮೀಟಿಂಗ್‌ನಲ್ಲಿ ತುಂಗಾಭಧ್ರಾ ನದಿಯಿಂದ ನಮ್ಮ ಜೋನ್ ವ್ಯಾಪ್ತಿಗೆ ಬರುವ ಕೊಪ್ಪಳ, ರಾಯಚೂರು, ಗಂಗಾವತಿ, ಸಿಂಧನೂರು, ಮಾನ್ವಿ, ಕಲ್ಮಲಕ್ಕೆ ನೀರು ಕೊಡಬೇಕಾಗಿತ್ತು. But, we came to know there is no water. ಡ್ಯಾಮ್‌ನಲ್ಲಿ ನೀರೇ ಇಲ್ಲ. ಅದಕ್ಕೆ ನಾನು ನಮ್ಮ ಸರ್ಕಾರಕ್ಕೆ ವಿನಂತಿಸುತ್ತೇನೆ. 7 TMC water Bhadra ದಿಂದ ತೆಗೆದುಕೊಳ್ಳುವುದಕ್ಕೆ ನಮಗೆ ಅವಕಾಶ ಕೊಡಬೇಕು. Otherwise, we will face lot of problems in that particular area. Especially ಕೊಪ್ಪಳ, ರಾಯಚೂರು, ಗಂಗಾವತಿ, up to ಮಾನ್ವಿ, ಸಿಂಧನೂರು. ಆಮೇಲೆ B-phase of NRBCC is pending since very long time. ಏಕೆಂದು ನಮಗೆ ಗೊತ್ತಿಲ್ಲ. Why? We have taken up lot of projects in Irrigation Department. ಏಕೆ B-phase ಮಾಡಿಲ್ಲ? One lakh hectare of dry land and border area land, Kalmala and Raichurನಲ್ಲಿ ನೀರಾವರಿ ಯೋಜನೆಗಳಿಗಾಗಿ wait ಮಾಡುತ್ತಿದ್ದಾರೆ. ಈ ಕಾರಣಕ್ಕಾಗಿ B-phase ತೆಗೆದುಕೊಳ್ಳಬೇಕು. ಇನ್ನೊಂದು ಸಲಹೆ ಏನೆಂದರೆ, ಎಲ್ಲಾ ಕಡೆ districtನಲ್ಲಿ Mini Vidhanasabha ಬರುತ್ತಿದೆ. Why discrimination is taking place in Raichur? ನಮಗೆ ಗೊತ್ತಿಲ್ಲ. APMC ನಲ್ಲಿ ಬಹಳಷ್ಟು ಲ್ಯಾಂಡ್ ಇದೆ. We are ready

to give. D.C. has already agreed to give up to 50-100 acres. ಅವರು ಕೊಡುವುದಕ್ಕೆ ರೆಡಿ ಇದ್ದಾರೆ. ಆದರೆ ಆದೇಶ ಕೊಡಬೇಕು. ನಾವು ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತಿದ್ದೇನೆ. ಇದು ದೊಡ್ಡ ಸಮಸ್ಯೆ. ಇನ್ನೊಂದು ರೈಲ್ವೆ ಲೈನ್ ಗದವಲ್-ರಾಯಚೂರು, ರಾಯಚೂರಿನಲ್ಲಿ ಎರಡು bridges pending ಇದೆ. ಮೆಹಬೂಬುನಗರ-ರಾಯಚೂರು-ಗಿಣಗೇರ it has been already surveyed, But it is pending and we have to take up this issue. Lastly, I thank our Hon'ble C.M. for giving Agriculture University in Raichur. It has not come to my constituency. It has come to whole Hyderabad- Karnataka area. I will inform you that it is very important to note that in 1932 agriculture dry land station was set up in Raichur since Nizam period. Afterwards, it has been college and now today with the blessing of your government, the Agriculture University ಬರುತ್ತಿದೆ. We have already entered this campus 76 years ago, ಆದ್ದರಿಂದ platinum jubilee ಮಾಡಬೇಕೆಂದು ವಿನಂತಿಸುತ್ತೇನೆ. Thank you.

ಶ್ರೀ ಸುಭಾಷ್ ಗುತ್ತೇದಾರ್ (ಆಳಂದ) :- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಗಮನ ಸೆಳೆಯಲು ಪ್ರಯತ್ನಿಸುತ್ತೇನೆ. ಗುಲ್ಬರ್ಗಾದಲ್ಲಿ ಮೊನ್ನೆ ಸಚಿವ ಸಂಪುಟ ಆದಾಗ ಕೇಂದ್ರೀಯ ವಿಶ್ವ ವಿದ್ಯಾಲಯವನ್ನು ಆಳಂದ ಕಡೆಗಂಚಿ ಗ್ರಾಮದಲ್ಲಿ ನೇಮಿಸುತ್ತೇವೆಂದು ತಾವು ಘೋಷಣೆ ಮಾಡಿದಿರಿ, ಇದು ಮಾಧ್ಯಮದಲ್ಲಿ ಕೂಡ ಬಂದಿದೆ. ಅದಕ್ಕೆ ಈಗ ಬೇರೆಯವರು ಕೂಡ ಅಲ್ಲಿ ಬೇಕು ಇಲ್ಲಿ ಬೇಕು ಎಂದು ಕೇಳುತ್ತಿದ್ದಾರೆ. ಈಗಾಗಲೇ ಡೆಲ್ಲಿಯಿಂದ ಒಂದು ಕಮಿಟಿ ಬಂದು ಆ ಜಾಗವನ್ನು ನೋಡಿ ಪರೀಶೀಲಿಸಿ ಒಪ್ಪಿಗೆ ಕೊಟ್ಟಿರಬಹುದು ಎಂದು ನನಗೆ ಅನ್ನಿಸುತ್ತದೆ. ಅಲ್ಲಿ ಸಾಕಷ್ಟು ಗೋಮಾಳ ಜಾಗವಿದೆ. ಸರ್ಕಾರದ ಜಾಗವಿದೆ. ರೈತರು ಕೂಡ ಸರ್ಕಾರ ಕೊಡುವಂಥ ರೇಟ್‌ಗೆ ಒಪ್ಪಿ ತಮ್ಮ ಭೂಮಿಯನ್ನು ಕೊಡುವುದಕ್ಕೆ ಒಪ್ಪಿದ್ದಾರೆ. ಅದಕ್ಕಾಗಿ ಅಲ್ಲಿಯೇ

ಕೇಂದ್ರೀಯ ವಿಶ್ವ ವಿದ್ಯಾಲಯ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯ ವಿನಂತಿ ಮಾಡಿ, ಮತ್ತೊಂದು ವಿಷಯ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಸಾರಾಯಿ ಮಾರಾಟಗಾರರ ಬಗ್ಗೆ ಏನೊಂದೂ ಚಕಾರವೆತ್ತಿಲ್ಲ. ಅವರು ಹಿಂದೆ ಘೋಷಣೆ ಮಾಡಿದ್ದರು. ಏಕೆಂದರೆ ಸಾರಾಯಿ ಮಾರುವವರು ಈಗ ಅನಾಥರಾಗಿದ್ದಾರೆ. ಹೀಗಾಗಿ ತಾವು ಅದಕ್ಕೆ ಹೆಚ್ಚಿನ ಮಟ್ಟದಲ್ಲಿ ಏನಾದರೊಂದು ಘೋಷಣೆ ಮಾಡಬೇಕು. ನೀರಾ ತೆಗೆಯುವ ಕೆಲಸವನ್ನಾದರೂ ಕೊಡಬೇಕು. ಏಕೆಂದರೆ ಬೇರೆ ಕೆಲಸ ಅವರಿಗೆ ಬರುವುದಿಲ್ಲ. ಹೀಗಾಗಿ ಆ ಕೆಲಸ ಅವರಿಗೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಂಡು ಆಳಂದದ ಫ್ಯಾಕ್ಟರಿಯ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಮತ್ತೊಮ್ಮೆ ಕೋರುತ್ತೇನೆ.

ಶ್ರೀ ಸುನಿಲ್ ವಿ ಹೆಗಡೆ (ಹಳಿಯಾಳ) :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳು. ಆದರೆ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ನಡುವೆ ನಮ್ಮ ಕರಾವಳಿ ಕರ್ನಾಟಕ ಯಾವುದರಲ್ಲಿ ಬರುತ್ತದೆ ಎಂದು ನಮಗೆ ತಿಳಿಯುತ್ತಿಲ್ಲ. ಕರಾವಳಿಯ ಕಾರವಾರ ಜಿಲ್ಲೆ ಉತ್ತರ ಕರ್ನಾಟಕದಲ್ಲಿ ಬರುತ್ತದೆಯೋ ಅಥವಾ ದಕ್ಷಿಣ ಕರ್ನಾಟಕದಲ್ಲಿ ಬರುತ್ತದೆಯೋ ನಮಗೆ ತಿಳಿಯುತ್ತಿಲ್ಲ. ಜಿಲ್ಲೆಯ ಸಂಪೂರ್ಣವಾದ ವಿವರವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಕಾಗೇರಿಯವರು ಹೇಳುತ್ತಾರೆ. ಆ ಜಿಲ್ಲೆಯ ಒಂದು ಕ್ಷೇತ್ರದ ಶಾಸಕನಾಗಿ ನಾನು ಹೇಳುವುದು ಇಷ್ಟೆ. ನಮ್ಮ ಜೋಯಿಡಾ ತಾಲ್ಲೂಕು ಏನಿದೆ, ಇದು ಗಡಿಭಾಗದ ತಾಲ್ಲೂಕು ಆಗಿರುವುದರಿಂದ ಇವತ್ತಿನವರೆವಿಗೂ ಇದು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಇವತ್ತು ಜೋಯಿಡಾ ತಾಲ್ಲೂಕಿನ ಪರಿಸ್ಥಿತಿ ಹೇಗಿದೆ ಎಂದರೆ, ಮಳೆಗಾಲದಲ್ಲಿ ಹಳ್ಳಿಯ ಮತ್ತು ನಗರ ಜನರ ಸಂಪರ್ಕ ಸುಮಾರು ನಾಲ್ಕು ತಿಂಗಳು ಕಟ್ ಆಗುತ್ತವೆ. ಡೆಲವರಿಗೆ ಹೋಗುವ ಹೆಂಗಸರನ್ನು ಕಂಬಳಿಯಲ್ಲಿ ಸುತ್ತಿಕೊಂಡು ಬರಬೇಕಾದ ಪರಿಸ್ಥಿತಿ ಇದೆ. ಇಂಥ ಸಂದರ್ಭದಲ್ಲಿ ಸುಮಾರು ಹೆಣ್ಣು ಮಕ್ಕಳು ಸತ್ತು ಹೋಗಿರುವಂಥ ಉದಾಹರಣೆಗಳಿವೆ. ಮೊನ್ನೆ ನಡೆದ ಕನ್ನಡ ಉತ್ಸವದಲ್ಲಿ ಗಡಿಭಾಗದ ಬಗ್ಗೆ ಚರ್ಚೆಯಾಗಿದೆ. ದಯವಿಟ್ಟು ಜೋಯಿಡಾ ತಾಲ್ಲೂಕಿನ ಬಗ್ಗೆ ವಿಶೇಷ ಪ್ಯಾಕೇಜ್ ಕೊಡಬೇಕು. ಅಲ್ಲಿ ಇದ್ದಂಥ ಕುಣುಬಿ ಮತ್ತು ಗೌಳಿ ಜನಾಂಗವನ್ನು ಎಸ್‌ಟಿ ಯಲ್ಲಿ ಹಾಕಲಿಕ್ಕೆ ಪ್ರಪೋಸಲ್ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ ತಾವು ಕಂದಾಯ ಮಂತ್ರಿಗಳಾಗಿದ್ದಾಗ ದಾಂಡೇಲಿಗೆ ಬಂದಿದ್ದಿರಿ. ಐವತ್ತು ಸಾವಿರ ಜನಸಂಖ್ಯೆವುಳ್ಳ ದಾಂಡೇಲಿಯನ್ನು ತಾಲ್ಲೂಕು ಮಾಡಿ ಎಂದು

ಹೇಳುತ್ತಿದ್ದೇವೆ. ಈ ಬಗ್ಗೆ ಅಲ್ಲಿ ಈಗ ಸ್ಟ್ರೈಕ್ ಆಗಿದೆ. ತಾಲ್ಲೂಕು ಮಾಡುವುದು ಲೇಟ್ ಆದರೆ ಅಲ್ಲಿಗೆ ವಿಶೇಷ ತಹಶೀಲ್ದಾರ್‌ನ್ನು ಹಾಕುತ್ತೇವೆಂದು ಹೇಳಿದ್ದರೂ ಇವತ್ತಿನವರೆವಿಗೂ ಹಾಕಿಲ್ಲ. ದಯವಿಟ್ಟು ಅಲ್ಲಿ ಒಂದು ವಿಶೇಷ ತಹಸೀಲ್ದಾರ್ ರವರನ್ನು ಹಾಕಬೇಕೆಂದು ವಿನಂತಿಸುತ್ತೇನೆ. ಅದೇ ರೀತಿಯಾಗಿ ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲ ವೇತನಕ್ಕೆ ಈಗೇನು ಉತ್ಪನ್ನದ ಮಿತಿ ಎಂಟು ಸಾವಿರ, ಆರು ಸಾವಿರ ರೂ. ಎಂದು ಏನು ಮಿತಿ ಇದೆ, ದಯವಿಟ್ಟು ಇವತ್ತಿನ ದಿವಸದಲ್ಲಿ ಅದು ಏನೂ ಸಾಲುತ್ತಿಲ್ಲ. ಕೊನೆಯಪಕ್ಷ ಬಿಪಿಎಲ್ ಕಾರ್ಡು ಉತ್ಪನ್ನ ಲಿಮಿಟ್ ಆದರೂ ಇಡಬೇಕು. ಅದೇ ರೀತಿಯಾಗಿ ವೃದ್ಧಾಪ್ಯ ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಮಕ್ಕಳಿದ್ದರೂ ವೇತನ ಕೊಡಬೇಕೆನ್ನುವ ವ್ಯವಸ್ಥೆಯಾಗಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕರಡಿ ಸಂಗಣ್ಣ (ಕೊಪ್ಪಳ) :- ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಸುಮಾರು ಹತ್ತು ಸಾವಿರ ಎಕರೆ ಪ್ರದೇಶದಲ್ಲಿ ಕೊಪ್ಪಳ ಜಿಲ್ಲೆಗೆ ಉಕ್ಕು ವಲಯವನ್ನಾಗಿ ಘೋಷಣೆ ಮಾಡಿದಿರಿ. ಈಗಾಗಲೇ ಸರ್ಕಾರದಿಂದ ಸುಮಾರು 43 ಮಧ್ಯಮ ಕೈಗಾರಿಕೆಗಳು ಬಂದಿರುವುದರಿಂದ ಈ ಅತ್ಯಂತ ಮಹತ್ವದ ನಿರ್ಣಯವನ್ನು ಅವರು ಮಾಡಿದ್ದಾರೆ. ಹೀಗಾಗಿ ಅವರಿಗೆ ನಾನು ಅಭಿನಂದಿಸುತ್ತೇನೆ. ಇನ್ನೊಂದು ಕೊಪ್ಪಳ-ಬಾಗಲಕೋಟೆ ಹೊಸ ರೈಲ್ವೆ ಮಾರ್ಗ ಕೂಡ ಘೋಷಣೆ ಮಾಡಬೇಕು. ಬರೀ ಘೋಷಣೆಯಾಗುವುದಕ್ಕಿಂತ ಕೆಲಸ ಆಗಬೇಕು. ಈಗತಾನೇ ನಮ್ಮ ಸೈಯದ್‌ರವರು ಹೇಳಿದರು. ಗಿಣಿಗೇರ ಮತ್ತು ಮೆಹಬೂಬು ನಗರ ರೈಲ್ವೆ ಲೈನ್ ಬಗ್ಗೆ ನಿನ್ನೆ ನಾನು ಮತ್ತು ನಾಡಗೌಡರವರು ಪ್ರಸ್ತಾಪಿಸಿದೆವು. ಮಾನ್ಯ ಜನಾರ್ದನರೆಡ್ಡಿಯವರು ಕೂಡ ಬಜೆಟ್‌ನಲ್ಲಿ 150 ಕೋಟಿ ಒದಗಿಸುತ್ತೇವೆ ಎನ್ನುವ ಮಾತನ್ನು ಹೇಳಿದರು. ನಾನು ಏಕೆ ಹೇಳಿದೆ ಎಂದರೆ, ನಾವು ಕೇವಲ ಹೊಸ ಹೊಸ ಘೋಷಣೆ ಮಾಡಿಕೊಂಡು ಹೋದರೆ ಹೇಗೆ? ಈಗಾಗಲೇ ಸುಮಾರು 10-12 ವರ್ಷಗಳಿಂದ ಹಾಗೆ ಇದೆ ಅಲ್ಲಿ ಇನ್ನೂ ಕೆಲಸ ಶುರುವಾಗಿಲ್ಲ. ಅದರ ಜೊತೆಗೆ ಕೊಪ್ಪಳ ಜಿಲ್ಲೆಗೆ ಉನ್ನತ ಶಿಕ್ಷಣದ ಅಂಗವಾಗಿ ನಾವು ಮಾತನಾಡುವುದಾದರೆ, ಏಕೆಂದರೆ, ಬಾರಿ ಹಿಂದುಳಿದಂಥ ಜಿಲ್ಲೆಯಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಕಡೆಗೆ ಗಮನಹರಿಸಬೇಕು. ಏಕೆಂದರೆ, ಇಲ್ಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜ್ ಇಲ್ಲ. ಖಾಸಗಿ ಕಾಲೇಜುಗಳು ಕೂಡ ಇಲ್ಲ. ಖಾಸಗಿ ಕಾಲೇಜುಗಳು ಇದ್ದರೆ ಇವತ್ತಲ್ಲ ನಾಳೆ ಮಾಡಬಹುದು. ಆ ಕಾರಣಕ್ಕಾಗಿ ಈ ಬಗ್ಗೆ ಗಮನ ಹರಿಸುತ್ತೀರಿ ಎಂದು ನಾನಾದರೂ

ಭಾವಿಸುತ್ತೇನೆ. ದಾಳಿಂಬೆ ಬೆಳೆಗೆ ಕೇಂದ್ರ ಸರ್ಕಾರದವರು ಪ್ಯಾಕೇಜ್ ಘೋಷಣೆ ಮಾಡಿದ್ದಾರೆ. ಈಗ ಬಿಜಾಪುರ, ಬೆಳಗಾಂ, ಕೊಪ್ಪಳ,ಚಿತ್ರದುರ್ಗದಲ್ಲಿ ಸಾಕಷ್ಟು ರೈತರು ಈ ಬೆಳೆಯನ್ನು ಬೆಳೆಯುತ್ತಿದ್ದಾರೆ. ರಾಜ್ಯ ಸರ್ಕಾರದ ಪಾಲು 25% ಏನು ಇದೆ ಇದನ್ನು ರೈತರಿಗೆ ಒದಗಿಸಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ.

ಇನ್ನು ಕೊಪ್ಪಳ ಜಿಲ್ಲೆಗೆ ಜಿಲ್ಲಾ ಕ್ರೀಡಾಂಗಣದ ಬಗ್ಗೆ ಹೇಳುವುದಾದರೆ, ಅಲ್ಲಿ ಈಗಾಗಲೆ ಕೆಲಸಗಳು ಪ್ರಾರಂಭವಾಗಿದೆ. ಅದಕ್ಕೆ ಸುಮಾರು 7 ಕೋಟಿ ರೂಪಾಯಿಗಳ ಒಂದು estimate ಮಾಡಿದ್ದಾರೆ. ಅದಕ್ಕೆ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) :- ಸನ್ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ನಿರ್ಣಯದ ಮೇಲೆ ಏನು ಉತ್ತರವನ್ನು ಕೊಟ್ಟಿದ್ದಾರೆ, ಆ ಸಂದರ್ಭದಲ್ಲಿ ಒಂದು ಜನಸ್ಪಂದನ ಕಾರ್ಯಕ್ರಮದ ಬಗ್ಗೆ ಅತೀವವಾದಂತಹ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ನಿಜವಾಗಿಯೂ ಜನ ಪ್ರತಿನಿಧಿಗಳಿಗೆ ಒಂದು ಉತ್ತಮವಾದಂತಹ ಕಾರ್ಯಕ್ರಮವಾಗಿದೆ. ಅದರ ಬಗ್ಗೆ ಎರಡನೇ ಮಾತಿಲ್ಲ. ಆದರೆ ಅಲ್ಲಿ ಹೋಗಿ ಕುಳಿತುಕೊಂಡಾಗ ಅದು ಸಂಧ್ಯಾಸುರಕ್ಷಾ ಯೋಜನೆ ಇರಬಹುದು, ರೇಷನ್ ಕಾರ್ಡ್ ಕೊಡುವುದಕ್ಕೆ ಏನು ಅರ್ಜಿಯನ್ನು ತೆಗೆದುಕೊಳ್ಳುತ್ತಾರೆ ಎಲ್ಲವನ್ನೂ ಮಾಡುತ್ತೇವೆ. ಆದರೆ ಅಲ್ಲಿ ಕರೆಂಟಿನ ಸಮಸ್ಯೆ, ರೋಡಿನ ಸಮಸ್ಯೆಯನ್ನು ತರುತ್ತಾರೆ. ಅಲ್ಲಿ ನಾನಾ ಸಮಸ್ಯೆಗಳು ಬರುತ್ತವೆ. ಅಲ್ಲಿ ರೋಡಿನ ಸಮಸ್ಯೆ ಬಗ್ಗೆ ಕೇಳಿದಾಗ ಅದನ್ನು ನಾವು ಎಲ್ಲಿಂದ ತಂದು ಕೊಡುವುದು? ಹಾಸನ ಜಿಲ್ಲೆಗೆ quota ಎಲ್ಲಾ ಮುಗಿದುಹೋಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಹಾಸನ ಜಿಲ್ಲೆಯ ಹೊಳೆನರಸೀಪುರಕ್ಕೆ ಹೆಚ್ಚಿಗೆ ಮಾಡಿಕೊಂಡಿದ್ದರೆ, ಅಲ್ಲಿ ನೀವು ಅದನ್ನು ಕಟ್ ಮಾಡಿ. ಅದನ್ನು ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಅರಸೀಕೆರೆಯಲ್ಲಿ ಹೋದ ಸಾರಿ ಬಿಜೆಪಿ ಶಾಸಕರಿದ್ದರು. ಅಲ್ಲಿ ಸ್ವಲ್ಪ ಕೆಲಸ ಕಾರ್ಯಗಳು ಆಗಿರುವುದಿಲ್ಲ. ಇಲ್ಲಿ ತಾರತಮ್ಯವನ್ನು ಮಾಡಿದ್ದಾರೆ. ಈ ಬಗ್ಗೆ ನಾನು ಪದೇ ಪದೇ ಎಲ್ಲಾ ಸಂದರ್ಭದಲ್ಲಿಯೂ request ಮಾಡುತ್ತೇನೆ. ಶಾಸಕರಾಗಿ ನಾವು ಗೆದ್ದು ಬಂದ ಮೇಲೆ......

ಒಬ್ಬ ಮಾನ್ಯ ಶಾಸಕರು :- ಹಿಂದಿನವರದನ್ನು ತಾವು ಏತಕ್ಕಾಗಿ ಕೇಳುತ್ತೀರಿ........

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಅಲ್ಲಿ ಯಾರು ಮಾಡಿದ್ದಾರೆ ಅಥವಾ ಬಿಟ್ಟಿದ್ದಾರೆಂದು ನೀವು ಅವರನ್ನು ಕೇಳಿ. ಈಗ ಬೇರೆಯುವರು ಮಾನ್ಯ ಯಡಿಯೂರಪ್ಪನವರನ್ನು ಕೇಳಿ ಎಂದು ಹೇಳುತ್ತಾರೆ. ಮಾನ್ಯ ವಿರೋಧಪಕ್ಷದ ನಾಯಕರು ಶಿವಮೊಗ್ಗ ಜಿಲ್ಲೆಯ ಬಗ್ಗೆ ಹೇಳಲಿಲ್ಲವೇ? ಯಾರ್‍ಯಾರು ಅಧಿಕಾರದಲ್ಲಿದ್ದಾರೆ ಅವರೆಲ್ಲರೂ ಕರ್ನಾಟಕ ರಾಜ್ಯವನ್ನು ಬರೆದುಕೊಂಡು ಬಿಡಿ. ಆದ್ದರಿಂದ ನಾವು ಯಾರನ್ನೂ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಪಾಪವನ್ನು ನಮ್ಮ ಮೇಲೆ ಹಾಕಬೇಡಿ ಎಂದು ನಾವು ಹೇಳುತ್ತೇವೆ. ದಯಮಾಡಿ ಕ್ಷೇತ್ರದ ಶಾಸಕರಿಗೆ ಗೌರವವನ್ನು ಕೊಡುವಂತಹ ರೀತಿಯಲ್ಲಿ ಮಾಡಬೇಕು. ನೀವು ಒಂದು 10% ಜಾಸ್ತಿ ಮಾಡಿಕೊಳ್ಳಿ, ಅದನ್ನು ನಾವು ಕೇಳುವುದಕ್ಕೆ ಬರುವುದಿಲ್ಲ. ಆದರೆ ನೀವುಗಳು ಪೂರಾ ತೆಗೆದುಕೊಂಡು ಬಿಟ್ಟರೆ ಹೇಗೆ? ವಿರೋಧಪಕ್ಷದಿಂದ ಇನ್ನು ಏತಕ್ಕಾಗಿ election ಗೆ ನಿಲ್ಲಬೇಕು? ಆ ಒಂದು ಭಾವನೆ ಜನರಲ್ಲಿ ಬಂದಿದೆ. ಅದರ ಬಗ್ಗೆ ನಾನು ಪದೇ ಪದೇ ಹೇಳಿದ್ದೇನೆ. ನಾವು ಕೇಳಿದಂತಹ ಸ್ಥಳಕ್ಕೆ ಒಬ್ಬ ಅಧಿಕಾರಿಯನ್ನೂ ಹಾಕುವುದಿಲ್ಲ. ಶಾಸಕರು ಕೊಟ್ಟಂತಹ ಪತ್ರಕ್ಕೆ ಬೆಲೆ ಇರುವುದಿಲ್ಲ. ಈ ರೀತಿಯಾಗಿ ಮಾಡುವುದು ಬೇಡ. ಶಾಸಕರು ಅಲ್ಲಿ ಉತ್ತಮವಾದಂತಹ ಕೆಲಸವನ್ನು ಮಾಡಿದರೆ ನಿಮ್ಮ ಪಕ್ಷಕ್ಕೂ ಕೂಡ ಒಳ್ಳೆಯ ಹೆಸರು ಬರುತ್ತದೆ. ಹೋದ ಸಾರಿ ನಾನು ಎಂಎಲ್ಎ ಆಗಿ ಬಂದಿರಲಿಲ್ಲ, ಬೇಕಾದರೆ ನೀವು ಹೋಗಿ ಅವರನ್ನು ಕೇಳಿ ಜನಸ್ಪಂದನ ಕಾರ್ಯಕ್ರಮವನ್ನು ತಾವು ನಿರೂಪಣೆ ಮಾಡಿದ್ದೀರಿ, ಅಲ್ಲಿ ಅವರಿಗೆ ಖರ್ಚುವೆಚ್ಚಕ್ಕೆ ಸ್ವಲ್ಪ ಹಣವನ್ನೂ ಕೊಟ್ಟಿರುವುದಿಲ್ಲ. ಅವರು ಅಲ್ಲಿ ಶಾಮಿಯಾನ ಹಾಗೂ ಮೈಕ್‌ಗಳನ್ನು ಹಾಕಿಸುವುದಕ್ಕೆ ತೊಂದರೆಯನ್ನು ಪಡುತ್ತಿರುತ್ತಾರೆ. ಅದನ್ನು ತಾವು ಸ್ವಲ್ಪ ನೋಡಿ. ಪಡಿತರ ಚೀಟಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಒಳ್ಳೆಯ ಕೆಲಸದ ಬಗ್ಗೆ ಹೇಳಿದ್ದಾರೆ. ಯಾರ್‍ಯಾರು ನೆಮ್ಮದಿ ಕೇಂದ್ರಕ್ಕೆ ಹೋಗಿ ಫೋಟೋವನ್ನು ತೆಗೆಸುತ್ತಾರೆ, ಅವರೆಲ್ಲರಿಗೂ ಮಾರ್ಚಿ ತಿಂಗಳಲ್ಲಿ ಅಕ್ಕಿಯನ್ನು ಬಿಡುಗಡೆ ಮಾಡಿಸುತ್ತೇನೆಂದು ಹೇಳಿದರು. ತದನಂತರ ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದರು. ಅದನ್ನು ಎಲ್ಲರೂ ಸ್ವಾಗತ ಮಾಡುವಂತಹ ವಿಚಾರ. ಆದರೆ ಒಂದು ವಿಷಯ ಪಡಿತರ ಚೀಟಿಯಲ್ಲಿ ಬರುವಂತಹದ್ದು ಎಂದರೆ ನಮ್ಮ Food Commissioner ಎಲ್ಲಾ ಕಡೆಗಳಲ್ಲಿ ಪ್ರವಾಸವನ್ನು ಮಾಡಿ ವಿಷಯವನ್ನು ತಿಳಿದಿದ್ದಾರೆ. ಏನು ಪಾಯಿಂಟ್ ಎಂದರೆ, ಒಂದು ಕೇಂದ್ರದಿಂದ ಇನ್ನೊಂದು ಕೇಂದ್ರಕ್ಕೆ 3 ರಿಂದ 6 ಕಿಲೋಮೀಟರ್ ಆಗುತ್ತದೆ. ಅಲ್ಲಿ ಕಾಡಿಗಳ ಕಾಟ ಜಾಸ್ತಿಯಿದೆ. ಇಂತಹ ಸಂದರ್ಭದಲ್ಲಿ ಒಬ್ಬೊಬ್ಬರೇ ಹೋಗಿ ಅಂತ್ಯೋದಯ

ಯೋಜನೆಯಲ್ಲಿ 29 ಕೆ.ಜಿ. ಅಕ್ಕಿಯನ್ನು ಒಬ್ಬ ಮುದುಕಿಗೆ **ಕೊಡುತ್ತಾರೆ.** ಅದನ್ನು **ಹೊತ್ತುಕೊಂಡು** ಬರುವುದಕ್ಕೆ ಅವರಿಗೆ ಆಗುವುದಿಲ್ಲ. ಆದ್ದರಿಂದ ಅದೇ ಏಜೆಂಟ್ ಅದೇ ನ್ಯಾಯಬೆಲೆ ಅಂಗಡಿಯ ಮಾಲೀಕರು ಇರಲಿ. ಅವರು ಹೋಗಿ ಪಕ್ಕದ ಅದೇ ಊರಿನಲ್ಲಿ ಒಂದು ಉಪಕೇಂದ್ರವನ್ನು ತೆರೆದು ನಿಜವಾಗಿಯೂ ಅಕ್ಕಿ ಮಾರಾಟ ಮಾಡಿದರೆ ಈ ರಾಜ್ಯದ ಜನರಿಗೆ ಒಳ್ಳೆಯದಾಗುತ್ತದೆ. ದಯಮಾಡಿ ಆ ಬಗ್ಗೆ ಆಹಾರ ಇಲಾಖೆಯವರು ಗಮನವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :- ಮಾನ್ಯ ಅಧ್ಯಕ್ಷರೆ, ಕುಡಚಿ ಮತ್ತು ಬಾಗಲಕೋಟೆ ರೈಲ್ವೆ ಲೈನಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಾಲಿನ 50% ಹಣವನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಸ್ವಾಗತ ಮಾಡುತ್ತೇನೆ. ನಮ್ಮ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ನಾನು ಮನವಿ ಮಾಡುತ್ತೇನೆ. ಇನ್ನು 50% ಹಣವನ್ನು ಕೊಡಿಸುವ ಸಲುವಾಗಿ ನಾವೆಲ್ಲಾ ಬೆಳಗಾಂ ಜಿಲ್ಲೆಯ ಶಾಸಕರುಗಳು ದೆಹಲಿಗೆ ಬರುತ್ತೇವೆ. ದಯವಿಟ್ಟು ಮಾನ್ಯ ಕೇಂದ್ರದ ರೈಲ್ವೆ ಸಚಿವರಲ್ಲಿ ವಿನಂತಿ ಮಾಡಿಕೊಂಡು ಈ ಒಂಉ ಯೋಜನೆಯನ್ನು ಅವರು ಸೇರಿಸಬೇಕು. ಈಗ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಪಾಲು 50% ಹಣವನ್ನು ಕೊಟ್ಟು ಅವರ ಜವ್ಹಾಬ್ದಾರಿಯನ್ನು ಕಳೆದುಕೊಂಡಿದ್ದಾರೆ.

ಅಧ್ಯಕ್ಷರು :- ಬಹಳ ಆಯಿತು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :- ನಾವು ಮಾತನಾಡುವುದು ಇದೆ.

ಅಧ್ಯಕ್ಷರು :- ಮಾನ್ಯ ಉಮೇಶ್ ಕತ್ತಿಯವರು ನಿಮಗೇಕೆ ಗಂಟು ಬಿದ್ದಿದ್ದಾರೆ?

ಶ್ರೀ ಉಮೇಶ್ ವಿ. ಕತ್ತಿ :- ಕುಡಚಿ ರೈಲ್ವೆಯ ಜೊತೆಗೆ ಬೆಳಗಾಂ-ಧಾರವಾಡ ರೈಲ್ವೆ ಲೈನ್ ಬಗ್ಗೆನೂ ಹೇಳಲಿ.

ಅಧ್ಯಕ್ಷರು :- ಮಾನ್ಯ ಹುಕ್ಕೇರಿಯವರೆ, ನೀವು ಅವರನ್ನು ನೋಡಿಕೊಂಡು ಮಾತನಾಡಬೇಡಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :- ನಾನು ಮಾತನಾಡುವುದರಿಂದ ಅವರಿಗೆ ಹೊಟ್ಟೆನೋವು ಆಗುತ್ತಿದೆ. ನಮ್ಮ ಜಿಲ್ಲೆಯ ಎಲ್ಲಾ ಶಾಸಕರುಗಳು ದೆಹಲಿಗೆ ಬರುತ್ತೇವೆ. ದಯವಿಟ್ಟು ಈ ವರ್ಷ ಏನು ಕೇಂದ್ರದಲ್ಲಿ ಬಜೆಟ್ ಮಂಡನೆ

ಮಾಡುವವರಿದ್ದಾರೆ, ಆ ವೇಳೆಗೆ ಅದನ್ನು ಅದರಲ್ಲಿ ಸೇರಿಸಬೇಕು. ಎರಡನೆಯದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ. ಇನ್ನೂ ಸಕ್ಕರೆ ಕಾರ್ಖಾನೆಯದು 160 ರೂ.ಗಳ ದರವನ್ನು ಕೊಟ್ಟಿರುವುದಿಲ್ಲ. ಕಬ್ಬಿನ ಮಾಲೀಕರಿಗೆ ನೀವು ಯಾವುದೇ ಪರಿಸ್ಥಿತಿ ಇದ್ದರೂ ಕೂಡ 160 ರೂ. ಕೊಡಬೇಕೆಂದು ಈಗಾಗಲೇ ಆ ವಿಷಯದ ಬಗ್ಗೆ ಮಾನ್ಯ ಕುಮಾರಸ್ವಾಮಿಯವರು ತಂದಿದ್ದಾರೆ. ನನ್ನ ತಾಲ್ಲೂಕಿನಲ್ಲಿ ದೂಧ್‌ಗಂಗಾ ಕೃಷ್ಣ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿದೆ. ಸುಮಾರು 4,70,000 ಟನ್ ಡಿಸೆಂಬರ್ ತಿಂಗಳವರೆಗೆ ನುರಿಸಿದ್ದಾರೆ. ಅದಕ್ಕೆ 1200 ರೂ. ದರವನ್ನು ಕೊಟ್ಟಿದ್ದಾರೆ. 1 ನೇ ಜನವರಿಯಿಂದ ಅದಕ್ಕೆ 1300 ರೂ. ದರವನ್ನು ಕೊಟ್ಟಿದ್ದಾರೆ. ಇದರಿಂದ ರೈತರಿಗೆ ತಾರತಮ್ಯವನ್ನು ಮಾಡಿದ ಹಾಗೆ ಆಗುತ್ತದೆ. ಒಬ್ಬರಿಗೆ ಒಂದು ದರವನ್ನು ಡಿಸೆಂಬರ್ ತಿಂಗಳವರೆಗೆ ಕೊಡುತ್ತಾರೆ. ಅದು ಆ ಕಾರ್ಯವ್ಯಾಪ್ತಿಯಲ್ಲಿ ಬರುವಂತಹ ರೈತರಿಗೆ ಈ ತರಹ ಅನ್ಯಾಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳೆ, ತಾವು ಈ ಕಡೆಗೆ ಲಕ್ಷ್ಯವನ್ನು ಕೊಡಬೇಕು. ತಾವು ರೈತರ ಹೆಸರಿನ ಮೇಲೆ ಪ್ರಮಾಣವಚನವನ್ನು ಮಾಡಿದ್ದೀರಿ. ಆದರೆ ನಮ್ಮ ದೂಧ್‌ಗಂಗಾ ಸಕ್ಕರೆ ಕಾರ್ಖಾನೆಯಲ್ಲಿ ಸುಮಾರು 4 ಕೋಟಿ 70 ಲಕ್ಷ ರೂಗಳವರೆಗೆ ನಮ್ಮ ರೈತರ ಹಣ ಸಿಕ್ಕಿರುವುದಿಲ್ಲ. ದಯವಿಟ್ಟು ಈ ಬಗ್ಗೆ ಗಂಭೀರವಾಗಿ ವಿಚಾರವನ್ನು ಮಾಡಬೇಕು. ನಾನು ನಮ್ಮ ಜಿಲ್ಲೆಯ ಪರವಾಗಿ ಹೇಳುತ್ತೇನೆ. ತಾವು ಚೆನ್ನಾಗಿ ಸದನವನ್ನು ನಡೆಸಿದ್ದೀರಿ. ನಮ್ಮ ಜಿಲ್ಲೆಯ ಎಲ್ಲಾ ಶಾಸಕರುಗಳು ನಿಮ್ಮನ್ನು ನಾವು ಅಭಿನಂದಿಸುತ್ತೇವೆ. ನೀವು ಪಕ್ಷಾತೀತವಾಗಿ ಕೆಲಸವನ್ನು ಮಾಡುತ್ತೀರಿ. ಇನ್ನು ಉಳಿದ ಅವಧಿಗೂ ಕೂಡ ತಾವು ಮಂತ್ರಿಯಾಗದೇ ಅಧ್ಯಕ್ಷರಾಗಿಯೇ ಕೆಲಸವನ್ನು ಮಾಡಬೇಕೆಂದು ನಿಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ತಾವು ಕಡೆಯದಾಗಿ ಮಾತನಾಡಿ.

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ನನಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :- ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಕೇವಲ ನಾನು

ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟಂತೆ 2-3 ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ನನ್ನ ಮತಕ್ಷೇತ್ರದಲ್ಲಿ ಸುಮಾರು 1,000 ಎಕರೆ ತೊಗರಿಬೇಳೆ ಗೊಡ್ಡ ರೋಗದಿಂದ ಹಾಳಾಗಿದೆ. ಅದನ್ನು ನಾನು ಸರ್ಕಾರಕ್ಕೆ ಗಮನಸೆಳೆಯುವ ಸೂಚನೆಯಲ್ಲಿ ಹಾಕಿದ್ದೆ. ಅದು reach ಆಗಲಿಲ್ಲ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಯ ರೈತರಿಗೆ ಪರಿಹಾರವನ್ನು ಕೊಡುವಂಥದ್ದನ್ನು ಮಾಡಬೇಕು. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಇರತಕ್ಕಂಥ ಒಂದೇ ಒಂದು ಉದ್ಯಮ ಏನೆಂದರೆ, ಅದು ಷಹಬಾದ್ ಸ್ಟೋನ್, ಅದಕ್ಕೆ ತಾವು royalty ನ್ನು 80 ರೂ. ಗಳಿಗೆ fix ಮಾಡಿದ್ದೀರಿ. ಇದರ ಬಗ್ಗೆ ನಾನು ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಾ ಜಿಲ್ಲೆಯ ಸೇಡಂಗೆ ಬಂದಾಗ ಈ ಬಗ್ಗೆ ನಾನು ಅವರಿಗೆ ತಿಳಿಸಿದ್ದೇನೆ. ಪಕ್ಕದಲ್ಲಿ ತಾಂಡೂರು ಇದೆ, ತಾಂಡೂರು ಬ್ಲೂ ಎನ್ನುವುದು ಬಹಳ ವಿಶೇಷವಾದಂತಹ ಕಲ್ಲು. Tandur Blue is the best quality. ಅವರು ಅದರಲ್ಲಿ 40 ರೂಪಾಯಿಗಳ royalty ಯನ್ನು fix ಮಾಡಿದ್ದಾರೆ. ನಮ್ಮ ಸೇಡಂ ಪಕ್ಕದಲ್ಲಿ ತಾಂಡೂರು ಇದೆ. ಅವರು 40 ರೂಪಾಯಿಗಳನ್ನು fix ಮಾಡಿದಾಗ ನಾವು 80 ರೂಪಾಯಿಗಳನ್ನು fix ಮಾಡಿದರೆ ಅಲ್ಲಿ ಮಾರಾಟವಾಗುವುದಿಲ್ಲ. ನಮ್ಮ ಭಾಗದ ಜನರಿಗೆ ಅನ್ಯಾಯವಾಗುತ್ತಿದೆ. ಅದಕ್ಕಾಗಿ ಆ royaltyಯನ್ನು ನೀವು 30 ರೂಪಾಯಿಗಳಿಗೆ ಇಳಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ಮಾನ್ಯ ಶಿಕ್ಷಣ ಸಚಿವರು ಈ ಕಡೆಗೆ ಗಮನವನ್ನು ಕೊಡಬೇಕು. ಅಲ್ಲಿ ಏನಾಗಿದೆ ಎಂದರೆ ಇಡೀ ನಮ್ಮ ರಾಷ್ಟ್ರಕೂಟಕ್ಕೆ ರಾಜಧಾನಿಯಾಗಿರುವಂತಹ ಮಾನ್ಯಖೇತಾ (ಮಳಖೇಡ್) ವನ್ನು ನಿಮ್ಮ 8 ನೇ ತರಗತಿಯ ಪುಸ್ತಕದಲ್ಲಿ ಆಂಧ್ರದಲ್ಲಿ ಇದೆ ಎಂದು ತೋರಿಸಿದ್ದಾರೆ. ಮಾನ್ಯಖೇತಾದು ವಿಶೇಷತೆ ಏನೇಂದರೆ, ಕನ್ನಡದ ಮೊದಲ ಕೃತಿ ಕವಿರಾಜಮಾರ್ಗ ಸೃಷ್ಟಿಯಾಗಿರುವುದು ಮಳಖೇಡದಲ್ಲಿ, ಅದನ್ನು ನೀವು ಆಂಧ್ರದಲ್ಲಿ ತೋರಿಸಿದರೆ ಹೇಗೆ? ಡಾ॥ ನಂಜುಂಡಪ್ಪ ವರದಿಯಲ್ಲಿ 2,570 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ಕೇವಲ 800 ಕೋಟಿ ರೂಪಾಯಿಗಳು ಖರ್ಚಾದರೂ ಕೂಡ ಅದು ಕೇವಲ ಪೆಂಡಿಂಗ್ ಬಿಲ್ಸ್ ಎಂದು ಪೇಮೆಂಟ್ ಮಾಡಿದ್ದಾರೆ. ಅದಕ್ಕೆ ಮುಖ್ಯಮಂತ್ರಿಗಳಿಗೆ ಸಲಹೆ ಕೊಡುವುದೇನೆಂದರೆ, ಮುಂದಿನ ಸಾರಿ ಡಾ॥ ನಂಜುಂಡಪ್ಪ ವರದಿಗೆ ಹಣವನ್ನು ಕೊಡುವಾಗ ನೀವು ಏನು ಸಮಿತಿಯನ್ನು ಮಾಡಿದ್ದೀರಿ, ಆ ಸಮಿತಿ ಮತ್ತು ಶಾಸಕರ ಒಂದು ಸಲಹೆಯನ್ನು

ಪಡೆಯಬೇಕು. ಯಾವ ಯಾವ ಇಲಾಖೆಗಳಿಗೆ ಎಷ್ಟೆಷ್ಟು ಹಣವನ್ನು ಕೊಡಬೇಕು ಎಂದು ನೀವು ಅವರಿಗೆ direction ನ್ನು ಕೊಡಬೇಕು. ತಾವು action plan ಮಾಡುವಾಗ ಆ ಸಮಿತಿಯವರಿಗೆ ಮತ್ತು ಶಾಸಕರಿಗೆ ಕೇಳಿ ಮಾಡಬೇಕು.

ಅಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು. There is no end at all. ಅದನ್ನು ಇನ್ನು ಒಂದು ತಾಸು ಆದರೂ ಕೂಡ ಮುಗಿಯುವುದಿಲ್ಲ. ಎಲ್ಲರೂ ಕೂಡ ಒಂದೊಂದಾಗಿ ಮಾತನಾಡಿದ್ದೀರಿ. ಸಾಕು, Please.

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು :- ಮಾನ್ಯ ನರೇಂದ್ರಬಾಬು, ಮತನಾಡುವುದು ಏನಿದೆ?

ಡಾ॥ ಬಿ.ಎಸ್. ಯಡಿಯೂರಪ್ಪ :- ಆಮೇಲೆ ಏನಾದರೂ ಇದ್ದರೆ ತಾವು ಬರೆದುಕೊಡಿ. ಅದನ್ನು ಮಾಡಿಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು) :- ಮಾನ್ಯ ಮುಖ್ಯಮಂತ್ರಿಗಳೆ, ಒಂದು ನಿಮಿಷ, ನಾನು ಮಾತನಾಡುತ್ತೇನೆ.

ಶ್ರೀ ಎ.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡ ಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಪಾಟೀಲ್‌ರವರೆ ನಿಮ್ಮದು ಸಾಕಷ್ಟು ಚರ್ಚೆಯಾಗಿದೆ. ತಾವು ಕುಳಿತುಕೊಳ್ಳಿ.

ಅಧ್ಯಕ್ಷರು :- ಎಷ್ಟು ಸಾರಿ ಮಾತನಾಡುತ್ತೀರಿ? ಪಾಟೀಲ್‌ರವರು, ತಾವು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಶ್ರೀ ಸಂಪಂಗಿ ಹಾಗೂ ಶ್ರೀ ನೆ.ಲ. ನರೇಂದ್ರಬಾಬುರವರಿಗೆ ಮಾತನಾಡುವುದಕ್ಕೆ ತಾವು ಎರಡೆರಡು ನಿಮಿಷ ಅವಕಾಶವನ್ನು ಮಾಡಿಕೊಡಬೇಕು. ಏಕೆಂದರೆ ಅವರುಗಳು ಅಲ್ಲಿಂದ ಬಂದು ಪಾಪ ಮಾತನಾಡಲಿಲ್ಲವೆಂದರೆ ಬೇಸರವಾಗುತ್ತದೆ. ಅವರುಗಳಿಗೆ ಎರಡು ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು :- ಅವರಿಬ್ಬರಿಗೆ ಅವಕಾಶವನ್ನು ಕೊಡಬೇಕಾಗಿದೆ. ಮಾನ್ಯ ನರೇಂದ್ರಬಾಬುರವರೆ, ತಾವು ಮಾತನಾಡಿ.

ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳು. ತಾವು ಸದಾಶಿವಶೆಟ್ಟಿ ಅವರಿಂದ ಪ್ರೇರಿತರಾಗಿ ಎಂದು ಬರದಾಗ ಅದರಲ್ಲಿ ಹಲವಾರು ಅಂಶಗಳನ್ನು ಈ ಒಂದು ಸದನದಲ್ಲಿ ಮಾತನಾಡಬೇಕು, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು ಎಂದು ಪ್ರಯತ್ನ ಮಾಡಿದೆ, ಆದರೆ ಅದು ಆಗಲಿಲ್ಲ. ಆದರೆ ನಾನು ಒಂದನ್ನು ಹೇಳುವುದಕ್ಕೆ ಬಯಸುತ್ತೇನೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿರುವಂತಹ ಸುಮಾರು 93 ವರ್ಷಗಳ ಇತಿಹಾಸ ಇರುವಂತಹ ಸ್ವಾತಂತ್ರ್ಯಪೂರ್ವದ Karnataka Soaps & Detergents ಕಾರ್ಖಾನೆ ಏನಿದೆ, ಅದನ್ನು ಸ್ಥಳಾಂತರವನ್ನು ಮಾಡುವಂತಹ ನೆಪದಲ್ಲಿ ಅದನು ನಾಶಮಾಡಿ ಇಮಾಮಿ ಎನ್ನುವಂತಹ ಖಾಸಗಿ ಸಂಸ್ಥೆಗೆ ಕೊಡುವಂತಹ ಹುನ್ನಾರ ಮಾಡುವ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಬಾರದು. ಇದರ ಬಗ್ಗೆ ತಮ್ಮ ಗಮನಕ್ಕೆ ಬಂದಿಲ್ಲವೆಂದು ಮಾನ್ಯ ಸಚಿವರು ಹೇಳಿದರು. Soap Factory Advertisement 7-01-2009 ರಲ್ಲಿ ಕೊಟ್ಟಿದ್ದಾರೆ. Notice Inviting the globle tender for supply erection and Commissioning of manufacturing facilities for toilet soap, detergents and cosmetics products ಎಂದು ಹೇಳಿ ದಯವಿಟ್ಟು ಏಕೆ ಈ ರೀತಿ? ಅಲ್ಲಿನ ಶಾಸಕರು ಮತ್ತು ಸಂಸದರನ್ನು ಕರೆದು ಸಭೆಯನ್ನು ಮಾಡುತ್ತೇವೆ, ಕಾರ್ಮಿಕ ಮುಖಂಡರನ್ನು ಕರೆಯುತ್ತೇವೆ ಎಂದು ಮಾನ್ಯ ಸಚಿವರು ಹೇಳಿದರು. ದಯವಿಟ್ಟು ಈ soap ಕಾರ್ಖಾನೆಯು ನಾಶವಾಗುವುದಕ್ಕೆ ಬಿಡಬೇಡಿ. ಶಿಂಷಾ ವಿದ್ಯುತ್ ಉತ್ಪಾದನೆಯ ಘಟಕ ಆಗಿ 100 ವರ್ಷಗಳಾಯಿತು. 100 ವರ್ಷಗಳಾಗಿರುವುದಕ್ಕೆ ಅದರ ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಬೆಳಗಾಂನಲ್ಲಿ ಶಿವಾಜಿ ಕುಗಾಮಿಕರ್ ಎಂದು ಒಬ್ಬ ಪರಿಸರವಾದಿ ಮತ್ತು ಸುಮಾರು 50,000 ಮರಗಳನ್ನು ನೆಟ್ಟಿರುವಂತಹ ಒಬ್ಬ ಹಿರಿಯ ರೈತರು ಬಂದು ನನ್ನನ್ನು ಕೇಳಿಕೊಂಡರು. ಬಡರೈತರು ಇರತಕ್ಕಂತಹ ಬೊಂಬರ್ಗ, ಗೊಗ್ಗೆರನಹಟ್ಟಿ, ಹೊನಗ, ಬೂಟರಾಮನಹಟ್ಟಿ, ಲ್ಯಾಂಡ್‌ಗಳನ್ನು ದಯವಿಟ್ಟು

farmerಗಳಿಂದ ತೆಗೆದುಕೊಂಡು 500 ಎಕರೆಗಳನ್ನು ಕೆಐಡಿಬಿಯವರು ಅವರ ಬಾಳಿನಲ್ಲಿ ಆಟವನ್ನು ಆಡುತ್ತಿದ್ದಾರೆ. ಇದರಿಂದಾಗಿ ನಾವುಗಳು ಕೆಲಸಗಳನ್ನು ಕಳೆದುಕೊಳ್ಳುತ್ತೇವೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸದನದಲ್ಲಿ ತಿಳಿಸಿ ಎಂದು ಒಬ್ಬ ಪರಿಸರವಾದಿಯವರು ಬಂದು ನನ್ನನ್ನು ಕೇಳಿಕೊಂಡರು. ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ. ಪಶ್ಚಿಮಘಟ್ಟದಲ್ಲಿರತಕ್ಕಂತಹ charla expands ಎಂದು ಏನು ಇದೆ, ಅಲ್ಲಿನ ಒಂದು western ghats ನಲ್ಲಿ sponge ಕಬ್ಬಿಣದ ಒಂದು ಕಾರ್ಖಾನೆ ಏನು ಇದೆ, ಅದರಿಂದ ಪರಿಸರ ಮಾಲಿನ್ಯವಾಗುತ್ತಿದೆ. ಅದನ್ನು ಬಿಡುಗಡೆ ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಅಲ್ಲಿರುವಂತಹ ಹಣಬರು, ಒಬಿಸಿ, ಬೇಡರು, ಮತ್ತು ಬಡರೈತರಿಗೆ ದಯವಿಟ್ಟು ಅವರುಗಳು ಬೀದಿಪಾಲಾಗುವುದನ್ನು ಮಾಡಬಾರದೆಂದು ವಿನಂತಿಯನ್ನು ಮಾಡುತ್ತೇನೆ. ದೇಹದ ಸಂಪೂರ್ಣ ಭಾಗ ಸರಿಯಾಗಿದ್ದರೆ ಮಾತ್ರ ಆರೋಗ್ಯವಾಗಿ ರುತ್ತದೆ. ಹಾಗೆಯೇ ಈ ರಾಜ್ಯದ 224 ವಿಧಾನ ಸಭೆಯ ಕ್ಷೇತ್ರಗಳೂ ಸದಹ ಸಮಗ್ರವಾಗಿ ಅಭಿವೃದ್ಧಿಯಾಗಬೇಕಾದರೆ equitable opportunity, equitable grants ನ್ನು ಕೊಡಬೇಕು ಆರ್ಥಿಕ ದರ್ಪಣ ಎಂದು ಹೇಳಿ 224 ಕ್ಷೇತ್ರಗಳಿಂದ ಎಷ್ಟು ರೆವಿನ್ಯೂ ಬಂತು? ಎಷ್ಟು receipt ಆಯಿತು? planning ಯಾವುದು? Non-planning ಯಾವುದು? ಈ ಬಗ್ಗೆ ಮುಂದಿನ ಅಧಿವೇಶನದಲ್ಲಿ ಮಾಹಿತಿಯನ್ನು ಕೊಡಿ. ಆಗ ನಮಗೆ ಈ ಬಗ್ಗೆ ಗೊತ್ತಾಗುತ್ತದೆ. ಶಾಸಕರಿಗೆ ತಾರತಮ್ಯ ಏನಾಗಿದೆ ಎಂಬುದು ಗೊತ್ತಾಗುತ್ತದೆ. ಬಹುಶಃ ನಾವು ಗೆದ್ದು ಬಂದಾಗ ಯಾರೋ ಮಾಡಿದ ತಪ್ಪಿಗೆ ನಮ್ಮನ್ನು ಏತಕ್ಕಾಗಿ ಬಲಿಪಶು ಮಾಡುತ್ತೀರಿ? ಈ ಒಂದು ತಾರತಮ್ಯವನ್ನು ಮಾಡಬಾರದು ಏಕೆಂದರೆ ನಾಯಕರಾಗಿ ಬಹಳಷ್ಟು ಕಾಲ ಕೆಲಸ ಮಾಡಿರುವುದನ್ನು ನೋಡಿದ್ದೇನೆ. ನಾನು ಮಾನ್ಯ ಜೆ.ಹೆಚ್. ಪಟೇಲ್‌ರವರನ್ನೂ ಸಹ ನೆನಪಿಸಿಕೊಳ್ಳುತ್ತೇನೆ. ಅವರು ಯಾರಿಗೂ ಕೂಡ ತಾರತಮ್ಯವನ್ನು ಮಾಡಲಿಲ್ಲ. ನೀವು ಮಾಡುವುದಿಲ್ಲ. ದಯವಿಟ್ಟು In-cahrge Minister, District Minister ಯಾರೇ ಒತ್ತಡವನ್ನು ಮಾಡಿದರೂ ಕೂಡ ಅದಕ್ಕೆ ತಾವು ಮಣಿಯಬಾರದು. ಒಬ್ಬ ಶಾಸಕನಾಗಿ ಹೇಳುತ್ತೇನೆ. ಡಾ॥ ರಾಜ್‌ಕುಮಾರ್ ಸ್ಮಾರಕದಲ್ಲೂ ಆ ರೀತಿಯಾದ ತಾರತಮ್ಯವಾಯಿತು. ಆ ಅನ್ಯಾಯವನ್ನು ನಾವು ಸರಿಪಡಿಸಬೇಕು. ಅಲ್ಲಿನ ಯಾರೇ ಶಾಸಕರು ಇರಬಹುದು, ನರೇಂದ್ರಬಾಬು ಇರಬಹುದು, ಆ ಒಂದು ಸಮಿತಿಯಲ್ಲಿ ಸ್ಥಳೀಯ ಶಾಸಕರು

ಇರಬೇಕು. ಮೊನ್ನೆನೂ ಒಂದು ಗುದ್ದಲಿ ಪೂಜೆಯನ್ನು ಮಾಡಿದ್ದಾರೆ. 8 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಿದಾಗಲೂ ಸಹ ಅಲ್ಲಿಯ ಸ್ಥಳೀಯ ಶಾಸಕರಿಗೆ ತಿಳಿಸುವಂತಹ ಸೌಜನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ಇಲ್ಲ, ಪಿಡಬ್ಲ್ಯೂಡಿ ಇಲಾಖೆಯವರಿಗೂ ಇಲ್ಲ. ದಯವಿಟ್ಟು ಈ ತಾರತಮ್ಯವನ್ನು ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಬಾರದೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಂಡು, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ನಾನು ಕೃತಜ್ಞತೆಯನ್ನು ಹೇಳುತ್ತೇನೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, ಡಾ॥ ನಂಜುಂಡಪ್ಪ ವರದಿಯ ಪ್ರಕಾರವಾಗಿ ಅತಿ ಹಿಂದುಳಿದ ಜಿಲ್ಲೆಗಳಿಗೆ ಅದರಲ್ಲಿ ವಿಶೇಷವಾಗಿ ನೀವು ಅನುದಾನವನ್ನು ತಾವು ಕೊಡುತ್ತಿದ್ದೀರಿ. ಆದರೆ ಅದು ಅತಿ ಹಿಂದುಳಿದ ಪ್ರದೇಶವೆಂದು ತಮಗೂ ಕೂಡ ಗೊತ್ತಿದೆ. ಈಗ ಆ ಪ್ರದೇಶದಲ್ಲಿ ಬಿಪಿಎಲ್ ಕಾರ್ಡ್‌ನ್ನು ಪಡೆಯುವಂತಹವರಿಗೆ 48. ರೂಪಾಯಿಗಳನ್ನು ಕೊಟ್ಟು ಫೋಟೋವನ್ನು ತೆಗೆಸಿ ಎಂದು ತಾವು ಒಂದು ಕಡೆ ಹೇಳುತ್ತೀರಿ. ಆಮೇಲೆ 20. ರೂಪಾಯಿಗಳ ಛಾಪಾ ಕಾಗದವನ್ನು ತನ್ನಿ ಎಂದು ಹೇಳುತ್ತೀರಿ, ಆತನ ಹತ್ತಿರ ಹಣ ಎಲ್ಲಿ ಇರುತ್ತದೆ? ಅತಿ ಹಿಂದುಳಿದ ಪ್ರದೇಶಗಳಲ್ಲಿ ಹೆಚ್ಚಾಗಿ ಕೂಲಿ ಕಾರ್ಮಿಕರು ಇದ್ದಾರೆಂದು ತಾವೇ ಗುರ್ತಿಸಿದ್ದೀರಿ. ಅವರಿಂದ 48 ರೂ.ಗಳನ್ನು ವಸೂಲಿ ಮಾಡುವುದನ್ನು ಮತ್ತು 20 ರೂ.ಗಳ ಛಾಪಾ ಕಾಗದವನ್ನು ವಸೂಲಿ ಮಾಡುವುದನ್ನು ದಯವಿಟ್ಟು ಸರ್ಕಾರವೇ ಭರ್ತಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಪರಗೋಡು ಎಂಬ ದೊಡ್ಡ ಬ್ಯಾರೇಜ್‌ನ್ನು ನಾವು ಕಟ್ಟಿದ್ದೇವೆ. ಅದು ರಾಷ್ಟ್ರದಲ್ಲಿ ದೊಡ್ಡ ವ್ಯಾಜ್ಯವಾಯಿತು. ಅಂತಹ ದೊಡ್ಡ ವ್ಯಾಜ್ಯವಾದಂತಹ ಕುಡಿಯುವ ನೀರಿನ ವ್ಯವಸ್ಥೆ ಇರುವ ಕಡೆ ಅಣೆಕಟ್ಟನ್ನು ಇವತ್ತು ರಕ್ಷಣೆ ಮಾಡುವ ಬಗ್ಗೆ ಅಲ್ಲಿಗೆ ಯಾರೂ ಬಂದಿರುವುದಿಲ್ಲ. Karnataka Urban Water Supply ನವರು ಇವತ್ತು ಅದನ್ನು ಅಲ್ಲಿ ಕಟ್ಟಿಬಿಟ್ಟು ಹೋದರು. ಅಲ್ಲಿ ಪಾಪ ಯಾರಾದರೂ ಮಕ್ಕಳು ಈಜಾಡಲು ಹೋದಾಗ ಅಲ್ಲಿ ನೀರಿನಲ್ಲಿ ಬಿದ್ದು ಸತ್ತಿದ್ದಾರೆ. ಅಲ್ಲಿ ಯಾವುದೇ ವ್ಯವಸ್ಥೆಗಳು ಇರುವುದಿಲ್ಲ. ಇವತ್ತು ಅಲ್ಲಿ ಆಂಧ್ರಪ್ರದೇಶದವರು ಅದರ ಮೇಲೆ ಒಂದು threat ಮಾಡಿದರು. ಅಲ್ಲಿ ನೀವು ಅಣೆಕಟ್ಟನ್ನು ಕಟ್ಟಬೇಡಿ, ನೀರನ್ನು ತಡೆಯಬೇಡಿ ಎಂದು ದೊಡ್ಡ ಗಲಾಟೆಗಳು ಆಯಿತು. ಇವತ್ತು ಅಲ್ಲಿ ಅಣೆಕಟ್ಟು ನಿರ್ಮಾಣವಾಗಿದೆ,

ಇವತ್ತು ಅಲ್ಲಿ ಬಂದೋಬಸ್ತು ಮಾಡುವಂತಹ ಕಾರ್ಯಕ್ರಮವನ್ನು ಯಾರೂ ಕೂಡ ಮಾಡಿರುವುದಿಲ್ಲ. ಇವತ್ತು ಅದನ್ನು ಹಾಗೆಯೇ ಬಿಟ್ಟಿದ್ದಾರೆ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತತ್‌ಕ್ಷಣ ಗಮನಹರಿಸಬೇಕು. ಇನ್ನು ಮೂರನೇಯದಾಗಿ ಹೇಳುವುದಾದರೆ ಸರ್.ಎಂ. ವಿಶ್ವೇಶ್ವರಯ್ಯನವರ ಮೇಲೆ ತಮ್ಮೆಲ್ಲರಿಗೂ ಕೂಡ ಗೌರವವಿದೆ, ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರು ಅವರ ಬಗ್ಗೆ ಹೇಳುವುದಾದರೆ..........

ಅಧ್ಯಕ್ಷರು :- ಆ ಬಗ್ಗೆ ತಾವು ಈಗ ಏತಕ್ಕೆ ಹೇಳುತ್ತಿದ್ದೀರಿ?

ಶ್ರೀ ಎನ್. ಸಂಪಂಗಿ :- ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ಅದಕ್ಕಾಗಿ ನಾನು ಅವರನ್ನು ನೇರವಾಗಿ ಕೇಳುತ್ತೇನೆ. ಇವತ್ತು ಅಲ್ಲಿ ವ್ಯವಸಾಯ ಮತ್ತು ಕುಡಿಯುವುದಕ್ಕೆ ನೀರನ್ನು ಒದಗಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುವ ನೀರನ್ನು ಚಿಕ್ಕಬಳ್ಳಾಪುರಕ್ಕೆ ಕೊಡಲು ಸಾಧ್ಯವಿಲ್ಲವೇ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು :- ತಾವು ಬೇಗನೆ ಮುಗಿಸಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ.

ಡಾ|| ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕ ಮಿತ್ರರುಗಳು ಅವರವರ ಕ್ಷೇತ್ರ ಮತ್ತು ಜಿಲ್ಲೆಗೆ ಸಂಬಂಧಪಟ್ಟಂತೆ ಅನೇಕ ಪ್ರಮುಖ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಖಂಡಿತವಾಗಿಯೂ ಅದರಲ್ಲಿ ಯಾವುದು ಸಾಧ್ಯವಿದೆಯೋ ಅದರ ಬಗ್ಗೆ ನಾನು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಪ್ರಾಮಾಣಿಕವಾಗಿ ನಿಮಗೆ ಭರವಸೆಯನ್ನು ಕೊಡುತ್ತೇನೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಉದಾ: ಬೀದರ್ ಜಿಲ್ಲೆ, ಬೀದರ್ ನಗರಕ್ಕೆ ಸುಮಾರು 135 ಕೋಟಿ ರೂಪಾಯಿಗಳ ವಿಶೇಷ ಅನುದಾನವು ಸಿಕ್ಕಿದೆ. ನಾನು ನಿಮಗೆ ಇವತ್ತು ಹೇಳುತ್ತೇನೆ, ಇನ್ನು ಎರಡು ವರ್ಷ ಬಿಟ್ಟು ಬೀದರ್ ನಗರಕ್ಕೆ ಬಂದರೆ, ಆ ಬೀದರ್ ನಗರದ ದೃಶ್ಯವೇ ಬದಲಾವಣೆಯಾಗುತ್ತದೆ. ಯಡಿಯೂರಪ್ಪನವರೇ, ಇಡೀ ರಾಜ್ಯದಲ್ಲಿ ಸಾಕಷ್ಟು ಬದಲಾವಣೆಯಾಗಿದೆ ಎಂದು ನೀವು ಹೇಳುವ ರೀತಿಯಲ್ಲಿ day & night ಜಿಲ್ಲಾ ಆಡಳಿತವು ಅಲ್ಲಿ ಕೆಲಸವನ್ನು ಮಾಡುತ್ತಿದೆ. ಅಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿ ಬಸವಕಲ್ಯಾಣದ ಅಭಿವೃದ್ಧಿ ಮಾಡುತ್ತಿದ್ದಾರೆ. ಗುಲ್ಬರ್ಗಾದಲ್ಲಿ ಸಚಿವ ಸಂಪುಟದ ಸಭೆಯನ್ನು ಕರೆದಾಗ, ಕೆಲವು ಪ್ರಮುಖ

ನಿರ್ಧಾರಗಳನ್ನು ತೆಗೆದುಕೊಂಡು ಅದನ್ನು implement ಮಾಡುವುದಕ್ಕೆ ಹೊರಟಿದ್ದೇವೆ. ಇನ್ನು ಎರಡನೆಯದಾಗಿ, ಪ್ರತಿ ಕಾರ್ಪೋರೇಷನ್‌ಗೆ ನಾವು ನೂರು ಕೋಟಿ ರೂಪಾಯಿಗಳ ಕೆಲಸದ ಒಂದು ಪ್ಲಾನ್ ಮಾಡಿಸುತ್ತದ್ದೇವೆ. ನಾವು 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎಂದು ಹೇಳಿದ್ದೇವೆ. ಅದು ಕಾರ್ಪೋರೇಷನ್‌ಗೆ ಸಂಬಂಧವಿಲ್ಲ. ನೇರವಾಗಿ ದುಡ್ಡು ಕೊಡುವಂತಹದ್ದು, ಬಹುಶಃ ಈ ಬಗ್ಗೆ ನಮ್ಮ ಪ್ರತಿಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ experts ನ್ನು ಕರೆಸಿ ಒಂದು ನಾಲ್ಕು ವರ್ಷಕ್ಕೆ ಮಹಾನಗರಸಭೆಗೆ ಏನಾಗಬೇಕೆಂದು Blue Print ನ್ನು ತಯಾರು ಮಾಡಿ, ಈ Estimate plan ಇದರಲ್ಲಿಯೇ ಆರು ತಿಂಗಳು ವರ್ಷಗಟ್ಟಲೆ ಟೈಮ್ ಕಳೆಯುವುದನ್ನು ಬಿಟ್ಟು, ತಕ್ಷಣವೇ ಆ ಕೆಲಸಗಳು ಪ್ರಾರಂಭವಾಗಬೇಕೆಂಬ ಬಗ್ಗೆ ನಾನು ಯೋಚನೆ ಮಾಡುತ್ತಿದ್ದೇನೆ. ಕಾರ್ಪೋರೇಷನ್‌ಗಳ ಅಭಿವೃದ್ಧಿಗೆ ಏನು ಬೇಕು ಅದರ ಬಗ್ಗೆ ನಾನು ಯೋಚನೆ ಮಾಡುತ್ತೇನೆಂದು ತಮಗೆ ಭರವಸೆಯನ್ನು ಕೊಡುತ್ತೇನೆ. ಗುಲ್ಬರ್ಗಾದಲ್ಲಿ ಸಿಇಟಿ ಕೌನ್ಸಿಲಿಂಗ್ ಮಾಡುವುದಕ್ಕೋಸ್ಕರ ಈ ವರ್ಷವೇ ಅಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಹೈದರಾಬಾದ್-ಕರ್ನಾಟಕಕ್ಕೆ ಇನ್ನೂ ಹೆಚ್ಚುವರಿಯಾಗಿ, ಸುವರ್ಣ ಗ್ರಾಮಗಳನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೇವೆ. ಅದಕ್ಕೆ ಐಡೆಂಟಿಫೈ ಮಾಡಿದ್ದೇವೆ. ನೀವು ಆ ಬಗ್ಗೆ name ನ್ನು ಕೊಟ್ಟಿದ್ದೀರಿ. ಆ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೇವೆ. ರಾಯಚೂರಿಗೆ ಏನು ಸ್ವಾಮಿ ಕಡಿಮೆ ಮಾಡಿದ್ದೇವೆ? ಕೃಷಿ ವಿಶ್ವವಿದ್ಯಾಲಯಕ್ಕೆ ಚಾಲನೆಯನ್ನು ನೀಡಿದ್ದೇವೆ. ರಾಯಚೂರು Air strip ಗೆ ಟೆಂಡರ್‌ನ್ನು ಈಗಾಗಲೇ ಕರೆದಿದ್ದೇವೆ. ರಾಯಚೂರಿಗೆ ಫ್ಲೋರೈಡ್ ಬಂದಿದೆ. ಅಲ್ಲಿ ಶುದ್ಧ ನೀರನ್ನು ಕೊಡುವಂತಹ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಗಡಿ ಪ್ರದೇಶಗಳ ಅಭಿವೃದ್ಧಿ ಪ್ರಾಧಿಕಾರ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆಗೂ ಆ ಬಗ್ಗೆ ನಾವು ಗಮನವನ್ನು ಕೊಡುತ್ತಿದ್ದೇವೆ. ಈ ಮೆಹಬೂಬ್ ನಗರ - ರಾಯಚೂರು-ಮುನಿರಾಬಾದ್ ರೈಲ್ವೆ ಯೋಜನೆಗೆ 50% ಹಣವನ್ನು ನಾವು ಕೊಡುತ್ತೇವೆಂದು ಈಗ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ರೈಲ್ವೆ ಯೋಜನೆಗಾಗಿ 50% ಹಣವನ್ನು ಭರಿಸುವುದಕ್ಕೆ ಸಿದ್ಧರಿದ್ದೇವೆ. ಕೊಪ್ಪಳದಲ್ಲಿ 10,000 ಎಕರೆ ಉಕ್ಕು ಸಂಕೀರ್ಣ ಅಭಿವೃದ್ಧಿ ಪಡಿಸುತ್ತೇವೆಂದು ತೀರ್ಮಾನವನ್ನು ಈಗಾಗಲೇ ನಾವು ತೆಗೆದುಕೊಂಡಿದ್ದೇವೆ. ಆಲಮಟ್ಟಿ-ಕೊಪ್ಪಳ ರೈಲ್ವೆ ಲೈನ್‌ಗೆ 50% ವೆಚ್ಚವನ್ನು ಭರಿಸುತ್ತೇವೆಂದು ಹೇಳಿದ್ದೇವೆ. ಕೇಂದ್ರ ಸರ್ಕಾರವು ಈ ಯೋಜನೆಯನ್ನು ಮಂಜೂರು ಮಾಡಬೇಕಾಗಿದೆ.

ಆ ದಿಕ್ಕಿನಲ್ಲಿ ನಮ್ಮಿಂದ ಏನು ಸಾಧ್ಯವಿದೆಯೋ ಅದನ್ನು ನಾವು ಮಾಡುತ್ತೇವೆ. ಇನ್ನು ತುಂಗಭದ್ರ ನಾಲೆ ಆಧುನೀಕರಣಕ್ಕೆ 300 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಅಲ್ಲಿ ಕೆಲಸ ಪ್ರಾರಂಭವಾಗಿದೆ. ಒಟ್ಟು 1200 ಕೋಟಿ ರೂಪಾಯಿಗಳ ಆಧುನೀಕರಣಕ್ಕೆ ವೆಚ್ಚ ಮಾಡುವುದಕ್ಕೆ ಹೊರಟಿದ್ದೇವೆ. ಇನ್ನು ಹಾಸನ ಜಿಲ್ಲೆಗೆ ಹಿಂದಿನ ವರ್ಷದಲ್ಲಿ ಸಾಕಷ್ಟು ಅನುದಾನವನ್ನು ಕೊಟ್ಟಿದ್ದೇವೆ. 2007-08 ರಲ್ಲಿ 156 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, ಅರಸೀಕೆರೆಗೆ ಏಕೆ ಕೊಟ್ಟಿಲ್ಲವೆಂದು ಯಾರೋ ಒಬ್ಬ ಶಾಸಕರು ಪ್ರಸ್ತಾಪ ಮಾಡಿದರು. ಏಕೆ ಕೊಟ್ಟಿಲ್ಲವೆಂದರೆ ಅಲ್ಲಿ ಬಿಜೆಪಿ ಶಾಸಕರು ಇದ್ದರು ಅದಕ್ಕೆ ಕೊಟ್ಟಿಲ್ಲ. ಆದರೆ ಈಗ ನಾವು ನಿಮಗೆ ಕೊಡುತ್ತೇನೆ. ನಿಮಗೆ ಅನ್ಯಾಯವಾಗಿದ್ದರೆ ಅದನ್ನು ನಾನು ಸರಿಪಡಿಸಿ ಅದನ್ನು ಮಾಡಿಸಿಕೊಡುತ್ತೇನೆ.

ಜಮಖಂಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಜಂಬಗಿ ಹತ್ತಿರ ಸೇತುವೆ ಅಣೆಕಟ್ಟನ್ನು ಕಟ್ಟುವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಕಾರವಾರ ಇಲ್ಲಿ 500 ಕಾಲು ಸುಂಕಗಳನ್ನು ಕಟ್ಟಲಿಕ್ಕೆ ಬಜೆಟ್ಟಿನಲ್ಲಿ ಘೋಷಣೆ ಮಾಡಿ ಹಣವನ್ನು ಬಿಡುಗಡೆ ಮಾಡಿ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತೇನಾಗಬೇಕು ಹೇಳಿ? ನಾನು ಪ್ರಯತ್ನವನ್ನು ಮಾಡುತ್ತೇನೆ. ಕೃಷ್ಣಾ ನದಿಯ ಯೋಜನೆಯಲ್ಲಿ Scheme-A and B ಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇನೇ ಗುತ್ತಿ ಬಸವಣ್ಣ, ಚಿಮ್ಮಲಗಿ, ಮುಳವಾಡ ಏತ ನೀರಾವರಿಗೆ ಈಗಾಗಲೇ ನಾವು ಕಾರ್ಯಕ್ರಮವನ್ನು ಮಾಡಿದ್ದೇವೆಂದು ನೀರಾವರಿ ಸಚಿವರು ಘೋಷಣೆಯನ್ನು ಮಾಡಿದ್ದಾರೆ. ಇನ್ನೂ ಬಹಳಷ್ಟು ಕೆಲಸಗಳು ಆಗಬೇಕಾಗಿದೆ. ನಾನು ಪ್ರತಿಯೊಂದು ಜಿಲ್ಲೆಯ ಬಗ್ಗೆ ಒಂದು ಪಟ್ಟಿಯನ್ನು ಮಾಡಿ ಅದನ್ನು ನಿಮ್ಮ ಕೈಯಲ್ಲಿಯೇ ಕೊಡುತ್ತೇನೆ. ಈ ಬಜೆಟ್ ಮಾಡುವಂಥ ಕಾಲದಲ್ಲಿ ಎಲ್ಲಿ ತಾರತಮ್ಯವಾಗಿದೆ, ಅಲ್ಲಿ ಹೆಚ್ಚು ಒತ್ತು ಕೊಟ್ಟು ಎಲ್ಲಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೂ ನಾನು ಯೋಚನೆ ಮಾಡುತ್ತೇನೆ. ಇವತ್ತು ತಾವೆಲ್ಲಾ ಶಾಸಕರು ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ. ನಮಗೇನಾಗಿದೆ ಅಂದರೆ ನನ್ನನ್ನೂ ಸೇರಿಕೊಂಡು ಇಲ್ಲಿ ಕೆಲವರು ಡಯಾಬಿಟಿಕ್ ಪೇಷೆಂಟ್ಸ್ ಇದ್ದಾರೆ. ಅದಕ್ಕೋಸ್ಕರ ಮತ್ತೊಮ್ಮೆ ಸೇರೋಣ. ಸನ್ಮಾನ್ಯ ಅಧ್ಯಕ್ಷರೆ, ಬಜೆಟ್ ಅಧಿವೇಶನ ಕೂಡ ಪ್ರಾರಂಭವಾಗುತ್ತಿದೆ. ಆ ಸಂದರ್ಭದಲ್ಲಿ ಏನೇನು ಚರ್ಚೆಯಾಗಬೇಕೋ ಅದನ್ನು ಮಾಡೋಣವೆಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೆ ಮುಖ್ಯಮಂತ್ರಿಗಳು ಸಾಕಷ್ಟು ದೀರ್ಘವಾಗಿ ಉತ್ತರವನ್ನು ತಯಾರು ಮಾಡಿಕೊಂಡು ಹೇಳಿದ್ದಾರೆ. ಅನೇಕ ಆಶ್ವಾಸನೆಗಳನ್ನು ಈ ಹಿಂದೆ ಏನು

ಕೊಟ್ಟುಕೊಂಡು ಬಂದಿದ್ದಾರೆ, ಅದೇರೀತಿಯಾಗಿ ಆಶ್ವಾಸನೆಗಳ ಸುರಿಮಳೆಯನ್ನು ಮುಂದುವರೆಸಿದ್ದಾರೆ. ಬಹುಶಃ 1200, 1300 ಆಶ್ವಾಸನೆಗಳಲ್ಲಿ ಇವು ಸೇರಿಕೊಂಡರೆ 1500-1600 ಆಶ್ವಾಸನೆಗಳಾಗುತ್ತವೆ, ಅದರಲ್ಲಿ ಎಷ್ಟು ಈಡೇರುತ್ತವೆಂಬುದನ್ನು ನಾವು ಆಮೇಲೆ ನೋಡೋಣ. ಆದರೆ ತಾವು ಈ ಭಾಗದಲ್ಲಿ ಈ ಸದನವನ್ನು ಬಹಳ ಸರಳವಾಗಿ ಮತ್ತು ವಿಶೇಷವಾಗಿ ಬಹಳ ಶಾಂತ ರೀತಿಯಿಂದ ನಡೆಸಿದ್ದೀರಿ. ಆ ರೀತಿ ನಡೆಸಲಿಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಿಶೇಷವಾಗಿ ನಾನು ಹಾರ್ದಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜೊತೆಜೊತೆಯಲ್ಲಿ ಇವತ್ತು ಯಾವ ಉದ್ದೇಶದಿಂದ ನಾವೆಲ್ಲರೂ ಕೂಡ ಇಲ್ಲಿ ಸೇರಿದ್ದೇವೆ, ನಿಜವಾಗಿಯೂ ಕೂಡ ಆ ಉದ್ದೇಶವನ್ನು ಈಡೇರಿಸಬೇಕು ಎನ್ನುವ ಪ್ರಯತ್ನ ಪ್ರಾಮಾಣಿಕವಾಗಿ ಮುಖ್ಯಮಂತ್ರಿಗಳಿಂದ ಆಗಬೇಕು. ನಾನು ಪದೇಪದೇ ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಈಗಾಗಲೇ ತಾರತಮ್ಯವಾಗಿರುವುದನ್ನು ನಾವು ಅವರ ನೋಟಿಸಿಗೆ ತಂದಿದ್ದೇವೆ. ನಾನು ಸರಿಪಡಿಸುತ್ತೇನೆಂದು ಅವರು ಹೇಳಿದ್ದಾರೆ. ಅದು ಗ್ರಾಮೀಣಾಭಿವೃದ್ಧಿಯೇ ಇರಬಹುದು, ಲೋಕೋಪಯೋಗಿ ಇಲಾಖೆ ಅಥವಾ ಮತ್ತಾವುದಾದರೂ ಇಲಾಖೆಗಳು ಇರಬಹುದು. ಅದನ್ನು ಅವರು ಸರಿಪಡಿಸುತ್ತೇವೆಂದು ಒಪ್ಪಿಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಏನು ಮುಖ್ಯಮಂತ್ರಿಗಳೇ?

ಡಾ॥ ಬಿ.ಎಸ್. ಯಡಿಯೂರಪ್ಪ :- ಆಗಬಹುದು, ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಆಗಬಹುದು ಎಂದರೆ ಅದನ್ನು ಕೃತಿಯಲ್ಲಿ ಮಾಡಬೇಕಾಗುತ್ತದೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಸರಿಪಡಿಸುತ್ತೇನೆ, ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ದಯವಿಟ್ಟು ಅದನ್ನು ಮಾಡಬೇಕು. ವಿಶೇಷವಾಗಿ ಪತ್ರಿಕೆಯುಲ್ಲಿಯೂ ಸಹ ಕೆಲವು ಸಲ ಬಂತು ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅದೇ ಧೋರಣೆಯನ್ನು ತಾಳಿದ್ದಾರೆ. ಏನು? ಸಮಯ ವ್ಯರ್ಥವಾಯಿತು. ತಮಗೆ ಗೊತ್ತಿರುವ ಹಾಗೆ ಅಧ್ಯಕ್ಷರೇ, ಮೊದಲನೇ ದಿವಸ Governor`s speech, ಎರಡನೆ ದಿವಸ obituary, ಮೂರನೆ ದಿವಸ Law and Order, ನಾಲ್ಕನೇ ದಿವಸ ತಾವು ಇದೇ ಸದನದಲ್ಲಿ Calling attentions ಮತ್ತು ಎಲ್ಲವನ್ನೂ ಕೂಡ ನಡೆಸಿದ್ದು, ಐದನೇ ದಿವಸ ಬಿಲ್ ಪಾಸ್ ಮಾಡಿಕೊಟ್ಟಿದ್ದೇವೆ. ನಿನ್ನೆ ಸಂಪೂರ್ಣ 25 Calling attentions

ಮತ್ತು ನಿಯಮ 69 ರಲ್ಲಿ ಚರ್ಚೆಯಾಗಿದೆ. ಇವತ್ತು ಕೂಡ ಮುಂಜಾನೆಯಿಂದ Governor`s speech ಆಗಿದೆ. ಎಲ್ಲಿ ಸಮಯ ವ್ಯರ್ಥವಾಯಿತು ಸ್ವಾಮಿ? ಆ ಗಣಿ ವಿಷಯ ಬಂದ ಕೂಡಲೇ ನೀವ್ಯಾಕೋ ಹಾರಾಡುತ್ತೀರಿ. ಅದು ನಿಮ್ಮಿಬ್ಬರ ಜಗಳ ತಂದು ನಮ್ಮ ಮೇಲೆ ಏಕೆ ಹಾಕುತ್ತೀರಿ? ಆ ಕಡೆ ನಮ್ಮ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ, ಈ ಕಡೆ ಕುಮಾರಸ್ವಾಮಿ ಮತ್ತು ನಮ್ಮ ರೇವಣ್ಣನವರು. ನಮಗೆ ಹೊಳೆನರಸೀಪುರ ಅಡ್ಡಬರುತ್ತದೆ ಇಲ್ಲವೇ ಶಿಕಾರಿಪುರ ಅಡ್ಡಬರುತ್ತದೆ. ಹೀಗಾಗಿ ಉಳಿದವರಿಗೆಲ್ಲಾ ಪಜೀತಿ. ಈ ಸಾರಿ ಸಮಯ ವ್ಯರ್ಥವಾಗಿಲ್ಲ. ಈ ಬಾರಿ ನಡೆದ ಅಧಿವೇಶನದಲ್ಲಿ ಸಂಪೂರ್ಣವಾಗಿ ಪ್ರತಿ ದಿವಸ 10 ಗಂಟೆ minimum ಚರ್ಚೆಯಾಗಿದೆ. ಅದಕ್ಕೆ ನೀವು ಅಭಿನಂದಿಸಬೇಕು. ಅದನ್ನು ಬಿಟ್ಟು ಯಥಾಪ್ರಕಾರ ನೀವು Opposition party ಯಲ್ಲಿದ್ದೀರಿ ಎಂದು ತಿಳಿದುಕೊಂಡ ಹಾಗೆ ಇದೆ. ನೀವು ಮುಖ್ಯಮಂತ್ರಿ ಎಂದು ತಿಳಿದುಕೊಂಡೇ ಇಲ್ಲ. ನೀವು ವಿರೋಧ ಪಕ್ಷದ ನಾಯಕರು ನೀವಾಗಿದ್ದೀರಿ. ಇನ್ನೂ ಬದಲಾವಣೆಯಾಗಿಲ್ಲ. ಏಕೆಂದರೆ ಇಷ್ಟೊಂದು ಗಂಭೀರವಾಗಿ ಈ ಆರು ದಿವಸದಲ್ಲಿ ಎಷ್ಟು ಸಾಧ್ಯವಿದೆ ಅಷ್ಟು ಚರ್ಚೆಯಾಗಿದೆ. ಧರಣಿ ಸ್ವಲ್ಪ ಹೊತ್ತು ಆಗಿರಬಹುದು, ಗಣಿ ಬಗ್ಗೆ ಚರ್ಚೆ ನಡೆದಿರಬಹುದು, Naturally ಗಡಿ ಭಾಗದಲ್ಲಿ ನಡೆದಾಗ ಆ ವಿಷಯ ಹೊರಗಡೆ ಪ್ರಸ್ತಾಪವಾದಾಗ ಲೋಕಾಯುಕ್ತರು ಪ್ರಸ್ತಾಪ ಮಾಡಿದಾಗ, ನಾವು ಪ್ರಸ್ತಾಪ ಮಾಡದೇ ಹೋದರೆ ಅದು ಲೋಪವಾಗುತ್ತದೆ. ಅದಕ್ಕೆ ಬಹಳ ಒಳ್ಳೆಯ ರೀತಿಯಿಂದ ಚರ್ಚೆಯಾಯಿತು, ಕೊನೆ ಕೊನೆಗೆ ತಾವು ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಕೊಟ್ಟಿರಿ. ನಮ್ಮ ಎ.ಎಸ್.ಪಾಟೀಲ್‌ರವರಿಗೆ ಒಂದು ಅವಕಾಶ ಕೊಡಲಿಲ್ಲ.

ಅಧ್ಯಕ್ಷರು :- ಅವರೂ ಸಹ ಮಾತನಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿಕ್ಕೆ ಅವರಿಗೆ ಅವಕಾಶ ಸಿಗದಿದ್ದರೂ ಕೂಡ clarification ನಲ್ಲಿ ಮಾತನಾಡಲಿಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೀರಿ, ಆದರೆ ಒಂದಿಬ್ಬರು, ಮೂವರಿಗೆ ಪರಿಹಾರ ಸಿಗಲಿಲ್ಲ. ನಮ್ಮ ಶ್ರೀ ಸಂಪಂಗಿ, ನಿಪ್ಪಾಣಿಯವರದು ಹಾಗೂ ನರೇಂದ್ರಬಾಬು ಅವರದು. ಅವರು ಮೂರು ವಿಷಯದ ಬಗ್ಗೆ ಕೇಳಿದರು. ಒಂದು ಏರ್‌ಪೋರ್ಟ್‌ನಲ್ಲಿ ಕುಡಿಯುವ ನೀರನ್ನು ತಂದಿದ್ದೀರಿ. ಅದನ್ನು ಚಿಕ್ಕಬಳ್ಳಾಪುರಕ್ಕೆ ಏಕೆ ಕೊಡಬಾರದು ಎಂದು ಅವರು ಕೇಳಿದರು. ಅದಕ್ಕೆ ಉತ್ತರ ಬರಲಿಲ್ಲ. ಆಮೇಲೆ ನಿಪ್ಪಾಣಿ ಮತ್ತು ಕಿತ್ತೂರನ್ನು ತಾಲ್ಲೂಕು ಮಾಡಬೇಕೆಂದು ಕೇಳಿದರು, ಅದರ ಬಗ್ಗೆ ಸ್ವಲ್ಪ ಯಾಕೋ

ಒಳಗಡೆ ಉತ್ತರವನ್ನು ನುಂಗಿಕೊಂಡರು. ಮೂರನೆಯದು ಪ್ರಕಾಶ್ ಹುಕ್ಕೇರಿಯವರು ಆ ಕಡೆ ಕುಳಿತಿದ್ದಾರೆ, ಅದೇ ನಾನು ನಿನ್ನೆ ಹೇಳಿದ್ದು, ನನಗೆ ಎಲ್ಲಾ ಕಡೆಯೂ ಅರ್ಥವಾಗಿದೆ, ಆದರೆ ಬೆಳಗಾಂ ಪಾಲಿಟಿಕ್ಸ್ ಬಗ್ಗೆ ನನಗೆ ಅರ್ಥವಾಗಿಲ್ಲ. ಅದೇನೇ ಇರಲಿ ನರೇಂದ್ರಬಾಬು ಅವರು ಹೇಳಿದಂತೆ ಅವರ ಮತಕ್ಷೇತ್ರದಲ್ಲಿ ಒಂದು ಒಳ್ಳೆಯ ಕಾರ್ಯಕ್ರಮ ನಡೆದಾಗ ಎಂ.ಎಲ್.ಎ.ಗಳ ಹೆಸರು ಹಾಕಿ, ಅವರು ಹೋಗದಿದ್ದರೆ ಅದು ಅವರ ಹಣೆಬರಹ. ಆದರೆ protocol ಅನ್ನು follow ಮಾಡಲಿಕ್ಕೆ ತಾವು ಆದೇಶ ಕೊಡಬೇಕು. ಒಳ್ಳೆಯ ರೀತಿಯಲ್ಲಿ ಈ ಸದನವನ್ನು ನಡೆಸಿದ್ದಕ್ಕಾಗಿ ಮತ್ತು ಅನೇಕ ಜನರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಅಭಿನಂದಿಸುತ್ತೇನೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೆಲಸ ಮಾಡುತ್ತಾರೋ, ಬಿಡುತ್ತಾರೋ ಗೊತ್ತಿಲ್ಲ. ಆಶ್ವಾಸನೆಗಳನ್ನು ಮಾತ್ರ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಆಶ್ವಾಸನೆಗಳನ್ನು ಎಷ್ಟರಮಟ್ಟಿಗೆ ಈಡೇರಿಸುತ್ತಾರೆಂದು ಫೆಬ್ರವರಿ ತಿಂಗಳಿನಲ್ಲಿ ಕಾದು ನೋಡೋಣ. ಅಂತಿಮವಾಗಿ ಮುಖ್ಯಮಂತ್ರಿಗಳಿಗೆ, ತಮ್ಮೆಲ್ಲರಿಗೂ ಅಭಿನಂದಿಸುತ್ತೇನೆ. ಈ ವ್ಯವಸ್ಥೆಯನ್ನು ಮಾಡಲಿಕ್ಕೆ ಸಹಕರಿಸಿರುವ ಕೆ.ಎಲ್.ಇ.ಸೊಸೈಟಿಯವರಿಗೆ ಕೂಡ ನಾನು ಅಭಿನಂದಿಸಿ, ಸಭಾಧ್ಯಕ್ಷರಿಗೂ ಕೂಡ ಇನ್ನೊಮ್ಮೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ಪ್ರಸ್ತಾವ

ಅಂಗೀಕಾರ ಪ್ರಸ್ತಾವ

ಅಧ್ಯಕ್ಷರು:- "16ನೇ ಜನವರಿ 2009 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ಧೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭಾ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಯನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ." ಎನ್ನುವ ಪ್ರಸ್ತಾವವನ್ನು ಅಂಗೀಕರಿಸುವುದು.

ಪ್ರಸ್ತಾವವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು :- ರಾಜ್ಯಪಾಲರ ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸಭೆಯ ಅನುಮತಿ ದೊರೆತಿದೆ. ವಂದನಾ ನಿರ್ಣಯವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳಹಿಸಿಕೊಡಲಾಗುವುದು.

ಇವತ್ತು ಬೆಳಗಾವಿಯ ವಿಶೇಷ ಅಧಿವೇಶನದ ಕೊನೆಯ ದಿವಸವಾಗಿದೆ. ಈ ಸಂದರ್ಭದಲ್ಲಿ ಬಹುತೇಕ ಶಾಸಕರು ಈ ಸಂದರ್ಭದಲ್ಲಿ ಹಾಜರಿದ್ದು ಬಹಳ ಕುತೂಹಲದಿಂದ ಮತ್ತು ಗಾಂಭೀರ್ಯವಾಗಿ ಚರ್ಚೆಯನ್ನು ಮಾಡಲಿಕ್ಕೆ ತಾವೆಲ್ಲ ಅವಕಾಶವನ್ನು ಕೊಟ್ಟಿದ್ದೀರಿ. ಆಡಳಿತ ಪಕ್ಷದವರಿರಬಹುದು, ವಿರೋಧ ಪಕ್ಷದವರಿರಬಹುದು, ಈ ಒಂದು ಬೆಳಗಾವಿ ಅಧಿವೇಶನ ಶಾಂತರೀತಿಯಿಂದ ನಡೆಸಿಕೊಂಡು ಹೋಗಲಿಕ್ಕೆ ತಾವೆಲ್ಲರೂ ಸಹಕಾರ ಕೊಟ್ಟಿದ್ದೀರಿ. ನಿಮಗೆಲ್ಲರಿಗೂ ಕೂಡ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ವಿಶೇಷ ಅಧಿವೇಶನವನ್ನು ನಡೆಸಲಿಕ್ಕೆ ಸಹಕಾರ ಕೊಟ್ಟ ಕೆ.ಎಲ್.ಇ.ಸೊಸೈಟಿ ಹಾಗು ಆ ಸಂಸ್ಥೆಯ ಎಲ್ಲಾ ಪ್ರಮುಖರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸಿ, ಇವತ್ತು ಈ ಸಭೆಯನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಿದ್ದೇನೆ.

(ಸದನದ ಕಾರ್ಯಕಲಾಪವು ಮಧ್ಯಾಹ್ನ 3.48 ಗಂಟೆಗೆ ಮುಕ್ತಾಯಗೊಂಡ ನಂತರ ಅಧ್ಯಕ್ಷರು ಸದನವನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಿದರು)